## ಗುರುವಾರ, ೨೪ನೇ ಜುಲೈ, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪರಿಚಯಪತ್ರಗಳ ಸಲ್ಲಿಕೆ ಮತ್ತು ದಾಖಲೆ ಪುಸ್ತಕದಲ್ಲಿ ಸಹಿ ಮಾಡುವುದು

**ಮಾನ್ಯ ಸಭಾಧ್ಯಕ್ಷರು** : ಒಬ್ಬ ಸದಸ್ಯರು ದಾಖಲೆ ಪುಸ್ತಕದಲ್ಲಿ ಸಹಿ ಮಾಡಿರುವುದಿಲ್ಲ. ಅವರು ಈಗ ಸಹಿ ಮಾಡುವರೆ?

ಈ ಕೆಳಕಂಡ ಸದಸ್ಯರು ದಾಖಲೆ ಪುಸ್ತಕದಲ್ಲಿ ಸಹಿ ಮಾಡಿದರು:

ಕನ್ವರ್ ಷಂಷೇರ್ ಜಂಗ್ (ಉಳಿಕೆ ರಾಜ್ಯಗಳ ಗುಂಪು)

### ಸಂಚಾಲಕ ಸಮಿತಿಗೆ ಸದಸ್ಯರ ಆಯ್ಕೆ

**ಮಾನ್ಯ ಸಭಾಧ್ಯಕ್ಷರು** : ಸಂಚಾಲಕ ಸಮಿತಿಗೆ ಕೆಲವು ಸದಸ್ಯರ ಆಯ್ಕೆ ಕುರಿತು ಶ್ರೀ ಸತ್ಯನಾರಾಯಣ ಸಿನ್ಹ ಅವರ ಹೆಸರಿನಲ್ಲಿ ಪ್ರಸ್ತಾವವೊಂದಿದೆ. ಅವರು ಅದನ್ನು ದಯವಿಟ್ಟು ಮಂಡಿಸುವರೆ?

**ಶ್ರೀ ಸತ್ಯನಾರಾಯಣ ಸಿನ್ಹ** (ಬಿಹಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ಪ್ರಸ್ತಾವವು ಈ ಮುಂದಿನಂತಿದೆ. :

"ಈ ಸಭೆಯು, ಸಂವಿಧಾನ ರಚನಾಸಭೆಯ ನಿಯಮಗಳು, ನಿಯಮ ೪೦ (೫)ರ ಮೇರೆಗೆ ಅಗತ್ಯಪಡಿಸಲಾಗಿರುವ ರೀತಿಯಲ್ಲಿ ಇಬ್ಬರು ಸದಸ್ಯರನ್ನು, ಸಂಚಾಲಕ ಸಮಿತಿಯ ಸದಸ್ಯರನ್ನಾಗಿ ಆಯ್ಕೆಮಾಡಬೇಕೆಂದು ನಿರ್ಣಯಿಸಿತು."

ಈ ಸದನದ ಇಬ್ಬರು ಗೌರವಾನ್ವಿತ ಸದಸ್ಯರಾದ ಮೌಲಾನಾ ಅಬುಲ್ ಕಲಾಂ ಆಜಾದ್ ಹಾಗೂ ಶ್ರೀ ಮಾನೆ ಅವರು ಸಂವಿಧಾನ ರಚನಾಸಭೆಗೆ ರಾಜಿನಾಮೆ ನೀಡಿರುತ್ತಾರೆ. ಆದುದರಿಂದ, ಕಾರ್ಯವಿಧಾನ ನಿಯಮಗಳ ಮೇರೆಗೆ, ಅವರು, ಈ ಸದನದಿಂದ ಆಯ್ಕೆಯಾಗಿದ್ದ, ಸಂಚಾಲಕ ಸಮಿತಿಯ ಸದಸ್ಯರಾಗಿರುವುದಿಲ್ಲ. ಆದುದರಿಂದ, ನಾನು ಅವರಿಂದ ತೆರವಾದ ಸ್ಥಾನಗಳನ್ನು ತುಂಬಬೇಕೆಂದು ಪ್ರಸ್ತಾವಿಸುತ್ತೇನೆ. ಯಾವ ರೀತಿಯಲ್ಲಿ ಚುನಾವಣೆಯನ್ನು ನಡೆಸಬೇಕೆಂಬುದನ್ನು ಮಾನ್ಯ ಸಭಾಧ್ಯಕ್ಷರು ನಿರ್ಣಯಿಸುವರು.

**ಮಾನ್ಯ ಸಭಾಧ್ಯಕ್ಷರು** : ಈ ನಿರ್ಣಯದ ಬಗ್ಗೆ ಯಾರಾದರೂ ಏನನ್ನಾದರೂ ಹೇಳಬಯಸುವರೆ?

**ಗೌರವಾನ್ವಿತ ಸದಸ್ಯರು** : ಇಲ್ಲ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಸಂಚಾಲಕ ಸಮಿತಿಯ ಎರಡು ತೆರವಾದ ಸ್ಥಾನಗಳಿಗೆ ನಾಮಕರಣಗಳನ್ನು ನಾಳೆ ಅಪರಾಹ್ನ ೧ ಗಂಟೆಯವರೆಗೆ ಸ್ವೀಕರಿಸಲಾಗುವುದು. ಅಗತ್ಯವಾದಲ್ಲಿ, ಚುನಾವಣೆಗಳನ್ನು ೨೬ರಂದು ಸಂಜೆ ೪.೦೦ ಗಂಟೆಗೆ ಅಧೀನ ಕಾರ್ಯದರ್ಶಿಗಳ ಕೊಠಡಿ ಸಂ.೨೫, ನೆಲಮಹಡಿ, ಪರಿಷತ್ತು ಸದನ, ಇಲ್ಲಿ

ನಡೆಸಲಾಗುವುದು. ಚುನಾವಣೆಯು, ಏಕವರ್ಗಾವಣೀಯ ಮತದ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಗನುಸಾರವಾಗಿರುವುದು.

## ಒಕ್ಕೂಟ ಸಂವಿಧಾನದ ಬಗ್ಗೆ ವರದಿ (ಮುಂದುವರಿದಿದೆ)

**ಮಾನ್ಯ ಸಭಾಧ್ಯಕ್ಷರು :** ಈಗ ನಾವು ಒಕ್ಕೂಟ ಸಂವಿಧಾನದ ಭಾಗ ೪ರ ಖಂಡ ೧ರ ಬಗ್ಗೆ ಚರ್ಚೆಯನ್ನು ಮುಂದುವರಿಸೋಣ.

**ಶ್ರೀ ಶ್ರೀಪ್ರಕಾಶ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಈ ಬೆಳಗಿನ ಕಾರ್ಯಸೂಚಿಯಲ್ಲಿದ್ದ ನನ್ನ ಪ್ರಸ್ತಾವ ಏನಾಯಿತು?

**ಮಾನ್ಯ ಸಭಾಧ್ಯಕ್ಷರು :** ಅದು ನಾಳೆಗೆ ಅಂದುಕೊಂಡಿದ್ದೇನೆ.

**ಶ್ರೀ ಶ್ರೀಪ್ರಕಾಶ :** ನನಗೆ ವಿಷಾದವೆನಿಸುತ್ತದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಂಡಿಸದೆ ಇರುವ ತಿದ್ದುಪಡಿಯೊಂದಿದೆ.

**ಮಾನ್ಯ ಸಭಾಧ್ಯಕ್ಷರು :** ಮಂಡಿಸದೆ ಇರುವ ಅನೇಕ ತಿದ್ದುಪಡಿಗಳಿವೆ. ನಾನು ಅವುಗಳಿಗೂ ಬರುತ್ತೇನೆ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ನಾನು ಕ್ರಿಯಾಲೋಪವೊಂದನ್ನು ಎತ್ತುತ್ತಿದ್ದೇನೆ. ಸಂವಿಧಾನ ರಚನಾಸಭೆಯ ಕಚೇರಿಯು ಮೂರು ಅಥವಾ ನಾಲ್ಕು ದಿನಗಳಿಗೂ ಮುನ್ನ ಸೂಚನೆ ನೀಡಲಾದ ತಿದ್ದುಪಡಿಗಳನ್ನು ಪರಿಚಾಲನೆ ಮಾಡಿಲ್ಲ. ಆದರೆ, ಆ ದಿನಾಂಕಗಳಿಗೆ ಮುಂಚಿತವಾಗಿಯೇ ನೀವು ತಿದ್ದುಪಡಿಗಳಿಗೆ ಕಾಲಮಿತಿಯನ್ನು ನಿಗದಿಮಾಡಿರುತ್ತೀರಿ. ಪ್ರಸ್ತಾವ ಮಂಡಿಸುವುದಕ್ಕೆ ಕನಿಷ್ಠ ಒಂದು ದಿನ ಮುಂಚಿತವಾಗಿ ಸೂಚನೆ ನೀಡಲಾಗುವ ತಿದ್ದುಪಡಿಗಳನ್ನು ಸಹ ಮಂಡಿಸಲು ನಮಗೆ ಅವಕಾಶ ನೀಡಲಾಗುವುದು ಎಂಬ ನಿರ್ಣಯವನ್ನು ನೀವೇ ನೀಡಿದ್ದೀರಿ. ಇಲ್ಲದಿದ್ದಲ್ಲಿ ಇಡೀ ಚರ್ಚೆಯೇ ನಿಷ್ಪ್ರಯೋಜಕವಾಗುವುದು; ಏಕೆಂದರೆ, ನಾವು ಚರ್ಚೆ ಮುಂದುವರಿಸುತ್ತಿರುವಾಗಲೇ ಕೆಲವೊಂದು ತಿದ್ದುಪಡಿಗಳು ಅಗತ್ಯವಾಗುತ್ತವೆ. ಉದಾಹರಣೆಗೆ: ನಾನು ಸೋಮವಾರ ಒಂದು ತಿದ್ದುಪಡಿಯ ಬಗ್ಗೆ ಸೂಚನೆ ನೀಡಿದ್ದೆ. ಅದು ಸ್ನೇಹಿತರ ನಡುವಣ ಚರ್ಚೆಯ ಫಲವಾಗಿದ್ದಿತು; ಅಸಮರ್ಪಕ ಕರಡು ತಯಾರಿಕೆಯಿಂದ ಈ ತಿದ್ದುಪಡಿ ಅಗತ್ಯವಾಗಿದ್ದಿತು. ಅದನ್ನು ಪರಿಚಾಲನೆಯನ್ನೇ ಮಾಡಲಾಗಿಲ್ಲ. ನಾನು ವಿಚಾರಿಸಿದಾಗ, ಎಲ್ಲ ತಿದ್ದುಪಡಿಗಳನ್ನು ಏನನ್ನೂ ಮಾಡದೆ, ಕಚೇರಿಯಲ್ಲಿ ಕಡತಕ್ಕೆ ಸೇರಿಸಲಾಗಿದೆ ಎಂದು ತಿಳಿದುಬಂದಿತು. ಇದು ಹೀಗೆ ನಡೆದರೆ, ನಮಗೆಲ್ಲ ತುಂಬ ಕಷ್ಟವಾಗುತ್ತದೆ. ಈ ವಿಷಯದ ಬಗ್ಗೆ ತಾವು ಒಂದು ನಿರ್ಣಯ ಕೊಡುತ್ತೀರೆಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿಗಳನ್ನು ಸಲ್ಲಿಸಲು ನಾನು ಸದಸ್ಯರಿಗೆ ಸಾಕಷ್ಟು ಕಾಲಾವಕಾಶ ನೀಡಿರುತ್ತೇನೆ, ವಿವಿಧ ಖಂಡಗಳ ಬಗ್ಗೆ ಭಾರಿ ಸಂಖ್ಯೆಯಲ್ಲಿ ತಿದ್ದುಪಡಿಗಳು ಬಂದಿರುವುದನ್ನು ನಾವು ಈಗಾಗಲೇ ಪರಿಚಾಲನೆ ಮಾಡಿರುವ ತಿದ್ದುಪಡಿಗಳ ದೃಷ್ಟಿಯಿಂದ ನೋಡಬಹುದಾಗಿದೆ. ನಾನು ಗೊತ್ತುಪಡಿಸಿರುವ ಕಾಲಮಿತಿಯು ಮುಗಿದ ತರುವಾಯವೂ ಅಪಾರ ಸಂಖ್ಯೆಯ ತಿದ್ದುಪಡಿಗಳು ಬಂದಿವೆ ಎಂದು ನನಗೆ ತಿಳಿದುಬಂದಿದೆ. ಸದನವು, ಅವುಗಳನ್ನು ಪರಿಚಾಲನೆ ಮಾಡಬೇಕೆಂದು ಅಪೇಕ್ಷಿಪಟ್ಟರೆ ನನಗೆ ಬೇರೆ ದಾರಿ ಇರುವುದಿಲ್ಲ. ಆದರೆ, ಯಾವುದೇ ಕೊನೆ ಇಲ್ಲದೆ, ಅಡೆತಡೆಯಿಲ್ಲದೆ, ಬರುವ ತಿದ್ದುಪಡಿಗಳನ್ನು ಪರಿಶೀಲನೆಗೆ ಒಳಪಡಿಸುವುದು ತುಂಬ ಕಷ್ಟಕರವಾಗುತ್ತದೆ. ಹೀಗಾಗಿ, ನಾವು ತಿದ್ದುಪಡಿಗಳನ್ನು ಸಲ್ಲಿಸಲು ಕಾಲಮಿತಿಗೆ ಅಂಟಿಕೊಳ್ಳಬೇಕಾಗುತ್ತದೆ.

**ಓರ್ವ ಗೌರವಾನ್ವಿತ ಸದಸ್ಯರು :** ಇಲ್ಲಿ ತೆಗೆದುಕೊಳ್ಳುವ ಕಾಲದಿಂದ ತಾನಾಗಿಯೇ ಕಾಲಮಿತಿ ನಿಗದಿಯಾಗಿ ಬಿಡುತ್ತದೆ.

**ಮಾನ್ಯ ಸಭಾಧ್ಯಕ್ಷರು :** ಅಂದರೆ ತಿದ್ದುಪಡಿಗಳು ಬಂದ ಹಾಗೆಯೇ ಎಲ್ಲ ತಿದ್ದುಪಡಿಗಳನ್ನೂ ಪರಿಚಾಲನೆ ಮಾಡಬೇಕಾಗುತ್ತದೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಪ್ರತಿ ವಿಧಾನಸಭೆಯಲ್ಲೂ ಇದೇ ಪದ್ಧತಿ ಇರುವುದು. ಮಾನ್ಯರೆ, ತಮ್ಮ ಬಗ್ಗೆ ಅಪಾರ ಗೌರವವಿಟ್ಟುಕೊಂಡು ಹೇಳುತ್ತಿದ್ದೇನೆ – ತಮ್ಮ ಈ ನಿರ್ಣಯವು ನಿಯಮ ಸಂ.೩೨ಕ್ಕೆ ವಿರುದ್ಧವಾಗಿದೆ. ನಿಯಮ ೩೨, ಉಪಖಂಡ(೩) ಸಭಾಧ್ಯಕ್ಷರ ಅನುಮತಿಯ ಹೊರತು, ತಿದ್ದುಪಡಿಯ ಸೂಚನೆಯನ್ನು, ಮಂಡನೆಗೆ ಕನಿಷ್ಠ ಒಂದು ಕೆಲಸದ ದಿನಕ್ಕೆ ಮುನ್ನ ಸಲ್ಲಿಸಬೇಕು. ವಿಧಾನಸಭೆಯಲ್ಲಿ ಪ್ರತಿಯೊಂದು ಖಂಡವೂ ಮಂಡಿಸಲ್ಪಟ್ಟು, ಚರ್ಚೆ ಮುಂದುವರಿದಂತೆ, ತಿದ್ದುಪಡಿಗಳು ಸದಸ್ಯರಿಗೆ ಹೊಳೆದಂತೆ, ಅವುಗಳ ಬಗ್ಗೆ ನಾವು ೨೪ ಗಂಟೆಗಳ ಸೂಚನೆ ನೀಡುತ್ತೇವೆ. ನಾವು ಮಾಡಬೇಕಾದುದು ಇಷ್ಟೆ. ಆದ್ದರಿಂದ ಮಾನ್ಯರೆ, ಸೂಚನೆಯ ಅವಧಿಯನ್ನು ಎರಡು ದಿನ ಮುನ್ನ ಎಂದು ನಿಗದಿ ಮಾಡಲಾಗದು. ಅದು ಇಡೀ ವಿಷಯವನ್ನು ತೀರ ಔಪಚಾರಿಕವಾಗಿಯೂ, ಜಡವನ್ನಾಗಿಯೂ ಮಾಡಿಬಿಡುತ್ತದೆ. ತಿದ್ದುಪಡಿಗಳನ್ನು ನಿರ್ವಹಿಸಲು ಕಚೇರಿಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲದಿದ್ದರೆ, ಕಚೇರಿಯನ್ನು ಹಿಗ್ಗಿಸಬೇಕೆ ಹೊರತು ನಮ್ಮ ಹಕ್ಕುಗಳನ್ನು ಮೊಟಕು ಮಾಡಬಾರದು.

**ಮಾನ್ಯ ಸಭಾಧ್ಯಕ್ಷರು :** ವಿಧಾನಸಭೆಗಳ ಅನುಭವವಿರುವ ಯಾರಾದರೂ ನನಗೆ ಈ ವಿಷಯದ ಬಗ್ಗೆ ತಿಳಿವಳಿಕೆ ನೀಡಿ. ಸಾಮಾನ್ಯವಾಗಿ ಅನುಸರಿಸುವ ಕಾರ್ಯವಿಧಾನ ಯಾವುದೆಂದು ನಾನು ತಿಳಿಯಬೇಕಿದೆ. ಬಹುಶಃ ಶ್ರೀ ಪುರುಷೋತ್ತಮ ದಾಸ್ ಟಂಡನ್ ಅವರು ನನಗೆ ತಿಳಿವಳಿಕೆ ನೀಡಬಹುದು. ದಿನದಿನವೂ ಭಾರಿ ಸಂಖ್ಯೆ ತಿದ್ದುಪಡಿಗಳು ಬರುತ್ತಲೇ ಇವೆ; ಅವುಗಳನ್ನು ನಿರ್ವಹಿಸುವ ವಾಡಿಕೆಯ ಕ್ರಮವೇನು?

**ಗೌರವಾನ್ವಿತ ಶ್ರೀ ಪುರುಷೋತ್ತಮ ದಾಸ್ ಟಂಡನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ಮಸೂದೆಯ ಪರಿಗಣನೆ ಮುಂದುವರಿದಿರುವಾಗ, ತಿದ್ದುಪಡಿಗಳನ್ನು ಮಂಡಿಸುವುದು ವಾಡಿಕೆಯ ಕ್ರಮ. ಆದರೆ, ಪ್ರತಿಯೊಂದು ತಿದ್ದುಪಡಿಯನ್ನು ಅದಕ್ಕೆ ಸಂಬಂಧಿಸಿದ ಖಂಡವನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಸ್ವಲ್ಪ ಮುಂಚಿತವಾಗಿ, ಕಚೇರಿಗೆ ಸಲ್ಲಿಸಬೇಕು. ಉದಾಹರಣೆಗೆ, ಇಂದು ನೀವು ಒಂದು ಖಂಡವನ್ನು ಕೈಗೆತ್ತಿಕೊಳ್ಳುವುದಿದ್ದರೆ, ನಿಯಮಾನುಸಾರ ತಿದ್ದುಪಡಿಯನ್ನು ಪರಿಗಣಿಸುವುದಕ್ಕೆ ೪೮ ಗಂಟೆ ಮುಂಚೆ ಆ ತಿದ್ದುಪಡಿಯ ಬಗ್ಗೆ ಸೂಚನೆಯನ್ನು ನೀಡಬೇಕು ಇಷ್ಟೆ. ಆದರೆ, ಮಸೂದೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಮುನ್ನ ಎಲ್ಲ ತಿದ್ದುಪಡಿಗಳನ್ನು ಕಚೇರಿಗೆ ಕಳುಹಿಸಿಕೊಡಬೇಕಾದ ಅಗತ್ಯವಿರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನಾವೂ ಅದೇ ಕಾರ್ಯವಿಧಾನವನ್ನು ಅನುಸರಿಸೋಣ. ನಿಯಮ ೩೨ರ ಮೇರೆಗೆ ಕಾಲಮಿತಿಯೊಳಗಾಗಿ ಸೂಚನೆಯನ್ನು ನೀಡಿದ ಎಲ್ಲ ತಿದ್ದುಪಡಿಗಳನ್ನು ಪರಿಚಾಲನೆ ಮಾಡಲಾಗುವುದು.

**ಡಾ. ಪಿ.ಎಸ್. ದೇಶಮುಖ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಹಾಗಿದ್ದಲ್ಲಿ, ನಾನು ಸೋಮವಾರವೇ ಸೂಚನೆ ನೀಡಿರುವ ಖಂಡ ೧ಕ್ಕೆ ತಿದ್ದುಪಡಿಯನ್ನು ಮಂಡಿಸಲೆ?

**ಮಾನ್ಯ ಸಭಾಧ್ಯಕ್ಷರು :** ಖಂಡ ೧ಕ್ಕೆ ಸಂಬಂಧಿಸಿದ ಮಟ್ಟಿಗೆ, ಅದನ್ನು ಹಲವು ದಿನಗಳ ಹಿಂದೆಯೇ ಮಂಡಿಸಲಾಗಿದೆ. ಖಂಡವನ್ನು ಮಂಡಿಸಿದ ತರುವಾಯ ಸಲ್ಲಿಸಲಾಗುವ ತಿದ್ದುಪಡಿ ಸೂಚನೆಗಳನ್ನು ತೆಗೆದುಕೊಳ್ಳಲಾಗದು. ಈಗ ನಾವು ಇತರ ತಿದ್ದುಪಡಿಗಳ ಬಗ್ಗೆ ಮುಂದುವರಿಯೋಣ. ಶ್ರೀ ಚಂದ್ರಶೇಖರಯ್ಯ ಅವರು ತಮ್ಮ ಎರಡು ತಿದ್ದುಪಡಿಗಳನ್ನು ನಿನ್ನೆಯೇ ಮಂಡಿಸಿದ್ದಾರೆ.

ಶ್ರೀ ಎ.ಕೆ. ಘೋಷ್ ಅವರು ತಮ್ಮ ತಿದ್ದುಪಡಿ ಸಂ.೯೦ನ್ನು ಮಂಡಿಸಬಯಸುವರೆ?

**ಶ್ರೀ ಎ.ಕೆ. ಘೋಷ್** (ಬಿಹಾರ್ : ಸಾಮಾನ್ಯ) : ಇಲ್ಲ.

**ಮಾನ್ಯ ಸಭಾಧ್ಯಕ್ಷರು :** ಸರ್, ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರದೊಂದು ತಿದ್ದುಪಡಿ ಇದೆ.

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನನ್ನ ತಿದ್ದುಪಡಿಗಳು ಕೇವಲ ಸ್ವಲ್ಪಮಟ್ಟಿಗೆ ಶಾಬ್ದಿಕ ಬದಲಾವಣೆಯನ್ನು ಬಯಸುತ್ತವೆ. ಖಂಡ(೧)ರ ಉಪಖಂಡ (೨)ರ ಕೊನೆಯ ವಾಕ್ಯದಲ್ಲಿನ "ಘಟಕ ವಿಧಾನಸಭೆಗಳ ಮತಗಳು" ಎಂಬ ಪದಗಳಿಗೆ ಬದಲಾಗಿ, "ಘಟಕ ವಿಧಾನಸಭೆಗಳ ಸದಸ್ಯರ ಮತಗಳು" ಎಂಬ ಪದಗಳನ್ನು ಬಳಸಬೇಕು. ಈ ತಿದ್ದುಪಡಿಗೆ ಯಾವುದೇ ವಿವರಣೆ ಅಗತ್ಯವಿರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಮತ್ತೊಂದು ತಿದ್ದುಪಡಿ ಶ್ರೀ ಜೆ.ಎನ್. ವ್ಯಾಸ್ ಅವರಿಂದ.

(ತಿದ್ದುಪಡಿಯನ್ನು ಮಂಡಿಸಲಾಗಲಿಲ್ಲ.)

ಖಂಡ ೧ಕ್ಕೆ ಬೇರೆ ಯಾವುದೇ ತಿದ್ದುಪಡಿ ಇಲ್ಲವೆಂದುಕೊಂಡಿದ್ದೇನೆ.

ಈ ಖಂಡ ಕುರಿತಂತೆ ನಾನು ಬಿಟ್ಟಿರಬಹುದಾದ ಯಾರೇ ಸದಸ್ಯರ ತಿದ್ದುಪಡಿ ಇದ್ದರು, ಅವರು ಈ ಅವಕಾಶವನ್ನು ಉಪಯೋಗಿಸಿಕೊಂಡು ಅದನ್ನು ಮಂಡಿಸಬಹುದಾಗಿದೆ. ತನಗೆ ಮಂಡಿಸಲು ಅವಕಾಶ ದೊರೆಯಲಿಲ್ಲವೆಂದು ಅನಂತರ ದೂರುವುದು ಬೇಡ.

ಯಾವುದೇ ತಿದ್ದುಪಡಿ ಇಲ್ಲದಿರುವುದರಿಂದ, ಮಂಡಿಸಿರುವ ಖಂಡ ಮತ್ತು ತಿದ್ದುಪಡಿಗಳನ್ನು ಕುರಿತು ನಾವೀಗ ಚರ್ಚಿಸೋಣ.

**ಸಯ್ಯದ್ ಖಾಜಿ ಕರಿಮುದ್ದೀನ್** (ಸಿ.ಪಿ. ಮತ್ತು ಬೇರಾರ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಖಂಡ ೧ರ ಉಪಖಂಡ ೨ ಹೀಗಿದೆ :

"ಈ ಚುನಾವಣೆಯು –

ಎ) ಒಕ್ಕೂಟದ ಸಂಸತ್ತಿನ ಎರಡು ಸದನಗಳ ಸದಸ್ಯರಿಂದ ಮತ್ತು

ಬಿ) ಎಲ್ಲ ಘಟಕಗಳ ವಿಧಾನಸಭೆಗಳ ಸದಸ್ಯರಿಂದ ಅಥವಾ ವಿಧಾನಸಭೆಯು ದ್ವಿಸದನವಾಗಿದ್ದಾಗ, ಅದರ ಕೆಳಸದನದ ಸದಸ್ಯರಿಂದ ಕೂಡಿದ ಚುನಾಯಕ ಗಣದಿಂದ ನಡೆಯತಕ್ಕುದು."

ವಯಸ್ಕಮತದಾನದ ಮೂಲಕ ರಾಷ್ಟ್ರಪತಿಗಳ ಚುನಾವಣೆ ನಡೆಸಬೇಕೆಂದು ಮಂಡಿಸಲಾಗಿರುವ ತಿದ್ದುಪಡಿಗಳೆಲ್ಲವನ್ನೂ ಹಿಂತೆಗೆದುಕೊಳ್ಳಲಾಗಿದೆ, ಆದರೆ ಈ ಚುನಾವಣೆಯನ್ನು ವಯಸ್ಕಮತದಾನದ ಮೂಲಕ ಏಕೆ ನಡೆಸಬೇಕೆಂದು ಸದನಕ್ಕೆ ಮನಗಾಣಿಸಲು ಬಯಸುತ್ತೇನೆ.

ಈ ಅಂಶದ ಮೇಲಿನ ನಿರ್ಣಯವು, ಮುಖ್ಯವಾಗಿ, ಕಾರ್ಯಾಂಗವು ಸಂಸತ್ತೇತರವಾಗಿರಬೇಕೆ ಅಥವಾ ಸಂಸತ್ತಿನದಾಗಿರಬೇಕೆ ಎಂಬ ದೃಷ್ಟಿಕೋನದ ಮೇಲೆ ನಿಂತಿದೆ. ಭಾರತದಲ್ಲಿನ ಸಂಘರ್ಷಶೀಲ ರಾಜಕೀಯ ಪಕ್ಷಗಳ ವೈವಿಧ್ಯಮಯ ತಾತ್ತ್ವಿಕತೆಗಳನ್ನು ನೋಡಿದರೆ ಹಾಗೂ ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡಲು ಮತ್ತು ಸಚಿವಸಂಪುಟದಲ್ಲಿನ ಎಲ್ಲ ಪಕ್ಷಗಳ ಪರಿಣಾಮಕಾರಿ ಪ್ರಾತಿನಿಧ್ಯದ ಸಲುವಾಗಿ ಸಂಸತ್ತೇತರ ಕಾರ್ಯಾಂಗವಿರುವುದು ಅಗತ್ಯವೆನಿಸುತ್ತದೆ. ವಯಸ್ಕಮತದಾನವನ್ನು ಏಕೆ ಆಚರಣೆಗೆ ತರಲಾಗುವುದಿಲ್ಲ ಎಂಬುದಕ್ಕೆ ನೀಡುವ ಏಕೈಕ ಕಾರಣವೆಂದರೆ ಆ ಚುನಾವಣೆ ನಿರ್ವಹಿಸಲು ಬೃಹತ್ ಪ್ರಮಾಣದ ವ್ಯವಸ್ಥೆ ಬೇಕಾಗುತ್ತದೆ ಮತ್ತು ದೇಶದ ಅಪಾರ ಶಕ್ತಿ ಸಾಮರ್ಥ್ಯಗಳು ವ್ಯಯವಾಗುತ್ತವೆ ಎಂಬುದು. ಅಮೆರಿಕದಂತಹ ದೇಶದಲ್ಲಿ ರಾಷ್ಟ್ರಾಧ್ಯಕ್ಷನ ಚುನಾವಣೆಯನ್ನು ವಯಸ್ಕಮತದಾನದ ಮೂಲಕ ನಡೆಸಲಾಗುತ್ತದೆ. ಪ್ರತಿ ನಾಲ್ಕೈದು ವರ್ಷಗಳಿಗೊಮ್ಮೆ ರಾಷ್ಟ್ರಾಧ್ಯಕ್ಷರ ಚುನಾವಣೆಯನ್ನು ವಯಸ್ಕಮತದಾನದ ಮೂಲಕ ನಡೆಸಿದರೆ, ಅದರಿಂದ ಜನಕ್ಕೆ ಶಿಕ್ಷಣವೂ ದೊರೆಯುತ್ತದೆ. ಅತ್ಯಂತ ಮಹತ್ತ್ವದ ಹಣಕಾಸು ಸಮಸ್ಯೆಗಳು ಮುನ್ನಡೆಗೆ ಬರುತ್ತವೆ. ಅಖಿಲ ಭಾರತ ಮಟ್ಟದಲ್ಲಿ ರಾಷ್ಟ್ರಪತಿಗಳ ಚುನಾವಣೆ ನಡೆದರೆ ಜನರಿಗೆ ತಿಳಿವಳಿಕೆಯೂ ದೊರೆಯುತ್ತದೆ. ಪ್ರಸಕ್ತ ಖಂಡ ೧ರ ಉಪಖಂಡ (೨)ರ ಮೇರೆಗೆ ರಾಷ್ಟ್ರಪತಿಯು ಬಹುಮತವಿರುವ ಪಕ್ಷದ ಸೂತ್ರದ ಗೊಂಬೆಯಾಗುತ್ತಾರೆ, ಭಾಗಶಃ ಪ್ರಾಂತೀಯ ಆಧಾರದಲ್ಲಿ ಹಾಗೂ ಭಾಗಶಃ ಅಖಿಲ ಭಾರತದ ಮಟ್ಟದಲ್ಲಿ ಆಯ್ಕೆಯಾದ ವ್ಯಕ್ತಿಗಳು ಇಡೀ ದೇಶದ ರಾಷ್ಟ್ರಪತಿಯನ್ನು ಆಯ್ಕೆಮಾಡುತ್ತಾರೆ.

ನಿನ್ನೆ ರಾಷ್ಟ್ರಪತಿಗಳ ಅಧಿಕಾರಗಳನ್ನು ಕುರಿತು ಚರ್ಚಿಸುವಾಗ, ಅವರಿಗೆ ಸಾಕಷ್ಟು ವ್ಯಾಪಕ ಅಧಿಕಾರಗಳನ್ನು ನೀಡಲಾಗಿದೆ ಎಂದು ಭಾವಿಸಿದ್ದೆವು. ಒಂದು ಪ್ರಾಂತ್ಯದ ಸಂವಿಧಾನವನ್ನು ಭಾಗಶಃ ಅಥವಾ ಇಡಿಯಾಗಿ ಅಮಾನತಿನಲ್ಲಿಡಲು ಕೂಡ ಅವರಿಗೆ ಅಧಿಕಾರವಿರುತ್ತದೆ. ಬಹುಮತವುಳ್ಳ ಪಕ್ಷದ ಭಯವಿರುವ, ಉಪಖಂಡ(೨)ರ ಮೇರೆಗೆ ಚುನಾಯಕಗಣದಿಂದ ಚುನಾಯಿತವಾಗುವ ರಾಷ್ಟ್ರಪತಿಗಳು ರಾಷ್ಟ್ರಮಟ್ಟದ ಆರ್ಥಿಕ ವಿಷಯಗಳಲ್ಲಾಗಲಿ ಅಥವಾ ಅಖಿಲ ಭಾರತ ಮಟ್ಟದ ಯಾವುದೇ ವಿಷಯಗಳಲ್ಲಾಗಲಿ ಇಡೀ ಭಾರತವನ್ನು ಪ್ರತಿನಿಧಿಸುವ ವ್ಯಕ್ತಿಯಾಗಲಾರರು – ಎಂಬುದು ನನ್ನ ಅನಿಸಿಕೆ. ಇನ್ನೂ ಒಂದು ತೊಂದರೆ ಇದೆ. ಅದು ಬಹು ಮುಖ್ಯವಾದುದು. ರಾಜ್ಯಗಳಿಗೆ ಹೊಂದುವಂತೆ, ರಾಜ್ಯ ವಿಧಾನಸಭೆಗಳ ಸದಸ್ಯರು ಒಕ್ಕೂಟದ ಕೆಳಮನೆಯ ಸದಸ್ಯರಾಗಿರತಕ್ಕುದೆಂಬುದನ್ನು ನಾವು ಒಪ್ಪಿಕೊಂಡಿರುತ್ತೇವೆ. ರಾಜ್ಯಗಳಲ್ಲಿ ಜನಪ್ರಿಯ ಆಡಳಿತವಿಲ್ಲವೆಂಬುದು ಮತ್ತು ರಾಜ್ಯಗಳಲ್ಲಿನ ವಿಧಾನಸಭೆಗಳ ಸದಸ್ಯರು ರಾಜ್ಯಗಳಿಂದ ನಾಮಕರಣ ಮಾಡಲ್ಪಟ್ಟವರಾಗಿರುವುದು ಅಥವಾ ಜನತೆಯ ನಿಜವಾದ ಪ್ರತಿನಿಧಿಗಳಾಗಿಲ್ಲವೆಂಬುದು ಸ್ಪಷ್ಟವಾದ ಸಂಗತಿ ಹಾಗೂ ಎಲ್ಲರಿಗೂ ತಿಳಿದಿರುವುದೇ ಆಗಿದೆ. ಹೀಗೆ ಮೂರನೆಯ ಒಂದು ಭಾಗದಷ್ಟು ಇಂಥ ಸದಸ್ಯರಿಂದ ಆಯ್ಕೆಯಾಗುವ ರಾಷ್ಟ್ರಪತಿಯ ರಾಜ್ಯಗಳ ಜನತೆಯನ್ನು ಪ್ರತಿನಿಧಿಸದೆ, ಅವರನ್ನು ನಾಮಕರಣಮಾಡುವ ರಾಜ್ಯಗಳ ಆಡಳಿತಗಾರರನ್ನು ಪ್ರತಿನಿಧಿಸುತ್ತಾರೆ. ಇಂಥ ಸಂದರ್ಭದಲ್ಲಿ, ರಾಷ್ಟ್ರಪತಿಯು ರಾಜ್ಯಗಳ ಜನತೆಯು ನಿಜವಾದ ಪ್ರತಿನಿಧಿ ಎಂದು ಎಂದಿಗೂ ಹೇಳಲಾಗದು. ಈ ಹಿನ್ನೆಲೆಯಲ್ಲಿ ನಾನು ಸದನಕ್ಕೆ ಪ್ರಾಮಾಣಿಕವಾಗಿ ಮನವಿ ಮಾಡುವುದೇನೆಂದರೆ, ನಿಮಗೆ ಪ್ರಜಾಪ್ರಭುತ್ವದ ಆಳ್ವಿಕೆ ಬೇಕಾಗಿದ್ದರೆ, ರಾಷ್ಟ್ರಪತಿಯು ಜನತೆಯ ನಿಜವಾದ ಪ್ರತಿನಿಧಿಯಾಗಬೇಕಿದ್ದರೆ ಅವರನ್ನು ವಯಸ್ಕಮತದಾನದ ಮೂಲಕ ಆಯ್ಕೆಮಾಡಬೇಕು; ಖಂಡ ೧ರ ಉಪಖಂಡ(೨)ರಲ್ಲಿ ಉಲ್ಲೇಖಿಸಿರುವಂತೆ, ಚುನಾಯಕ ವರ್ಗದ ಮೇರೆಗೆ ಚುನಾಯಿಸಲ್ಪಟ್ಟಿದ್ದರೆ, ಅವರು ಅದೂ ನಿರ್ದಿಷ್ಟವಾಗಿ ರಾಜ್ಯಗಳ ಮಟ್ಟಿಗೆ ಅವರೆಂದೂ ಈ ನೆಲದ ಜನತೆಯ ಪ್ರತಿನಿಧಿಯಾಗಲಾರರು. ಆದ್ದರಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಶ್ರೀ ಮೊಹಮದ್ ಶರೀಫ್** (ಮೈಸೂರು ರಾಜ್ಯ) : ಮಾನ್ಯರೆ, ಒಕ್ಕೂಟದ ರಾಷ್ಟ್ರಪತಿಗಳನ್ನು ವಯಸ್ಕ ಮತದಾನದ ಮೂಲಕ ಆಯ್ಕೆಮಾಡಬೇಕೆಂಬುದು ನನ್ನ ಅಭಿಪ್ರಾಯ. ಈ ವಿಷಯದಲ್ಲೂ ಆಡಳಿತದ ಸಂಪೂರ್ಣ ನಿಯಂತ್ರಣದಲ್ಲಿರುವ ಹಾಗೂ ಯಾವ ವ್ಯಕ್ತಿಗೆ ಇಷ್ಟೊಂದು ಹೊಣೆಗಾರಿಕೆಗಳನ್ನು ನೀಡಲಾಗಿದೆಯೋ, ಅಂಥ ವ್ಯಕ್ತಿಯು ಹೀಗೆ ಚುನಾಯಿತನಾಗಿರಲೇಬೇಕೆಂಬುದು ಅತ್ಯಂತ ತಕ್ಕುದಾಗಿದೆ. ಮತದಾನ ಮಾಡಲು ಅರ್ಹವಿರುವ ಪ್ರತಿಯೊಬ್ಬ ಮತದಾರನಿಗೂ, ದೇಶವನ್ನು ಆಳುವ ವ್ಯಕ್ತಿಯ ಚುನಾವಣೆಯಲ್ಲಿ ನನ್ನ ಅಭಿಪ್ರಾಯವೂ ಇದೆ ಎಂಬ ತೃಪ್ತಿ ಇರಬೇಕು. ಈ ಪದ್ಧತಿಯನ್ನು ಅನುಸರಿಸಬೇಕಾದರೆ ಜನತೆಯ ಬುದ್ಧಿಶಕ್ತಿಯು ಉನ್ನತಮಟ್ಟದಲ್ಲಿರಬೇಕೆಂದೂ, ಇಲ್ಲದಿದ್ದಲ್ಲಿ, ತೃಪ್ತಿಕರವಾಗಿ ನಡೆಯುವುದಿಲ್ಲವೆಂದೂ, ಭ್ರಷ್ಟಾಚಾರ, ಲಂಚಗುಳಿತನದಂಥ ಅನೇಕ ಕಲುಷಿತ ಸಂಗತಿಗಳು ವಿಜೃಂಭಿಸುತ್ತವೆಂದೂ ವಾದಮಾಡಲಾಗುತ್ತದೆ. ಈ ತೊಂದರೆಗಳ ನಡುವೆಯೂ, ಈ ಪದ್ಧತಿಯಿಂದ ದೊರೆಯುವ ಅನುಕೂಲಗಳು ಹೆಚ್ಚಿನವು ಎಂದು ನನಗೆ ತೋರುತ್ತದೆ. ಮಾನ್ಯರೆ, ಚುನಾವಣೆಯು ತಾನೇ ಒಂದು ಮಹತ್ತ್ವದ ಸಂಗತಿ. ಅದು ಅವರಲ್ಲಿರುವ ರಾಜಕೀಯ ಒಳನೋಟವನ್ನು ವೃದ್ಧಿಸಿಕೊಳ್ಳಲು ನೆರವಾಗುತ್ತದೆ ಮತ್ತು ಅನೇಕ ವಿಷಯಗಳಲ್ಲಿ ಅವರಿಗೆ ಅನುಕೂಲವಾಗಬಲ್ಲದು.

ಈ ಹಿನ್ನೆಯಲ್ಲಿ, ರಾಷ್ಟ್ರಪತಿಗಳನ್ನು ವಯಸ್ಕಮತದಾನದ ಮೂಲಕವೇ ಚುನಾಯಿಸಬೇಕೆಂದು ನಾನು ಸಲಹೆ ಮಾಡಬಯಸುತ್ತೇನೆ. ನಾನು ಹೇಳಿದಂತೆ, ಅಂಥ ಚುನಾವಣೆಯು ಮತದಾರರ ಅನುಮೋದನೆಯ ಮುದ್ರೆಯನ್ನು ಹೊಂದಿರುತ್ತದೆ. ಈ ಅಭಿಪ್ರಾಯದೊಂದಿಗೆ, ನಾನು ಈ ಪ್ರಸ್ತಾವವನ್ನು ವಿರೋಧಿಸುತ್ತೇನೆ.

**ಶ್ರೀ ತಾಜುಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಮಾನ್ಯರೆ, ಭಾಗ ೪ರ ಖಂಡ ೧ರ

ಉಪಖಂಡ ೧ರಲ್ಲಿ, ರಾಜ್ಯದ ಮುಖ್ಯಸ್ಥರನ್ನು ರಾಷ್ಟ್ರಪತಿ ಎಂದು ಕರೆಯತಕ್ಕುದೆಂದೂ, ೩೫ ವರ್ಷ ವಯಸ್ಸಿನ ಗಣತಂತ್ರದ ನಾಗರಿಕ ಅಥವಾ ವ್ಯಕ್ತಿಯನ್ನು ಗಣತಂತ್ರದ ರಾಷ್ಟ್ರಪತಿಯನ್ನಾಗಿ ಚುನಾಯಿಸಬಹುದೆಂದು ವಿಧಿಸಲಾಗಿದೆ. ಮಾನ್ಯರೆ, ರಾಷ್ಟ್ರಪತಿಯ ಚುನಾವಣೆಯನ್ನು ಪರ್ಯಾಯ ಆಧಾರದ ಮೇಲೆ, ಅಂದರೆ ಒಂದು ಅವಧಿಗೆ ರಾಷ್ಟ್ರಪತಿಯನ್ನು ಉತ್ತರಭಾರತದಿಂದ ಹಾಗೂ ಮತ್ತೊಂದು ಅವಧಿಗೆ ದಕ್ಷಿಣಭಾರತದಿಂದ ಚುನಾಯಿಸಬೇಕೆಂಬ ತಿದ್ದುಪಡಿಯನ್ನು ಮಂಡಿಸಲಾಗಿದೆ. ಈ ತಿದ್ದುಪಡಿಯನ್ನು ಮಂಡಿಸಿರುವ ಗೌರವಾನ್ವಿತರು ಇದಕ್ಕೆ ನೀಡಿರುವ ಕಾರಣವೆಂದರೆ, ದಕ್ಷಿಣಭಾರತದ ಜನರು ಉತ್ತರಭಾರತದ ಜನರಿಗಿಂತ ಸಂಪೂರ್ಣ ಭಿನ್ನರು ಎಂಬುದು. ಮಾನ್ಯರೆ, ಇದೊಂದು ತುಂಬ ಅಪಾಯಕಾರಿಯಾದ ತತ್ತ್ವ. ರಾಷ್ಟ್ರಪತಿಗಳ ಚುನಾವಣೆಗೆ ಸ್ಥಾನಗಳ ಮೀಸಲಾತಿ ಇರಬೇಕೆಂಬ ತತ್ತ್ವವನ್ನು ನೀವು ಒಪ್ಪಿಕೊಳ್ಳುವುದಾದರೆ, ಆಗ ಪ್ರತಿಯೊಂದು ಪ್ರಾಂತ್ಯವೂ, ಆ ಪ್ರಾಂತ್ಯದಿಂದಲೇ ರಾಷ್ಟ್ರಪತಿಯನ್ನು ಆಯ್ಕೆಮಾಡಬೇಕೆಂಬ ಹಕ್ಕೊತ್ತಾಯವನ್ನು ಮಾಡಬಹುದು.

ನಾನೊಂದು ಉದಾಹರಣೆಯನ್ನು ನೀಡುತ್ತೇನೆ. ಪಶ್ಚಿಮ ಬಂಗಾಳದ ಜನರು ತಾವು ಭಾರತದ ಉಳಿದ ಭಾಗದಿಂದ ಭಿನ್ನರು ಎನ್ನಬಹುದು.

**ಓರ್ವ ಗೌರವಾನ್ವಿತ ಸದಸ್ಯರು :** ಇಲ್ಲ, ಇಲ್ಲ.

**ಶ್ರೀ ತಾಜಮಲ್ ಹುಸೇನ್ :** ಇಲ್ಲ., ಇಲ್ಲ ಎನ್ನುವ ಧ್ವನಿ ಕೇಳಿ ನನಗೆ ಸಂತಸವಾಗಿದೆ. ಒಂದು ಪ್ರಾಂತ್ಯ ಮತ್ತೊಂದು ಪ್ರಾಂತ್ಯದ ನಡುವೆ ಯಾವುದೇ ಭೇದಭಾವ ಇರಬಾರದು. ಆದ್ದರಿಂದ ಮಾನ್ಯರೆ, ರಾಷ್ಟ್ರಪತಿ ಹುದ್ದೆಯು ದೇಶದಲ್ಲಿನ ಅತ್ಯಂತ ಉನ್ನತ ಹುದ್ದೆಯೂ, ಅವರು ಗಣತಂತ್ರದ ಅತ್ಯಂತ ಪ್ರತಿಷ್ಠಿತ ವ್ಯಕ್ತಿಯೂ ಆಗಿದ್ದು, ನಾವು ಆ ಹುದ್ದೆಗೆ ಅತ್ಯುತ್ತಮ ವ್ಯಕ್ತಿಯನ್ನು ಆರಿಸಿಕೊಳ್ಳಬೇಕು. ಅವರು ಎಲ್ಲಿಂದ ಬಂದವರಾದರೂ ಸರಿಯೇ. ಚುನಾವಣೆ ನಡೆಸುವಾಗ ಓರ್ವ ಬಿಹಾರಿ, ಅಥವಾ ಕ್ರೈಸ್ತ, ಅಥವಾ ಜೈನ ಅಥವಾ ಪಾರ್ಸಿ ಅತ್ಯುತ್ತಮ ವ್ಯಕ್ತಿಯಾಗಿ ಪರಿಣಮಿಸುವ ಸಾಧ್ಯತೆ ಇದೆ. ಅಂಥ ವ್ಯಕ್ತಿಯು ರಾಷ್ಟ್ರಪತಿಯಾಗಿ ಚುನಾಯಿತನಾಗಬಹುದು. ಆದ್ದರಿಂದ, ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

ಭಾಗ ೪ರ ಖಂಡ (೧)ರ ಉಪಖಂಡ (೨)ರ ಕಂಡಿಕೆ (ಬಿ)ಯು ಎರಡು ಸದನಗಳಿರುವ ಪ್ರಾಂತ್ಯದ ಮೇಲ್ಮನೆಯು ಗಣತಂತ್ರದ ರಾಷ್ಟ್ರಪತಿಯನ್ನು ಆಯ್ಕೆಮಾಡುವ ಅಧಿಕಾರ ಹೊಂದಿರತಕ್ಕುದಲ್ಲವೆಂದು ಎನಿಸುತ್ತದೆ. ಈ ಬಗ್ಗೆ ರಾಯ್ ಬಹಾದೂರ್ ಶ್ಯಾಮನಂದನ ಸಹಾಯ್ ಅವರು ಉಪಖಂಡ(ಎ) ಮೇರೆಗೆ, ಕೇಂದ್ರ ವಿಧಾನಸಭೆಯ ಎರಡು ಸದನಗಳಿಗೆ ಒಕ್ಕೂಟದ ರಾಷ್ಟ್ರಪತಿಯನ್ನು ಚುನಾಯಿಸುವ ಹಕ್ಕು ಇರುವಂತೆ, ಮೇಲ್ಮನೆಗೂ ಹಕ್ಕು ನೀಡಬೇಕೆಂದು – ತಿದ್ದುಪಡಿಯನ್ನು ಮಂಡಿಸಿದ್ದಾರೆ. ಕೇಂದ್ರ ವಿಧಾನಸಭೆಯ ಮೇಲ್ಮನೆ ಹಾಗೂ ಪ್ರಾಂತೀಯ ವಿಧಾನಸಭೆಯ ಮೇಲ್ಮನೆ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ. ಎರಡರಲ್ಲೂ ವಿಶೇಷ ಪ್ರಾತಿನಿಧ್ಯವಿದೆ. ನೀವು ಮೇಲ್ಮನೆಯನ್ನೇ ಕೈಬಿಡುವುದಾದರೆ ಅದು ಬೇರೆಯೇ ವಿಷಯ. ಪ್ರಜಾಪ್ರಭುತ್ವದ ತತ್ತ್ವದ ಆಧಾರದ ಮೇಲೆ ನಾನು ನಿಮಗೆ ಬೆಂಬಲ ನೀಡಬಹುದು; ಆದರೆ ಕೇಂದ್ರ ವಿಧಾನಸಭೆಯಲ್ಲೂ ಮೇಲ್ಮನೆ ಹೊಂದಿರಬೇಕೆಂದು ಹಾಗೂ ಕೆಲವೊಂದು ಪ್ರಾಂತ್ಯಗಳಲ್ಲಿ ಮೇಲ್ಮನೆ ಇರುತ್ತದೆಂದೂ ನಾವು ನಿರ್ಧರಿಸಿರುತ್ತೇವೆ. ಸಂದರ್ಭ ಹೀಗಿರುವಾಗ ಹಾಗೂ ಕೇಂದ್ರದ ಮತ್ತು ಪ್ರಾಂತೀಯ ವಿಧಾನಸಭೆಗಳ ಮೇಲ್ಮನೆಗಳ ಸದಸ್ಯರ ಅರ್ಹತೆಗಳು ಒಂದೇ ಆಗಿರುವುದರಿಂದ, ಪ್ರಾಂತೀಯ ವಿಧಾನಸಭೆಯ ಸದಸ್ಯರಿಗೂ ಗಣತಂತ್ರ ರಾಷ್ಟ್ರಪತಿಗಳ ಆಯ್ಕೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಪ್ರಾಂತೀಯ ವಿಧಾನಸಭೆಯ ಸದಸ್ಯರಿಂದ ಗಣತಂತ್ರದ ತಮ್ಮವರೇ ಆದ ರಾಷ್ಟ್ರಪತಿಯನ್ನು ಆಯ್ಕೆಮಾಡುವ ಹಕ್ಕು, ವಿಶೇಷಾಧಿಕಾರ ಹಾಗೂ ಸಂತೋಷವನ್ನು ಏಕೆ ಕಸಿದುಕೊಳ್ಳಬೇಕು ಎಂಬುದಕ್ಕೆ ನನಗೆ ಯಾವುದೇ ಕಾರಣ ಕಂಡುಬರುತ್ತಿಲ್ಲ.

ನಾನು ಶ್ರೀ ಶ್ಯಾಮನಂದನ ಸಹಾಯ್ ಅವರ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

**ಶ್ರೀ ಗುರುವರೆಡ್ಡಿ** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ನಿನ್ನೆ ನಾಮಕರಣಗಳನ್ನು ಕುರಿತ, ವಿಶೇಷವಾಗಿ, ನಾಮಕರಣಗಳಿಗೆ ಆಧಾರವಾಗಿರುವ ತತ್ತ್ವಗಳ ಬಗ್ಗೆ ನಡೆದ ಚರ್ಚೆಗಳನ್ನು ಅತೀವ ಆಸಕ್ತಿಯಿಂದ ಕೇಳುತ್ತಿದ್ದೆ. ನಮ್ಮ ಗೌರವಾನ್ವಿತ ಸದಸ್ಯರೊಬ್ಬರು, ನಾಮಕರಣಗಳನ್ನು, ಅದರಲ್ಲೂ ರಾಜ್ಯಗಳಲ್ಲಿನ ನಾಮಕರಣಗಳನ್ನು ಕೈಬಿಡಬೇಕೆಂದೂ ಹಾಗೂ ಒಂದು ವೇಳೆ, ಈ ನಾಮಕರಣಗಳನ್ನು ಎಲ್ಲೆಡೆ ಅಳವಡಿಸಿಕೊಳ್ಳುವುದಾದರೆ, ಅದಕ್ಕೆ ಆಕ್ಷೇಪವಿರಬಾರದು ಎಂದು ಹೇಳುತ್ತಿದ್ದರು. ಒಂದು ವೇಳೆ ನಾಮಕರಣಗಳು ಕೆಟ್ಟದ್ದು ಎನ್ನುವುದಾದರೆ, ಅವು ಎಲ್ಲೆಡೆಯೂ ಕೆಡುಕೆ. ಅವುಗಳನ್ನು ಒಪ್ಪಿಕೊಳ್ಳುವುದಾದರೆ, ತತ್ತ್ವದ ಆಧಾರದ ಮೇಲೆ ಒಪ್ಪಿಕೊಳ್ಳಬೇಕು. ಚುನಾಯಿತ ವ್ಯಕ್ತಿಯು ನಾಮಕರಣಗಳನ್ನು ಮಾಡಿದರೆ, ಅದು ಪವಿತ್ರವೂ, ನ್ಯಾಯೋಚಿತವೂ, ಸೂಕ್ತವೂ, ಸರಿಯಾದುದೆಂದು ಅದಕ್ಕೆ ಪಾವಿತ್ರ್ಯವನ್ನು ಏಕೆ ಅನ್ವಯಿಸುತ್ತೇವೆಯೋ ನನಗೆ ಗೊತ್ತಿಲ್ಲ. ರಾಜ್ಯದ ಆಡಳಿತಗಾರ ಅಥವಾ ಅವನ ನಿರ್ದೇಶನದ ಮೇರೆಗೆ ಮಾಡಲಾಗುವ ನಾಮನಿರ್ದೇಶನಗಳನ್ನು ಮೂಲಭೂತವಾಗಿ ತಪ್ಪು ಹಾಗೂ ಕೆಟ್ಟದೆಂದು ಏಕೆ ಪರಿಗಣಿಸುತ್ತೇವೆಯೋ ನನಗಂತೂ ಅರ್ಥವಾಗುತ್ತಿಲ್ಲ. ನಾಮಕರಣದ ಈ ತತ್ತ್ವವನ್ನು ಒಂದೆಡೆ ಒಪ್ಪಿಕೊಳ್ಳಲು, ಮತ್ತೊಂದೆಡೆ ತಿರಸ್ಕರಿಸಲು ಯಾವುದೇ ಸಮರ್ಥನೆ ಇಲ್ಲ. ನಾಮಕರಣಗಳನ್ನು ನೀವು ಕೈಬಿಡಬಯಸುವುದಾದರೆ, ಧೈರ್ಯವಾಗಿ ಹಾಗೆಯೇ ಮಾಡೋಣ. ವಿವಿಧ ಹಿತಾಸಕ್ತಿಗಳ ಪ್ರಾತಿನಿಧ್ಯಕ್ಕಾಗಿ ನಾಮಕರಣಗಳನ್ನು ಮಾಡುವುದಾದರೆ, ರಾಜ್ಯಗಳಲ್ಲಿ ಹಾಗೂ ಇತರ ಘಟಕಗಳಲ್ಲಿಯೂ ನಾಮಕರಣಗಳನ್ನು ಇಟ್ಟುಕೊಳ್ಳೋಣ. ಈ ನಾಮಕರಣಗಳ ಸಂಖ್ಯೆ ಅತಿಯಾಗುತ್ತದೆಂದು ಯಾರೂ ಹೆದರಬೇಕಾಗಿಲ್ಲ. ರಾಜ್ಯದ ಆಡಳಿತಗಾರನು, ಇತರರು ಮಾಡಬಯಸುವ ಒಳ್ಳೆಯ ಕೆಲಸಗಳನ್ನು ಹಾಳುಮಾಡಬಲ್ಲ ವ್ಯಕ್ತಿಯನ್ನು ಆಯ್ಕೆಮಾಡಿಯಾನೆಂಬ ಆತಂಕ ಬೇಕಿಲ್ಲ. ಒಂದು ವೇಳೆ ಅಪಾಯ ಎದುರಾದರೆ, ಆಡಳಿತಗಾರನು ಸೂಕ್ತ ಕ್ರಮ ಕೈಗೊಳ್ಳುವ ಧೈರ್ಯವಹಿಸಿ, ಎಲ್ಲರ ಹಿತಾಸಕ್ತಿಗಳನ್ನು ಪ್ರತಿನಿಧಿಸಬಲ್ಲ ವ್ಯಕ್ತಿಗಳನ್ನು ನಿಯಮಿಸಬಹುದು. ಆದ್ದರಿಂದ, ಸದನವು ಅಥವಾ ಒಕ್ಕೂಟ ಶಾಸನಸಭೆಯ ಅಧ್ಯಕ್ಷನು ನಾಮಕರಣಗಳನ್ನು ಅಂಗೀಕರಿಸುವುದಾದರೆ, ಆ ಪದ್ಧತಿ ಮತ್ತೊಂದೆಡೆ ಕೆಟ್ಟದ್ದಾಗುತ್ತದೆಂದು ಹೇಳುವುದಕ್ಕೆ ಯಾವ ಕಾರಣವಿದೆ ಎಂಬ ಮಾತನ್ನು ನಾನು ಪುನರುಚ್ಚರಿಸಬಯಸುತ್ತೇನೆ.

ಓರ್ವ ಭಾಷಣಕಾರರು ರಾಜ್ಯಗಳು ಅಥವಾ ಇತರ ಘಟಕಗಳು ಚುನಾವಣಾ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂದು ಒತ್ತಾಯಿಸಬಹುದೆಂಬ ವಾದವನ್ನು ಮಂಡಿಸಿದರು. 'ಒತ್ತಾಯ' ಎಂಬ ಪದವೇ ತುಂಬ ಕಠೋರವಾಗಿದೆ. ನಮ್ಮ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕೆಂದು ಅಥವಾ ಅಳವಡಿಸಿಕೊಳ್ಳಬೇಕೆಂದು ಇತರರನ್ನು ಒತ್ತಾಯಿಸುವ ವಿಚಾರವೇ ಒಳ್ಳೆಯದಲ್ಲ, ಆರೋಗ್ಯಕಾರಿಯಲ್ಲ. ನಮ್ಮ ಅಭಿಪ್ರಾಯದತ್ತ ಅವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಬೇಕು. ಆದ್ದರಿಂದ, ಮಾನ್ಯರೆ, ಅಧ್ಯಕ್ಷರು ನಾಮಕರಣ ಆಧಾರಿತ ತತ್ತ್ವವನ್ನು ಇಲ್ಲಿ ಅಳವಡಿಸಿಕೊಳ್ಳುವುದಾದರೆ, ಅದೇ ತತ್ತ್ವವನ್ನು ಇತರೆಡೆಯೂ ಅಳವಡಿಸಿಕೊಳ್ಳಲು ಅವಕಾಶವಿರಬೇಕು. ಆದರೆ, ಈಗಾಗಲೇ ಹೇಳಿದಂತೆ, ನಾನು ತತ್ತ್ವವನ್ನು ಆಧರಿಸಿ, ವಾದ ಮಾಡುತ್ತಿದ್ದೇನೆಯೆ ಹೊರತು, ಅಂಕಿ ಅಂಶಗಳನ್ನು ಆಧರಿಸಿ ಅಲ್ಲ. ಭಾರತ ದೇಶಕ್ಕಾಗಿ ಮಂಡಿಸಿರುವ ಸಂವಿಧಾನದ ಮೇರೆಗೆ ನಾಮಕರಣಗಳ ಪದ್ಧತಿಯನ್ನು ಒಪ್ಪಿಕೊಂಡಿರುವುದರಿಂದ, ಅದಕ್ಕೆ ಇತರೆಡೆಯೂ ಅವಕಾಶ ನೀಡಬೇಕೆಂದೂ ಮತ್ತು ಅನ್ಯಥಾ ಪ್ರಾತಿನಿಧ್ಯವಿಲ್ಲದೆ ಹೋಗುವ ಆ ಭಾಗದ ಜನತೆಗೆ ನ್ಯಾಯ ದೊರಕುತ್ತದೆಂದೂ ನಾನು ಈ ಗೌರವಾನ್ವಿತ ಸದನಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯರೆ, ನಾನು ಮತ್ತಷ್ಟು ಕುತೂಹಲಕಾರಿಯೂ ಆತಂಕಕಾರಿಯೂ ಆದ ಉತ್ತರ ಹಾಗೂ ದಕ್ಷಿಣ ಮತ್ತು ರಾಜ್ಯಗಳು ಹಾಗೂ ರಾಜ್ಯಗಳಲ್ಲದವುಗಳ ವಿಷಯಕ್ಕೆ ಬರುತ್ತೇನೆ. ಮಾನ್ಯರೆ, ಉತ್ತರವು ದಕ್ಷಿಣದಿಂದ ಬೇರೆಯಲ್ಲ, ದಕ್ಷಿಣವು ಉತ್ತರದಿಂದ ಬೇರೆಯಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಯಾರಿಗಾದರೂ ಒಳ್ಳೆಯ ಅವಕಾಶ ದೊರೆತರೆ, ಅವರಿಗೆ ಅಗತ್ಯ ಅರ್ಹತೆಗಳಿದ್ದರೆ, ಅವರು ಮೇಲೆ ಬಂದೇ ಬರುತ್ತಾರೆ

ಎಂಬುದು ನನ್ನ ನಂಬಿಕೆ. ಅವಕಾಶ ದೊರೆಯಬೇಕಷ್ಟೆ. ಅದು ಭೌಗೋಳಿಕ ವಿಭಾಗವಲ್ಲ. ಉತ್ತರ–ದಕ್ಷಿಣ, ಅದು ಇದೂ ಅಂತ ಆಗಾಗ್ಗೆ ಕೆಲವೊಂದು ಕಾರಣಕ್ಕೆ ಆತಂಕಕ್ಕೊಳಗಾಗುತ್ತಿರುವುದು ನಮಗೂ ಗೊತ್ತು. ದಕ್ಷಿಣದ ಮೈಸೂರು ರಾಜ್ಯದಿಂದ ಬಂದಿರುವ ನನ್ನಂಥವನಿಗೆ ಈ ಸಂವಿಧಾನ ರಚನಾಸಭೆಯಲ್ಲಿ, ಉತ್ತರವು ತನ್ನ ಅರ್ಹತೆಗಿಂತ ಹೆಚ್ಚಿನ ಪ್ರಾತಿನಿಧ್ಯ ಪಡೆಯುತ್ತದೆ ಎನಿಸುತ್ತದೆ, ಆದರೆ ಇನ್ನು ಮುಂದೆ ಹಾಗಾಗಬಾರದು. ಮಾನ್ಯರೆ, ವಿವಿಧ ಕಾರಣಗಳಿಗಾಗಿ ಕೆಲವೊಮ್ಮೆ ದಕ್ಷಿಣವು ಅಲಕ್ಷ್ಯಕ್ಕೊಳಗಾಗಿದೆ ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆಯಾದರೂ ಅದಕ್ಕಾಗಿ ನಾನು ಯಾರನ್ನೂ ಯಾವ ಭಾಗವನ್ನೂ ದೂಷಿಸುವುದಿಲ್ಲ. ಆದರೆ, ಸ್ವಲ್ಪಮಟ್ಟಿಗೆ ದಕ್ಷಿಣವು ನಿರ್ಲಕ್ಷ್ಯಕ್ಕೊಳಗಾಗಿದೆ ಎಂದು ನನ್ನ ಭಾವನೆ. ಇದು ದಕ್ಷಿಣದ ಜನರಿಗೆ ಅವಕಾಶ ನೀಡುವ ಪ್ರಶ್ನೆಯಾಗಿದೆ. ಅವಕಾಶ ನೀಡಿದರೆ, ದಕ್ಷಿಣದ ವ್ಯಕ್ತಿಗಳೂ ಉತ್ತರದವರನ್ನು ಮೀರಿಸದಿದ್ದರೂ, ಸಮಾನರಾಗಬಲ್ಲರೆಂಬುದು ನನ್ನ ದೃಢ ವಿಶ್ವಾಸ.

ಮಾನ್ಯರೆ, ರಾಜ್ಯಗಳು ಹಾಗೂ ರಾಜ್ಯಗಳಲ್ಲದವರ ಪ್ರಶ್ನೆ ನಿಜಕ್ಕೂ ಗೊಂದಲಕಾರಿಯಾಗಿದೆ. ಒಂದು ರಾಜ್ಯದಿಂದ ಬಂದ ನನಗೆ, ಭಾರತದ ಮುಖ್ಯಸ್ಥರಾಗಲು, ನನ್ನ ರಾಜ್ಯದಿಂದಲೇ ಒಬ್ಬರಿಗೆ ಅವಕಾಶ ನೀಡಬೇಕೆಂಬ ಅಪೇಕ್ಷೆ. ಆದರೆ ಇದು ಮತ್ತೊಂದು ತಪ್ಪು ಕಲ್ಪನೆ. ರಾಜ್ಯಗಳು ಇಡೀ ಪ್ರಭುತ್ವದ ಕೇವಲ ಮೂರನೆಯ ಒಂದು ಭಾಗದಷ್ಟಿದೆ. ಈ ಉದ್ದೇಶಕ್ಕಾಗಿ ನಿಗದಿಪಡಿಸಲಾಗುವ ಅರ್ಹತೆಗಳು ಮತ್ತು ಇತರ ಪರಿಗಣನೆಗಳು ಮತ್ತೊಂದು ಆತಂಕಕಾರಿ ಅಂಶ. ಚುನಾವಣೆ ಉದ್ದೇಶಕ್ಕಾಗಿ ರಾಜ್ಯಗಳು ಹಾಗೂ ರಾಜ್ಯಗಳಲ್ಲದವುಗಳೆಂಬ ಭೇದವನ್ನು ನಾನು ಒಪ್ಪುವುದಿಲ್ಲ. ನಾನು ಈಗಾಗಲೇ ಹೇಳಿರುವಂತೆ, ರಾಜ್ಯಗಳಿಗೆ ಅಗತ್ಯ ಅವಕಾಶ ಸೂಕ್ತ ಪ್ರಾತಿನಿಧ್ಯ ದೊರೆತರೆ, ಧೈರ್ಯವಾಗಿ, ಪ್ರಾಮಾಣಿಕವಾಗಿ ಹಾಗೂ ನಿರ್ಭೀತಿಯಿಂದ ಮಾತನಾಡಬಲ್ಲ ಕೆಚ್ಚೆದೆ ಉಳ್ಳ ವ್ಯಕ್ತಿಯು ಭಾರತದ ಸಂವಿಧಾನದಲ್ಲಿನ ಒಂದು ಸ್ಥಾನವನ್ನು ಹೊಂದಲೇಬೇಕಾಗುತ್ತದೆ.

ಮಾನ್ಯರೆ, ರಾಜ್ಯಗಳಲ್ಲದವುಗಳಿಗಾಗಲಿ ಅಥವಾ ರಾಜ್ಯಗಳಿಗಾಗಲಿ ಸಂವಿಧಾನದಲ್ಲಿ ಮೀಸಲಾತಿಯನ್ನು ಕಲ್ಪಿಸುವುದು ಅಥವಾ ಪರ್ಯಾಯ ವ್ಯವಸ್ಥೆಯನ್ನು ಮಾಡುವುದು ಕಷ್ಟ. ನಾನು 'ಸಂವಿಧಾನ' ಪದಕ್ಕೆ ಒತ್ತು ನೀಡುತ್ತಿದ್ದೇನೆ. ಮಾನ್ಯರೆ, ನಾವು ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು 'ಸಂಪ್ರದಾಯ'ಗಳಿಗೆ ಅವಕಾಶ ಕಲ್ಪಿಸಬೇಕು. ನಾವು ಈ ದಿನವನ್ನು ಭಾರತದ ಹೊಸ ಸಂವಿಧಾನದೊಂದಿಗೆ ಆರಂಭಿಸುತ್ತಿದ್ದೇವೆ. ಆ ಸಂವಿಧಾನವೇ ಬದಲಾವಣೆಯನ್ನು ತರಲಿದೆ. ನಾವು ಮೂರು ವರ್ಷಗಳ ಕಾಲ ಕೆಲಸ ಮಾಡೋಣ. ನಮಗೆ ತೊಂದರೆಯುಂಟಾದರೆ ಸಂವಿಧಾನವನ್ನು ಬದಲಾಯಿಸೋಣ. ಇದಕ್ಕಾಗಿ ನಾನು ಶಾಸನಸಭೆಯ ನೆರವನ್ನು ಯಾಚಿಸುವುದಿಲ್ಲ. ನಾನು ಈಗಾಗಲೇ ಹೇಳಿದಂತೆ, ಒಂದು ಆರೋಗ್ಯಕಾರಿ ಸಂಪ್ರದಾಯ, ಸದ್ಭಾವನೆ, ಉತ್ತರ–ದಕ್ಷಿಣಗಳ ಹಾಗೂ ರಾಜ್ಯಗಳು ಮತ್ತು ರಾಜ್ಯಗಳಲ್ಲದವುಗಳ ನಡುವಣ ಪರಸ್ಪರ ತಿಳಿವಳಿಕೆ ಸಮಸ್ಯೆಯನ್ನು ಬಗೆಹರಿಸಬಲ್ಲದು, ಹೊರತು, ಶಾಸನ ಇದನ್ನು ಬಗೆಹರಿಸಲಾರದು.

ಈ ಬಗ್ಗೆ ನಾನು ಮದ್ರಾಸಿನ ಮೇಯರ್ ಪದವಿಯ ಕಡೆಗೆ ತಮ್ಮ ಗಮನ ಸೆಳೆಯಬಯಸುತ್ತೇನೆ. ಮದ್ರಾಸಿನ ಮೇಯರ್ ಗಿರಿಯ ಬಗ್ಗೆ ಈವರೆಗೆ ಸಾಕಷ್ಟು ಜಗಳವಾಗಿದೆ. ಕೆಲವು ವರ್ಷಗಳ ಹಿಂದೆ ಸರ್ ರಾಮಸ್ವಾಮಿ ಮೊದಲಿಯರ್ ಅವರು ಆ ಮೇಯರ್ ಪದವಿಗೆ ಸಂಬಂಧಿಸಿದಂತೆ, ಒಂದು ಸಂಪ್ರದಾಯವನ್ನು ಸ್ಥಾಪಿಸಿದರು. ಆ ಸಂಪ್ರದಾಯವನ್ನು ಈಗಲೂ ಗೌರವಿಸಲಾಗುತ್ತಿದೆ. ಆ ಸಂಪ್ರದಾಯದ ಪ್ರಕಾರ ವಿವಿಧ ಸಮುದಾಯಗಳಿಗೆ ಮತ್ತು ಬೇರೆ ಬೇರೆ ವರ್ಗಗಳಿಗೆ ಸೇರಿದವರನ್ನು ಚುನಾಯಿಸಲಾಗುತ್ತಿದೆ. ಈ ನಿದರ್ಶನವನ್ನು ಕೈಗೆತ್ತಿಕೊಂಡು, ನಾವು ನಮ್ಮ ರಾಷ್ಟ್ರಪತಿಯವರ ಚುನಾವಣೆಯಲ್ಲಿ ಅದನ್ನು ಅನುಸರಿಸುವುದು ಕಷ್ಟಕರವಾಗಲಾರದು. ಮಾನ್ಯರೆ, ನಾನು ಮತ್ತೊಮ್ಮೆ ಹೇಳುವುದೆಂದರೆ, ಒಂದು ಸಂಪ್ರದಾಯ, ಸಾಮರಸ್ಯ, ಉತ್ತರ–ದಕ್ಷಿಣಗಳ ನಡುವೆ ಹಾಗೂ ರಾಜ್ಯಗಳು ಮತ್ತು ರಾಜ್ಯಗಳಲ್ಲದವುಗಳ ನಡುವಣ ಸದ್ಭಾವನೆ, ಈ ಸಮಸ್ಯೆಯನ್ನು ಬಗೆಹರಿಸಬಲ್ಲದೇ ಹೊರತು, ಯಾವುದೇ ಕಾನೂನು ಅಥವಾ ಕಾನೂನಿನ ಖಂಡವು ಅಲ್ಲ.

ಮಾನ್ಯರೆ, ಈಗ ನಾನು ಮತ್ತೊಂದು ತೀರ ಚಿಕ್ಕ ವಿಷಯ, ಆದರೆ, ದೊಡ್ಡದಾಗಿ ಬೆಳೆದಿರುವ, ಪ್ರಮಾಣವಚನ ಸ್ವೀಕಾರದ ವಿಷಯದ ಬಗ್ಗೆ ಮಾತನಾಡುತ್ತೇನೆ. ಈ ವಿಷಯವನ್ನು ಗೌರವಾನ್ವಿತ ಸ್ನೇಹಿತರು ಸಮರ್ಥವಾಗಿ ಮಂಡಿಸಿದರು. ಒಕ್ಕೂಟ ಸಂವಿಧಾನದಲ್ಲಿ ಈ ಕೊರತೆ ಹೇಗೆ ನುಸುಳಿತೋ ನನಗೆ ತಿಳಿಯದು. ಪ್ರಮಾಣವಚನಕ್ಕೆ ಇಲ್ಲಿ ಅವಕಾಶ ಕಲ್ಪಿಸಲಾಗಿಲ್ಲ. ಮಾನ್ಯರೆ, ರಾಜ್ಯದ ಮುಖ್ಯಸ್ಥರು ಉನ್ನತ ಹುದ್ದೆಯನ್ನು ಪ್ರವೇಶಿಸುವಾಗ ಪ್ರಮಾಣವಚನ ಸ್ವೀಕರಿಸುವುದು, ವಿಶ್ವದಾದ್ಯಂತದ ಎಲ್ಲ ಸುಸ್ಥಾಪಿತ ಸರ್ಕಾರಗಳಲ್ಲಿ ಸಾಮಾನ್ಯವಾದುದು. ಅದರಂತೆ, ನಮ್ಮ ರಾಷ್ಟ್ರಪತಿಗಳು ಸಮುಚಿತ ಪ್ರಾಧಿಕಾರದ ಸಮ್ಮುಖದಲ್ಲಿ, ಈಗ ನಾವು ರೂಪಿಸುತ್ತಿರುವ ಹಾಗೂ ತಾವು ಕಾರ್ಯನಿರ್ವಹಿಸುವ ಸಂವಿಧಾನವನ್ನು ಸಂರಕ್ಷಿಸುತ್ತೇನೆಂದು ಪ್ರಮಾಣ ವಚನ ಸ್ವೀಕರಿಸುವುದು ನಮ್ಮ ಭಾರತ ಸರ್ಕಾರಕ್ಕೂ ಯೋಗ್ಯವಾದುದು.

ಈ ಅಭಿಪ್ರಾಯಗಳೊಂದಿಗೆ ಮಾನ್ಯರೆ, ನಾನು ಮಂಡಿಸಿದ ತಿದ್ದುಪಡಿಗಳು ಮತ್ತು ತತ್ತ್ವಗಳನ್ನು ಸದನದ ಒಪ್ಪಿಗೆಗಾಗಿ ಶಿಫಾರಸು ಮಾಡುತ್ತಿದ್ದೇನೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ :** (ಪಶ್ಚಿಮ ಬಂಗಾಳ : ಸಾಮಾನ್ಯ) ಮಾನ್ಯರೆ, ನಾನು ಭಾಷಣ ಮಾಡಬಯಸುವುದಿಲ್ಲ. ನಾವು ಸಾಗುತ್ತಿರುವ ವೇಗ ತೀರ ನಿಧಾನವೆಂದು ಹೇಳುತ್ತಿದ್ದೇನೆ. ಈ ವೇಗದಲ್ಲಿ ನಾವು ವೇಳಾಪಟ್ಟಿಯಂತೆ ಕೆಲಸಮಾಡಲಾರೆವು ಎಂಬ ಆತಂಕ ನನಗೆ. ನಾವೀಗ ಸಂವಿಧಾನದ ಮೂಲ ತತ್ತ್ವಗಳನ್ನು ಕುರಿತು ಮಾತ್ರ ಮಾತನಾಡುತ್ತಿದ್ದೇವೆ. ಒಟ್ಟಾರೆ, ಭಾರತ ಒಕ್ಕೂಟದ ಸಂವಿಧಾನದ ಬಗ್ಗೆ ಚರ್ಚೆ ಮಾಡದೆ, ನಮ್ಮ ಮಾತುಗಳನ್ನು ಚರ್ಚೆಯ ನಿರ್ದಿಷ್ಟ ಖಂಡ ಅಥವಾ ತಿದ್ದುಪಡಿಗೆ ಮಾತ್ರ ಸೀಮಿತಗೊಳಿಸಿದರೆ ಒಳಿತು.

**ಮಾನ್ಯ ಸಭಾಧ್ಯಕ್ಷರು :** ನಾವು ಒಟ್ಟಾರೆ ಸಂವಿಧಾನವನ್ನು ಕುರಿತು ಚರ್ಚೆ ಮಾಡದೆ, ಮಂಡಿಸಿದ ನಿರ್ದಿಷ್ಟ ತಿದ್ದುಪಡಿಗೆ ಅಥವಾ ಖಂಡಕ್ಕೆ ಚರ್ಚೆಯನ್ನು ಸೀಮಿತಗೊಳಿಸಬೇಕೆಂಬ ನಿಮ್ಮ ಅಭಿಪ್ರಾಯಕ್ಕೆ ನನ್ನ ಸಂಪೂರ್ಣ ಸಹಮತವಿದೆ. ನಿರ್ದಿಷ್ಟ ಪ್ರಕರಣದಲ್ಲಿ ವಿಷಯದ ಚರ್ಚೆಯ ಸ್ವರೂಪಕ್ಕೆ ಹೆಚ್ಚಿನ ಸಮಯ ಬೇಕಾಗುವುದೆಂದು ನನಗೆ ಕಂಡುಬರುವ ಹೊರತು, ಸದಸ್ಯರು ತಮ್ಮ ಮಾತುಗಳನ್ನು ಐದು ನಿಮಿಷಗಳಿಗೆ ಸೀಮಿತಗೊಳಿಸಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಎಚ್.ವಿ. ಕಾಮತ್ :** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಈ ಸದನದಲ್ಲಿ ನಿನ್ನೆ ಎರಡು ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಒಂದು, ನನ್ನ ಸ್ನೇಹಿತರಾದ ರಾಯ್‌ಬಹದೂರ್ ಶ್ಯಾಮನಂದನ ಸಹಾಯ ಅವರಿಂದ, ಮತ್ತೊಂದು ನನ್ನ ಮಿತ್ರ ಶ್ರೀ ಚನ್ನಯ್ಯ ಅವರಿಂದ.

ಶ್ರೀಯುತ ಸಹಾಯ ಅವರ ತಿದ್ದುಪಡಿ ಎಂದರೆ, ದ್ವಿಸದನ ಶಾಸನಸಭೆಗಳಿರುವಲ್ಲಿ ಮೇಲ್ಮನೆ ಸದಸ್ಯರಿಗೂ ರಾಷ್ಟ್ರಪತಿಗಳ ಚುನಾವಣೆಯಲ್ಲಿ ಮತದಾನದ ಹಕ್ಕು ಇರಬೇಕೆಂಬುದು. ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಒಕ್ಕೂಟದ ಮೇಲ್ಮನೆ ಸದಸ್ಯರಿಗೆ ಮತದಾನಮಾಡಲು ಅವಕಾಶ ನೀಡುತ್ತಿರುವಾಗ, ಅದೇ ವಿಶೇಷಾಧಿಕಾರವನ್ನು ಘಟಕಗಳ ಮೇಲ್ಮನೆಗಳಿಗೆ ಏಕೆ ವಿಸ್ತರಿಸಬಾರದೆಂದು ಕೇಳಲಾಗುತ್ತಿದೆ. ನನ್ನ ಸ್ನೇಹಿತರು ಅಧ್ಯಾಯ ೨ನ್ನು ನೋಡಿದರೆ ರಾಜ್ಯ ಪರಿಷತ್ತುಗಳನ್ನು, ಘಟಕಗಳ ಮೇಲ್ಮನೆಗಳಿಗಿಂತಲೂ ಭಿನ್ನವಾದ ಆಧಾರದಲ್ಲಿ ರಚಿಸಲಾಗುವುದೆಂಬುದನ್ನು ಕಾಣಬಹುದು. ಮಿಗಿಲಾಗಿ, ನಾವು ರಾಷ್ಟ್ರಪತಿ ಹಾಗೂ ರಾಷ್ಟ್ರೀಯ ಶಾಸನಸಭೆಗಳನ್ನು ಒಳಗೊಂಡಿರುವ ಒಕ್ಕೂಟ ಸಂಸತ್ತಿನ ಅವಿಭಾಜ್ಯ ಅಂಗವೆಂದು ರಾಷ್ಟ್ರಪತಿಯನ್ನು ಕಲ್ಪಿಸಿಕೊಂಡಿದ್ದೇವೆ, ಹಾಗೆಯೇ ರಾಷ್ಟ್ರೀಯ ಶಾಸನಸಭೆಯು ರಾಜ್ಯಪರಿಷತ್ತುಗಳು ಮತ್ತು ಪ್ರಜಾಪ್ರತಿನಿಧಿ ಸಭೆಯನ್ನು ಒಳಗೊಂಡಿದೆ. ರಾಷ್ಟ್ರಪತಿಯು ಒಕ್ಕೂಟ ಸಂಸತ್ತಿನ ಅವಿಭಾಜ್ಯವೂ, ಅನನ್ವಯವೂ ಆದ ಭಾಗವಾಗಿರುವುದರಿಂದ, ಅದರ ಎರಡೂ ಸದನಗಳು ರಾಷ್ಟ್ರಪತಿಯ ಚುನಾವಣೆಯಲ್ಲಿ ಭಾಗವಹಿಸುವುದು ನ್ಯಾಯಸಮ್ಮತವಾದುದು.

ಇನ್ನೊಂದು ತಿದ್ದುಪಡಿಯನ್ನು ನನ್ನ ಸ್ನೇಹಿತರಾದ ಶ್ರೀ ಚನ್ನಯ್ಯ ಮಂಡಿಸಿದ್ದಾರೆ. ಆ ತಿದ್ದುಪಡಿಯು ದಿಗಿಲು ಹುಟ್ಟಿಸುವಂಥದ್ದೂ, ಪರಿಹಾಸದ್ದೂ ಆಗಿದೆ. ಮಾನ್ಯರೆ, ಕೋಮು ಆಧಾರದ ಮೇಲೆ ಭಾರತದ ವಿಭಜನೆಯನ್ನು ವಿಷಾದದಿಂದ ನಾವು ಒಪ್ಪಿಕೊಂಡಿದ್ದೇವೆ. ಪ್ರತ್ಯೇಕತಾವಾದಿಯೂ, ಕೇಂದ್ರಾಪಗಾಮಿಯೂ ಆದ ಪ್ರವೃತ್ತಿಗಳು ನೆಲೆಗೊಂಡಿದೆ. ಮಾನ್ಯರೆ, ಬಹುತೇಕ ನಾವೆಲ್ಲರೂ ನಮ್ಮ ದೇಶದ ಏಕತೆಯು ನಿಷ್ಕಳಂಕ ಸ್ಥಿತಿಯಲ್ಲಿ ಪುನರ್ ಸ್ಥಾಪಿತವಾಗುವುದನ್ನು ಕಾಣಬೇಕೆಂದಿದ್ದೇವೆ. ಇಂಥ ಪರಿಸ್ಥಿತಿಯಲ್ಲಿ ಸದನದ ಸದಸ್ಯರೊಬ್ಬರು ದೇಶದಲ್ಲಿ ಉತ್ತರ-ದಕ್ಷಿಣವೆಂಬ ವಿಭಜನೆ ಮಾಡುತ್ತಿರುವುದು ಆಶ್ಚರ್ಯಕರವಾಗಿದೆ. ಅಗಸ್ತ್ಯರು ವಿಂಧ್ಯ ಪರ್ವತಗಳನ್ನು ದಾಟಿದ ಮೇಲೆ, ರಾಮನು ವಾಲಿ ಹಾಗೂ ರಾವಣರೊಂದಿಗೆ ಯುದ್ಧ ಮಾಡಿದ ತರುವಾಯ, ಭಾರತದ ಕನಿಷ್ಠ ಉತ್ತರ-ದಕ್ಷಿಣಗಳ ನಡುವಣ ಭೇದವೂ ಅಳಿಸಿಹೋಗಿದೆ ಎಂದು ಭಾವಿಸಿದ್ದೆನು. ನಾವು ಯೂರೋಪಿನ ಮ್ಯಾಗಿನಾಟ್ ರೇಖೆಯ ಬಗ್ಗೆ ಕೇಳಿದ್ದೇವೆ. ಯೂರೋಪಿನ ಸೀಗ್ರಿಡ್ ರೇಖೆಯ ಬಗ್ಗೆ ಕೇಳಿದ್ದೇವೆ. ಅಂತೆಯೇ ಯೂರೋಪಿನಲ್ಲಿ ಕರ್ಜ್ಹನ್ ರೇಖೆ, ಡ್ಯೂರಾಂಡ್ ರೇಖೆ ಇರುವುದಾಗಿಯೂ ಕೇಳಿದ್ದೇವೆ. ಒಂದು ವೇಳೆ ಶ್ರೀ ಚನ್ನಯ್ಯ ಅವರ ತಿದ್ದುಪಡಿಯನ್ನು ಅಂಗೀಕರಿಸಿದರೆ, ಭಾರತದಲ್ಲಿ ಉತ್ತರ ಮತ್ತು ದಕ್ಷಿಣ ಭಾರತಗಳ ನಡುವೆ ಚನ್ನಯ್ಯ ರೇಖೆ ಬರುವುದು ದೂರವಿರಲಾರದು. ನಾವು ಒಂದು ಬಲಿಷ್ಠ ರಾಜ್ಯವನ್ನು ಕಟ್ಟಲು ಪ್ರಯತ್ನಿಸುತ್ತಿರುವಾಗ, ಭೂತಕಾಲದ ಎಲ್ಲ ಭಿನ್ನತೆಗಳನ್ನು ಅಳಿಸಲು ನಾವು ಯತ್ನಿಸುತ್ತಿರುವಾಗ ಕೋಮು ಆಧಾರದ ಮೇಲೆ ದೇಶದ ವಿಭಜನೆಯನ್ನು ಇಷ್ಟವಿಲ್ಲದೆ ಒಪ್ಪಿಕೊಂಡಿರುವಾಗ, ಇಂಥ ಒಂದು ತಿದ್ದುಪಡಿಯನ್ನು ಈ ಸದನದ ಮುಂದೆ ಪ್ರತಿಪಾದಿಸುತ್ತಿರುವುದು ಆಶ್ಚರ್ಯಕರವಾಗಿದೆ. ಮಾನ್ಯರೆ, ನಿರ್ದಿಷ್ಟವಾಗಿ ಈ ಕಾರಣಕ್ಕಾಗಿಯೇ, ಕನಿಷ್ಠ ಈಗಿನ ಸಂದರ್ಭದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗೂ ನಾನು ವಿರೋಧಿಯಾಗಿದ್ದೇನೆ. ಸದ್ಯ ನಮ್ಮೆಲ್ಲ ಶಕ್ತಿಯನ್ನು ಬಲಿಷ್ಠ ಭಾರತ ಒಕ್ಕೂಟವನ್ನು ಕಟ್ಟಲು ಬಳಸೋಣ, ನಮ್ಮ ದೇಶದ ಏಕತೆಯನ್ನು ಪುನಃಸ್ಥಾಪಿಸಲು ನಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸೋಣ, ಮಾನ್ಯರೆ, ಬಹುದಿನದಿಂದ ಹಂಬಲಿಸುತ್ತಿರುವ ನಮ್ಮ ಪ್ರೀತಿಯ ಬಲಿಷ್ಠ ಐಕ್ಯ ಭಾರತದ ಕಲ್ಯಾಣಕ್ಕಾಗಿ, ವಿಶ್ವಶಾಂತಿಗಾಗಿ ಮುನ್ನಡೆಯೋಣ. ಸ್ವತಂತ್ರ ಭಾರತದ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು, ಪಾರಸಿಗಳು ಅಥವಾ ಸಿಖ್ಖರು ಎಲ್ಲರೂ ಒಂದಾಗೋಣ. ಒಂದೇ ಮಾತೃ ಭೂಮಿಯ ಪ್ರಜೆಗಳಾಗಿ, ಬಲಿಷ್ಠ ಹಾಗೂ ಸ್ವತಂತ್ರ ಭಾರತದ ಗುರಿಯನ್ನು ಸಾಧಿಸೋಣ. ಮಾನ್ಯರೆ, ಈ ವಿಷಯವೇ ನಮಗೆ ಅತ್ಯಂತ ಪ್ರಮುಖವಾಗಿದೆ. ದೇಶದ ಐಕ್ಯವು ಪುನರ್‌ಸ್ಥಾಪಿತವಾಗಲೆಂಬ ಕನಸು ನನಸಾಗಲು ನಾವು ಇನ್ನೂ ಭರವಸೆ ಇಟ್ಟುಕೊಂಡಿದ್ದೇವೆ. ಎಲ್ಲ ಭಾರತೀಯರ ತುಟಿಗಳು ಉಲಿಯುತ್ತಿರುವ ಪ್ರಸಿದ್ಧ ಹಾಡಿನ ಆಶಯವೂ ಅದೇ ಆಗಿದೆ:

*(ಹರ್ ಸೂಬ ಕೇ ರಹನೇವಾಲೆ ಹರ್ ಮಝುಬ್ ಕೆ ಪ್ರಾಣಿ*

*ಸಬ್ ಭೇದ್ ಔರ್ ಫರಕ್ ಮಿಟ್‌ಕೆ ಸಬ್ ಗೋಡ ಮೇ*

*ತೇರಿ ಆಕೇ ಗೂನ್‌ಥೇ ಪ್ರೇಮ್ ಕೀ ಮಾಲಾ*

*ಸೂರಜ್ ಬನ್‌ಕರ್ ಜಗ್ ಪರ್ ಚಮ್‌ಕೆ ಭಾರತ್ ನಾಮ ಸುಭಾಗಾ.)*

ನಾನು ನನ್ನ ಸ್ನೇಹಿತರಾದ ಶ್ರೀ ಚನ್ನಯ್ಯನವರು ನಿನ್ನೆ ಪ್ರತಿಪಾದಿಸಿದ ಉತ್ತರ-ದಕ್ಷಿಣಗಳ ವಿಭಜನೆಯ ಸಿದ್ಧಾಂತವನ್ನು ವಿರೋಧಿಸುತ್ತೇನೆ. ಮಾನ್ಯರೆ, ನನ್ನ ಸ್ನೇಹಿತರೊಬ್ಬರು ದಕ್ಷಿಣವನ್ನು ಅಲಕ್ಷಿಸಲಾಗಿದೆ ಎಂದು ಹೇಳಿದರು. ಭಾರತದ ದಕ್ಷಿಣ ಭಾಗವನ್ನು ಹೇಗೆ, ಯಾವ ರೀತಿ ಅಲಕ್ಷಿಸಲಾಗಿದೆ ನನಗೆ ತಿಳಿಯದು. ನನ್ನ ಸ್ನೇಹಿತರು ದಕ್ಷಿಣವೆಂದರೆ ಕೇವಲ ಮದ್ರಾಸು ಎನ್ನುವುದನ್ನು ನಾನು ಒಪ್ಪಲಾರೆ. ನಾನು ಮೊದಲಿಗೆ ಅವರನ್ನು ಭಾರತದ ದಕ್ಷಿಣ ಎಂದರೇನು? ದಕ್ಷಿಣವೆಂದರೆ ಕೇವಲ ಮದ್ರಾಸು ಅಥವಾ ಮದ್ರಾಸು ಸೇರಿದಂತೆ ಬಾಂಬೆಯೇ? ಅದರಲ್ಲಿ ಇತರ ವಿವಿಧ ಘಟಕ ಭಾಗಗಳೂ ಸೇರಿವೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ನನ್ನ ಪ್ರಕಾರ ದಕ್ಷಿಣವನ್ನು ಅಲಕ್ಷಿಸಲಾಗಿಲ್ಲ. ಇಂದು ದಕ್ಷಿಣದ ಹೈದರಾಬಾದ್ ಮತ್ತು ತಿರುವಾಂಕೂರು ಎರಡೂ ರಾಜ್ಯಗಳು

ನಮಗೆ ತಲೆನೋವಾಗಿವೆ. ಇದು ಅಲಕ್ಷ್ಯದ ಪರಿಣಾಮವೊ, ಪ್ರಾಮುಖ್ಯ ದೊರೆಯದ ಫಲಿತವೊ ನನ್ನ ಸ್ನೇಹಿತರು ಏನನ್ನುವರೋ? ದಕ್ಷಿಣದ ಈ ಎರಡೂ ರಾಜ್ಯಗಳು ನಮ್ಮ ಬಹುಪಾಲು ರಾಜನೀತಿಜ್ಞರಿಗೆ ಮತ್ತು ನಾಯಕರಿಗೆ ತಲೆನೋವು ನೀಡುತ್ತಿವೆ. ದಕ್ಷಿಣಭಾರತವನ್ನು ಅಲಕ್ಷಿಸಲಾಗಿದೆ ಎಂದು ನನ್ನ ಸ್ನೇಹಿತರು ಭಾವಿಸಿದರೆ ನಾನೇನೂ ಹೇಳಲಾರೆ. ಬಾಂಬೆ ಮತ್ತು ಮದ್ರಾಸಿನ ಶ್ರೇಷ್ಠ, ಪ್ರಮುಖ ನಾಯಕರು ನಮ್ಮ ಮಾತೃಭೂಮಿಯ ರಾಜಕೀಯ ವಿಕಾಸಕ್ಕೆ ನೀಡಿರುವ ಕೊಡುಗೆಯನ್ನು ನಾವು ಹೇಗೆ ಮರೆತೇವು.

ಮಾನ್ಯರೆ, ಒಕ್ಕೂಟದ ರಾಷ್ಟ್ರಪತಿಗಳು ಪ್ರಮಾಣವಚನ ಸ್ವೀಕರಿಸಬೇಕೆಂಬ ವಿಷಯವನ್ನು ಪ್ರಸ್ತಾವಿಸಲಾಗಿದೆ. ಪ್ರಮಾಣವಚನದ ವಿಷಯವನ್ನು ಇಲ್ಲಿ ಪ್ರಸ್ತಾವಿಸುವುದು ಸೂಕ್ತವಲ್ಲ ಎಂಬುದನ್ನು ನಾನೂ ಒಪ್ಪುತ್ತೇನೆ. ಸಂವಿಧಾನದ ಅಂತಿಮ ಕರಡು ಸಿದ್ಧಪಡಿಸುವಾಗ, ಖಂಡಿತವಾಗಿ, ಪ್ರಮಾಣವಚನಕ್ಕೂ ಅದರಲ್ಲಿ ಅವಕಾಶ ದೊರೆಯಲಿದೆ. ಇಲ್ಲಿ ನಾವು ಸಂವಿಧಾನದ ಮೂಲತತ್ತ್ವಗಳನ್ನು ಮಾತ್ರ ಚರ್ಚಿಸುತ್ತಿದ್ದೇವೆ. ಆದ್ದರಿಂದ ರಾಷ್ಟ್ರಪತಿಗಳು ಕೈಗೊಳ್ಳುವ ಪ್ರಮಾಣವಚನದ ವಿಷಯ ಪ್ರಸ್ತಾವಿಸುವುದು ಸೂಕ್ತವಲ್ಲ. ಆ ವಿಷಯಕ್ಕೆ ಬಂದರೆ, ಶಾಸನಸಭೆಯ ಸದಸ್ಯರೂ ದೇಶಕ್ಕೆ ನಿಷ್ಠೆ ಇರುವ ಬಗ್ಗೆ ಪ್ರಮಾಣವಚನ ಕೈಗೊಳ್ಳಬೇಕೆಂದು ಹೇಳಬಹುದು. ನೀವು ಆ ಬಗ್ಗೆ ಏನನ್ನೂ ಹೇಳುತ್ತಿಲ್ಲ. ವಾಸ್ತವವಾಗಿ ಸಂವಿಧಾನದ ಕರಡು ರಚಿಸುವಾಗ ಪರಿಗಣಿಸಬೇಕಾದ ವಿವರಗಳು ಇವು. ಮಾನ್ಯರೆ, ನಾನಿನ್ನು ಸದನದ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ರಾಯ್ ಬಹಾದೂರ್ ಶ್ಯಾಮನಂದನ ಸಹಾಯ ಮತ್ತು ನನ್ನ ಸ್ನೇಹಿತರಾದ ಶ್ರೀ ಚನ್ನಯ್ಯ ಅವರು ಮಂಡಿಸಿದ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ.

**ಶ್ರೀ ಅಜಿತ್ ಪ್ರಸಾದ್ ಜೈನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ನಾನು ಜವಾಹರಲಾಲ್ ನೆಹರು ಮಂಡಿಸಿದ ನಿರ್ಣಯವನ್ನು ಬೆಂಬಲಿಸುತ್ತೇನೆ. ರಾಷ್ಟ್ರಪತಿಯ ಚುನಾವಣೆಗೆ ಇಲ್ಲಿ ಸೂಚಿಸಿರುವ ವಿಧಾನವು ಅತ್ಯಂತ ಸೂಕ್ತವಾಗಿದೆ. ಇಲ್ಲಿನ ಕೆಲವು ಸದಸ್ಯರು ವಯಸ್ಕಮತದಾನದ ಮೂಲಕ ಚುನಾಯಿಸಬೇಕೆಂದು ಪ್ರಸ್ತಾವಿಸಿದ್ದಾರೆ. ಈ ಪ್ರಸ್ತಾವನೆಯ ವಿರುದ್ಧ ಹಲವಾರು ವಾದಗಳನ್ನು ಮಂಡಿಸಿದ್ದಾರೆ. ನಿರ್ಣಯದ ಒಂದೆಡೆಯಲ್ಲಿ ಬೇರೆ ಬೇರೆ ಸದಸ್ಯರ ಮತಗಳಿಗೆ ಬೇರೆ ಬೇರೆ ಮೌಲ್ಯಗಳಿರುತ್ತವೆ ಎಂದು ಹೇಳಲಾಗಿದೆ. ಅಂದರೆ, ಕಡಿಮೆ ಸಂಖ್ಯೆಯ ಜನರನ್ನು ಪ್ರತಿನಿಧಿಸುವ ಸದಸ್ಯನ ಮತಕ್ಕೆ ಕಡಿಮೆ ಮೌಲ್ಯ ಎಂದು ಪರಿಗಣಿಸಿದರೆ; ಹೆಚ್ಚಿನ ಸಂಖ್ಯೆಯ ಜನರನ್ನು ಪ್ರತಿನಿಧಿಸುವ ಮತಕ್ಕೆ ಹೆಚ್ಚಿನ ಮೌಲ್ಯ ಎಂದು ಪರಿಗಣಿಸಲಾಗುವುದು. ಇದು ಪರೋಕ್ಷ ಚುನಾವಣೆಯ ಕೊರತೆಯನ್ನು ಸರಿದೂಗಿಸುವುದೆ ಎಂದಷ್ಟೇ ಹೇಳಬಯಸುತ್ತೇನೆ. ೧೩೦ರಿಂದ ೧೪೦ ಮಿಲಿಯನ್ ಜನಸಂಖ್ಯೆ ಇರುವ ಅಮೆರಿಕದ ರಾಷ್ಟ್ರಾಧ್ಯಕ್ಷರನ್ನು ವಯಸ್ಕಮತದಾನದ ಮೂಲಕ ಚುನಾಯಿಸಲಾಗುವ ಉದಾಹರಣೆಯನ್ನು ನೀಡಲಾಗುತ್ತಿದೆ. ಅಮೆರಿಕದಲ್ಲೂ ರಾಷ್ಟ್ರಾಧ್ಯಕ್ಷರ ಚುನಾವಣೆಯು ನೇರವಾಗಿಯಲ್ಲದೆ, ಚುನಾಯಕಗಣದಿಂದ ನಡೆಯಲೆಂಬ ಅಪೇಕ್ಷೆ ವ್ಯಕ್ತವಾಗಿದ್ದಿತು. ಇಲ್ಲಿಯೂ ನಾವು ಜನರಿಂದ ಆಯ್ಕೆಯಾದ ಸದಸ್ಯರಿಂದ ಕೂಡಿದ 'ಚುನಾಯಕಗಣ'ದ ಪ್ರಸ್ತಾವವನ್ನು ಹೊಂದಿದ್ದೇವೆ. ಹೀಗಾಗಿ ರಾಷ್ಟ್ರಪತಿಗಳ ಚುನಾವಣೆಯು ಜನತೆಯ ಆಯ್ಕೆಗನುಸಾರವಾಗಿಯೇ ಆಗುತ್ತದೆ. ನಾನು ಹೇಳುವುದಿಷ್ಟು: ಆದರೆ, ಪಂಡಿತ್ ಜವಾಹರಲಾಲ್ ನೆಹರು ಪ್ರಸ್ತಾವಿಸಿರುವ ಯೋಜನೆಯಲ್ಲಿ ಒಂದು ತೊಂದರೆ ಇದೆ ಅನಿಸುತ್ತದೆ. ಅವರ ಪ್ರಕಾರ ರಾಷ್ಟ್ರಪತಿಯನ್ನು 'ಚುನಾಯಕ ಗಣ'ದ ಮೂಲಕ ಚುನಾಯಿಸಲಾಗುವುದು. ಒಕ್ಕೂಟ ಸಂಸತ್ತಿನ ಎರಡೂ ಸದನಗಳ – ರಾಜ್ಯ ಪರಿಷತ್ತುಗಳ ಹಾಗೂ ಲೋಕಸಭೆಯ – ಎಲ್ಲ ಸದಸ್ಯರು ಚುನಾಯಕ ಗಣದ ಸದಸ್ಯರಾಗಿರುತ್ತಾರೆ. ಅವರೇ ರಾಷ್ಟ್ರಪತಿಯ ಚುನಾವಣೆಯಲ್ಲಿ ಭಾಗವಹಿಸುತ್ತಾರೆ. ಪ್ರಾಂತೀಯ ಶಾಸನ ಸಭೆಗಳ ಹಾಗೂ ರಾಜ್ಯ ಶಾಸನ ಸಭೆಗಳ ಸದಸ್ಯರಿಗೂ ರಾಷ್ಟ್ರಪತಿಯ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕನ್ನು ನೀಡಲಾಗಿದೆ. ಘಟಕ ಶಾಸನ ಸಭೆಗಳ ಸದಸ್ಯರ ಮತಗಳಿಗೆ ಸಂಬಂಧಿಸಿದಂತೆ, ಪ್ರಸ್ತಾವನೆಯಲ್ಲಿ ಅವರಿಗೆ ಬೇರೆ ಬೇರೆ ಮೌಲ್ಯವನ್ನು ನೀಡಲಾಗುವುದು ಎನ್ನಲಾಗಿದೆ.

ಮಾನ್ಯರೆ, ಹತ್ತು ಸಾವಿರ ಮತದಾರರನ್ನು ಪ್ರತಿನಿಧಿಸುವ ಸದಸ್ಯನ ಒಂದು ಮತವನ್ನು, ಒಂದು ಮಿಲಿಯನ್ ಮತಗಳನ್ನು ಪ್ರತಿನಿಧಿಸುವ ಸದಸ್ಯರ ಹತ್ತು ಮತಗಳಿಗೆ ಸಮವೆಂದು ಪರಿಗಣಿಸಲಾಗುವುದು. ಘಟಕ ಶಾಸನ ಸಭೆಗಳಿಗೆ ಸಂಬಂಧಿಸಿರುವ ಮಟ್ಟಿಗೆ ಈ ವಿಧಾನವು ಸೂಕ್ತ ಹಾಗೂ ಅಪೇಕ್ಷಣೀಯ. ಆದರೆ, ಒಕ್ಕೂಟ ಸಂಸತ್ತಿನ (ಲೋಕಸಭೆ ಹಾಗೂ ರಾಜ್ಯಗಳ ಪರಿಷತ್ತುಗಳು) ಸದಸ್ಯರ ಮತಗಳಿಗೆ ಮೌಲ್ಯವನ್ನು ನೀಡಲಾಗಿದೆಯೇ ಅಥವಾ ಅವರ ಮತಗಳ ಮೌಲ್ಯವೇನು ಅಥವಾ ಆ ಮತಗಳ ಸ್ಥಾನವೇನು ಎಂದು ಪ್ರಸ್ತಾವದಲ್ಲಿ ಸ್ಪಷ್ಟಪಡಿಸಲಾಗಿರುವುದಿಲ್ಲ. ಘಟಕ ಶಾಸನಸಭೆಗಳಿಗೆ ಸಂಬಂಧಿಸಿದಂತೆ, ಪ್ರಸ್ತಾವನೆ ಕುರಿತ ಒಂದು ವ್ಯಾಖ್ಯಾನದಂತೆ, ಲೋಕಸಭೆಯ ಪ್ರತಿ ಸದಸ್ಯರು ಒಂದು ಮತವನ್ನು ಹೊಂದಿರುತ್ತಾರೆಂದು ತೋರುತ್ತದೆ. ಇದು ನಿಜವಾದರೆ, ಈ ಪ್ರಸ್ತಾವನೆ ಸರಿಯಲ್ಲವೆನಿಸುತ್ತದೆ. ನಮ್ಮ ಮುಂದೆ ಮಂಡಿಸಿದ ಪ್ರಸ್ತಾವದಲ್ಲಿ, ಲೋಕಸಭೆಯ ಪ್ರತಿಯೊಬ್ಬ ಸದಸ್ಯನು ಸರಾಸರಿ ಒಂದು ಮಿಲಿಯನ್ ಮತಗಳನ್ನು ಪ್ರತಿನಿಧಿಸುತ್ತಾನೆ ಎಂದು ಹೇಳಲಾಗಿದೆ. ಅವನಿಗೆ ಒಂದು ಮತ ಬಂದರೆ, ಅಂದರೆ, ಹತ್ತು ಸಾವಿರ ಮತದಾರರನ್ನು ಪ್ರತಿನಿಧಿಸುವ ಘಟಕ ಶಾಸನ ಸಭೆಯ ಸದಸ್ಯರು ಹತ್ತು ಮತಗಳನ್ನು ಪಡೆಯುವವರು, ಒಕ್ಕೂಟ ಶಾಸನಸಭೆಯ, ಅಂದರೆ ಒಂದು ಮಿಲಿಯನ್ ಮತದಾರರನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯನು, ಸದ್ಯದ ಯೋಜನೆಯ ಪ್ರಕಾರ ಒಂದು ಮತವನ್ನು ಮಾತ್ರ ಪಡೆಯುವನು. ಇದು ನ್ಯಾಯಯುತವಲ್ಲ ಎಂದು ನನ್ನ ಅಭಿಪ್ರಾಯ. ಒಕ್ಕೂಟ ಸಂಸತ್ತಿನ ಸದಸ್ಯರ ಮತಗಳಿಗೆ ಮೌಲ್ಯ ನೀಡುವ ಪ್ರಶ್ನೆಯನ್ನು ಮರುಪರಿಶೀಲಿಸಿ, ಜನರಿಗೆ ಸೂಕ್ತ ಪ್ರಾತಿನಿಧ್ಯ ದೊರೆಯುವಂತೆ ಮಾಡಬೇಕು.

ಇನ್ನೊಂದು ತೊಂದರೆಯೂ ಇದೆ. ರಾಜ್ಯವು ಕೆಲವೊಂದು ಬಗೆಯ ನಾಮಕರಣಗಳನ್ನು ಮಾಡುವ ಸಾಧ್ಯತೆ ಇದೆ; ಈ ನಾಮಕರಣ ಸದಸ್ಯರ ಮತಗಳ ಮೌಲ್ಯ ಎಷ್ಟೆಂದು ಹೇಳುವುದು ಕಷ್ಟಕರ. ಮತ್ತೆ ಕೆಲವೊಂದು ಭೌಗೋಳಿಕವಲ್ಲದ ಮತಕ್ಷೇತ್ರಗಳೂ ಇರಬಹುದು; ಉದಾಹರಣೆಗೆ : ನಮ್ಮ ಮತಕ್ಷೇತ್ರಗಳಲ್ಲಿನ ವಿಶ್ವವಿದ್ಯಾಲಯಗಳು, ಪ್ರಯೋಗಶಾಲೆಗಳು ಇತ್ಯಾದಿ.

ಪ್ರಾಂತ್ಯಗಳ ಮಟ್ಟಿಗೆ, ಪ್ರಾದೇಶಿಕ ಮತಕ್ಷೇತ್ರಗಳಿರಬೇಕೆಂದೂ, ವಿಶೇಷ ಮತಕ್ಷೇತ್ರಗಳಿರಬಾರದೆಂದೂ ನಾವು ನಿರ್ಧರಿಸಿದ್ದೇವೆ. ಆದರೆ, ರಾಜ್ಯಗಳಲ್ಲಿ, ಕೆಲವೊಂದು ಪ್ರಾದೇಶಿಕ, ಹಾಗೂ ಪ್ರಾದೇಶಿಕವಲ್ಲದ ಮತಕ್ಷೇತ್ರಗಳು ಮತ್ತು ಕೆಲವು ನಾಮಕರಣಗಳು ಇರುವ ಸಾಧ್ಯತೆ ಇದೆ. ನಾಮಕರಣಗೊಂಡ ಸದಸ್ಯರ ಮತಗಳಿಗೆ ನೀಡಲಾಗುವ ಮೌಲ್ಯದ ವಿಧಾನದಿಂದಲೂ ತೊಂದರೆ ಉದ್ಭವಿಸಬಹುದು. ಒಕ್ಕೂಟ ಸಂಸತ್ತಿನ ಸದಸ್ಯರ ಮತಗಳಿಗೂ ಮೌಲ್ಯವನ್ನು ನೀಡಬೇಕೆಂದು ನಿರ್ಧರಿಸಿದರೆ, ಪ್ರಸ್ತಾವದಲ್ಲಿ ನಾಮಕರಣಗೊಂಡ ಸದಸ್ಯರ ಮತಗಳ ಮೌಲ್ಯವೇನು ಎಂಬ ತೊಂದರೆಯೂ ಉದ್ಭವಿಸುತ್ತದೆ.

ಆದಾಗ್ಯೂ, ನಾನು ಒಕ್ಕೂಟ ಸಂಸತ್ತಿನ ಸದಸ್ಯರ ಮತಗಳನ್ನು ವರ್ಗೀಕರಿಸಿ ಅವುಗಳಿಗೆ ಮೌಲ್ಯಗಳನ್ನು ನೀಡುವ ಬಗ್ಗೆ ಸ್ಪಷ್ಟ ಉಪಬಂಧ ಬೇಕೆಂಬ ಕಡೆಗೆ ತಮ್ಮ ಗಮನವನ್ನು ಸೆಳೆಯುತ್ತೇನೆ.

ಈ ನನ್ನ ಸಲಹೆಗಳನ್ನು ತಾವು ಪರಿಗಣಿಸುತ್ತೀರೆಂದು ಆಶಿಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು :** ಪಟ್ಟಿಯಲ್ಲಿ ಇನ್ನೂ ಮೂರು ಹೆಸರುಗಳಿವೆ. ಇನ್ನೂ ಕೆಲವು ಸದಸ್ಯರು ಮಾತನಾಡಲು ಎದ್ದು ನಿಂತಿದ್ದಾರೆ. ಇಂದು ನಾವು ಈಗಾಗಲೇ ಒಂದು ಗಂಟೆ ಕಾಲ ತೆಗೆದುಕೊಂಡಿದ್ದೇವೆ, ಈ ಖಂಡದ ಬಗ್ಗೆ ನಿನ್ನೆಯೂ ಸುಮಾರು ಒಂದು ಗಂಟೆ ತೆಗೆದುಕೊಂಡಿದ್ದೆವು. ಹೀಗೆ ನಾವು ಚರ್ಚಿಸುತ್ತಾ ಹೋದರೆ, ನಾವು ಮುಗಿಸಬೇಕೆಂದಿರುವ ಮುಂದಿನ ಗುರುವಾರದ ವೇಳೆಗೆ, ಒಂದು ಭಾಗವನ್ನೂ ಪೂರ್ಣಗೊಳಿಸಲಾರೆವು. ಆದ್ದರಿಂದ, ನಾನು, ಸದಸ್ಯರು ತಮ್ಮ ಭಾಷಣಗಳನ್ನು ಕಡಿಮೆ ಮಾಡಬೇಕೆಂದು ಮತ್ತು ಒಂದು ಅಂಶದ ಬಗ್ಗೆ ಯಾರಾದರೂ ಈಗಾಗಲೇ ಚರ್ಚಿಸಿದ್ದರೆ, ಮತ್ತೆ ಅದೇ ಅಂಶದ ಬಗ್ಗೆ ಮಾತನಾಡಿ ಅದೇ ವಾದಗಳನ್ನು ಪುನರುಚ್ಚರಿಸಬಾರದೆಂದೂ ಮನವಿ ಮಾಡುತ್ತೇನೆ.

**ಡಾ. ಪಿ.ಎಸ್. ದೇಶಮುಖ್** : ಮಾನ್ಯರೆ, ಹೆಸರು ನೀಡುವ ಪದ್ಧತಿಯನ್ನು ನಿಲ್ಲಿಸಿ, ಅಧ್ಯಕ್ಷರ ಕಣ್ಣಿಗೆ ಬೀಳುವ ಸದಸ್ಯರಿಗೆ ಮಾತ್ರ ಅವಕಾಶ ನೀಡಬೇಕೆಂದು ನಾನು ಸಲಹೆ ಮಾಡಬಹುದೆ?

**ಮಾನ್ಯ ಸಭಾಧ್ಯಕ್ಷರು** : ನಾನು ಒಪ್ಪಿದ್ದೇನೆ. ಇನ್ನು ಮುಂದೆ ನಾನು ಯಾವುದೇ ಚೀಟಿಯನ್ನು ಸ್ವೀಕರಿಸುವುದಿಲ್ಲ. ನನ್ನ ಕಣ್ಣಿಗೆ ಬಿದ್ದವರಿಗೆ ಮಾತನಾಡಲು ಅವಕಾಶ ನೀಡುತ್ತೇನೆ.

**ಶ್ರೀ ಯುಧಿಷ್ಠಿರ ಮಿಸ್ತ್ರ** (ಪೂರ್ವ ರಾಜ್ಯಗಳು ಗುಂಪು ೧) : ಮಾನ್ಯರೆ, ಖಂಡದ ಉಪಖಂಡ(೨)(ಬಿ)ಗೆ ಶ್ರೀ ಚೆಂಗಲರಾಯ ರೆಡ್ಡಿ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಶ್ರೀ ರೆಡ್ಡಿ ಅವರು 'ಸದಸ್ಯರು' ಪದಕ್ಕೆ ಬದಲಾಗಿ 'ಚುನಾಯಿತ ಸದಸ್ಯರು' ಎಂಬ ಪದಗಳನ್ನು ಬಳಸಬೇಕೆಂದು ತಿದ್ದುಪಡಿಯನ್ನು ಮಂಡಿಸಿದ್ದಾರೆ. ಇಲ್ಲಿ ಸೇರಿಸಬೇಕೆಂದಿರುವ ಪದವು ಅನಗತ್ಯ, ತೋರಿಕೆಯದು ಎಂದು ಇಲ್ಲಿನ ಅನೇಕ ಗೌರವಾನ್ವಿತ ಸದಸ್ಯರಿಗೆ ಕಂಡುಬರುತ್ತಿದೆ. ಏಕೆಂದರೆ, ಪ್ರಸಕ್ತ ಸಂವಿಧಾನದಡಿಯಲ್ಲಿ ಪ್ರಾಂತೀಯ ಶಾಸನಸಭೆಗಳು ನಾಮಕರಣ ಸದಸ್ಯರನ್ನು ಹೊಂದಿರುವುದಿಲ್ಲ. ಆದರೆ, ರಾಜ್ಯ ಶಾಸನಸಭೆಗಳ ಸಂವಿಧಾನದಲ್ಲಿ ಸಂವಾದಿ ಬದಲಾವಣೆ ಇಲ್ಲವೆಂದು ನಾನು ಗೌರವಾನ್ವಿತ ಸದಸ್ಯರಿಗೆ ನೆನಪಿಸಬಯಸುತ್ತೇನೆ. ಬಹುಪಾಲು ರಾಜ್ಯಗಳಲ್ಲಿ, ಅದರಲ್ಲೂ ಚಿಕ್ಕ ರಾಜ್ಯಗಳಲ್ಲಿ, ಶಾಸನಸಭೆಗಳೇ ಇಲ್ಲ. ನಾನು ಒರಿಸ್ಸಾ ರಾಜ್ಯಗಳನ್ನು ಪ್ರತಿನಿಧಿಸುತ್ತೇನೆ. ಕೆಲವು ರಾಜ್ಯಗಳಲ್ಲಿ ಶಾಸನಸಭೆಗಳೇ ಇಲ್ಲವೆಂದು ನಾನು ಸದನಕ್ಕೆ ತಿಳಿಸುತ್ತಿದ್ದೇನೆ. ಶಾಸನಸಭೆಗಳು ಇರುವೆಡೆ ನಾಮಕರಣಗೊಂಡ ಸದಸ್ಯರ ಸಂಖ್ಯೆ ಎಷ್ಟು ದೊಡ್ಡದಿದೆ ಎಂದರೆ, ಶಾಸನಸಭೆಗಳಲ್ಲಿ ಚುನಾಯಿತ ಸದಸ್ಯರಿಗೆ ದನಿಯೇ ಇಲ್ಲ. ಕೆಲವು ರಾಜ್ಯಗಳಲ್ಲಿ, ರಾಜ್ಯ ಕಾಂಗ್ರೆಸ್ ಹಾಗೂ ಪ್ರಜಾಸಮಿತಿಗಳು ಅತೃಪ್ತಿಕರ ಚುನಾವಣೆ ನಡೆದಿದೆ ಎಂದು ಶಾಸನಸಭೆಗಳಿಗೆ ಚುನಾವಣೆಗಳನ್ನು ಬಹಿಷ್ಕರಿಸಿವೆ. ಎಲ್ಲಿ ಶಾಸನಸಭೆಗಳು ಇವೆಯೋ ಅಲ್ಲಿ ಮತದಾನದ ಹಕ್ಕು ಸಂಕುಚಿತ, ಕೋಮು ಆಧಾರದ ಮೇಲೆ ನಡೆದಿವೆ; ಅವುಗಳಲ್ಲಿ ಅಪಾರ ಸಂಖ್ಯೆಯ ನಾಮಕರಣಗೊಂಡ ಸದಸ್ಯರೂ ಇದ್ದಾರೆ. ಮಾನ್ಯರೆ, ನಾಮಕರಣಗೊಂಡ ಸದಸ್ಯರಿಗೆ ರಾಷ್ಟ್ರಪತಿಯ ಚುನಾವಣೆಯಲ್ಲಿ ಪಾಲುಗೊಳ್ಳಲು ಅವಕಾಶ ನೀಡಿದರೆ, ಕೆಲವು ರಾಜ್ಯಗಳು ಅಸಮರ್ಪಕವೂ, ಖೊಟ್ಟಿಯೂ ಆದ ಪ್ರಾತಿನಿಧಿಕ ಶಾಸನಸಭೆಗಳನ್ನು ಸ್ಥಾಪಿಸಿ, ಪ್ರಜಾಪ್ರಭುತ್ವ ವಿರೋಧಿ, ವಿಧಾನಗಳಿಂದ ಚುನಾವಣೆಯನ್ನು ಪ್ರಭಾವಿಸಲು ಯತ್ನಿಸಬಹುದು.

ಭವಿಷ್ಯದ ಭಾರತ ಗಣತಂತ್ರದ ರಾಷ್ಟ್ರಪತಿಗಳ ಚುನಾವಣೆಯಲ್ಲಿ ನಾಮಕರಣಗೊಂಡ ಸದಸ್ಯರು ಭಾಗವಹಿಸಲು ಅವಕಾಶ ನೀಡಿದರೆ, ಅದು ಪ್ರಜಾಪ್ರಭುತ್ವದ ಅಣಕವಾಗುತ್ತದೆ. ಆದ್ದರಿಂದ, ನಾನು ನನ್ನ ಗೌರವಾನ್ವಿತ ಮಿತ್ರ ಶ್ರೀ ರೆಡ್ಡಿ ಅವರು ಮಂಡಿಸಿದ ತಿದ್ದುಪಡಿಗೆ ಬೆಂಬಲ ಸೂಚಿಸುತ್ತೇನೆ.

ಅದೇ ಸಮಯದಲ್ಲಿ, ಮಾನ್ಯರೆ, ಶ್ರೀ ಚಂದ್ರಶೇಖರಯ್ಯ ಅವರು ಮಂಡಿಸಿದ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ರಾಷ್ಟ್ರಪತಿಯನ್ನು ರಾಜ್ಯಗಳು ಹಾಗೂ ರಾಜ್ಯಗಳಲ್ಲದ ಘಟಕಗಳಿಂದ ಪರ್ಯಾಯವಾಗಿ ಆಯ್ಕೆಮಾಡಬೇಕೆಂದು ಅವರು ಹೇಳುತ್ತಾರೆ. ರಾಷ್ಟ್ರಪತಿಗಳ ಚುನಾವಣೆಯಲ್ಲಿ ಅಂಥ ಪರಿಮಿತಿ ಹೇರಿದರೆ ರಾಜ್ಯಗಳಿಗೆ ಅಪಮಾನ ಮಾಡಿದಂತೆ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ನನಗೆ ಚರ್ಚೆಯಲ್ಲಿ ಭಾಗವಹಿಸುವ ಯಾವ ಇಚ್ಛೆಯೂ ಇರಲಿಲ್ಲ. ಆದರೆ ಮೈಸೂರು ರಾಜ್ಯದ ಗೌರವಾನ್ವಿತ ಸದಸ್ಯರಾದ ಶ್ರೀ ರೆಡ್ಡಿ ಅವರು ರಾಷ್ಟ್ರಪತಿಯ ಚುನಾವಣೆಯಲ್ಲಿ ಪರ್ಯಾಯ ಪದ್ಧತಿಯನ್ನು ಪ್ರತಿಪಾದಿಸುತ್ತಾರೆ. ಅದಕ್ಕೆ ಬೆಂಬಲವಾಗಿ ಮದ್ರಾಸಿನ ಮುನಿಸಿಪಲ್ ಕಾರ್ಪೊರೇಷನ್ನಿನ ಮೇಯರ್ ಪದವಿಯ ಪ್ರಕರಣವನ್ನು ಉಲ್ಲೇಖಿಸಿರುತ್ತಾರೆ. ಆದ್ದರಿಂದ, ನಾನು ಈ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ.

**ಓರ್ವ ಗೌರವಾನ್ವಿತ ಸದಸ್ಯರು** : ಮೈಸೂರಿನಿಂದ ಇಬ್ಬರು ಸದಸ್ಯರಿದ್ದಾರೆ. ಮಾನ್ಯರೆ, ಯಾರು ಹೇಳಿದ್ದು ಎಂದು ಸ್ಪಷ್ಟಪಡಿಸಿ.

**ಮಾನ್ಯ ಸಭಾಧ್ಯಕ್ಷರು** (ಶ್ರೀ ಸಿಧ್ವಾರಿಗೆ) : ಭಾಷಣಕಾರರ ಹೆಸರನ್ನು ಹೇಳುವಲ್ಲಿ ನೀವು ತಪ್ಪು ಮಾಡಿದಿರಿ.

**ಶ್ರೀ ಆರ್.ಕೆ. ಸಿಧ್ವಾ :** ಅವರು ಮೈಸೂರಿನಿಂದ ಬಂದವರು. *ಮಾನ್ಯರೆ, ಮದ್ರಾಸಿನ ಮುನಿಸಿಪಲ್ ಕಾರ್ಪೊರೇಷನ್ ಮೇಯರ್ ಚುನಾವಣೆಯಲ್ಲಿ ಪರ್ಯಾಯ ವ್ಯವಸ್ಥೆ ಇರುವುದು ನಿಜ. ಮೊದಲನೇ ವರ್ಷದಲ್ಲಿ ಬ್ರಾಹ್ಮಣ ಚುನಾಯಿತನಾದರೆ, ಎರಡನೇ ವರ್ಷ ಬ್ರಾಹ್ಮಣೇತರ ವ್ಯಕ್ತಿ. ಮೂರನೇ ವರ್ಷ ಹರಿಜನ, ಹೀಗೆ ಚುನಾಯಿಸಲಾಗುತ್ತದೆ. ಇದೇ ರೀತಿಯ ಸಂಪ್ರದಾಯ ಬಾಂಬೆ ಮುನಿಸಿಪಲ್ ಕಾರ್ಪೊರೇಷನ್ನಿನಲ್ಲೂ ಇದೆ. ಮೊದಲನೆಯ ವರ್ಷದಲ್ಲಿ ಹಿಂದೂ ಚುನಾಯಿತನಾದರೆ, ಎರಡನೆಯ ವರ್ಷ ಮುಸ್ಲಿಮ್, ಮೂರನೆಯ ವರ್ಷ ಪಾರ್ಸಿ ಹಾಗೂ ನಾಲ್ಕನೆಯ ವರ್ಷ ಕ್ರಿಶ್ಚಿಯನ್ ಚುನಾಯಿತರಾಗುತ್ತಾರೆ. ಕರಾಚಿ ಮುನಿಸಿಪಲ್ ಕಾರ್ಪೊರೇಷನ್ನಿನಲ್ಲೂ ಇಂಥದೇ ಪದ್ಧತಿ ಜಾರಿಯಲ್ಲಿದೆ. ಮೊದಲನೆಯ ವರ್ಷ ಪಾರ್ಸಿ ಚುನಾಯಿತನಾದರೆ, ಅನಂತರ ಮುಸ್ಲಿಮ್, ಅನಂತರ ಕ್ರಿಶ್ಚಿಯನ್ ಮತ್ತು ಅನಂತರ ಹಿಂದೂ ಚುನಾಯಿತನಾಗುತ್ತಾನೆ. ಕಲ್ಕತ್ತಾ ಕಾರ್ಪೊರೇಷನ್ನಿನಲ್ಲೂ ಇಂಥದೇ ಪದ್ಧತಿ ಜಾರಿಯಲ್ಲಿದೆ. ಭಾರತದ ಮುನಿಸಿಪಲ್ ಮೇಯರ್ ಚುನಾವಣೆಯಲ್ಲಿನ ಪರ್ಯಾಯ ವ್ಯವಸ್ಥೆ ಕುರಿತು ನಾನು ಸ್ವಲ್ಪ ಹೇಳಬೇಕಿದೆ. ಈ ಗೌರವದ ಹುದ್ದೆಯನ್ನು ಅಲಂಕರಿಸಲು ಎಲ್ಲರಿಗೂ ಅವಕಾಶ ಕಲ್ಪಿಸಲು ಈ ಪದ್ಧತಿಯನ್ನು ಜಾರಿಗೆ ತರಲಾಯಿತು. ಮಾನ್ಯರೆ, ಇದೊಂದು ಗೌರವಾನ್ವಿತ ಹುದ್ದೆ ಎಂದು ಪುನರುಚ್ಚರಿಸುತ್ತೇನೆ. ಮುನಿಸಿಪಲ್ ಕಾರ್ಪೊರೇಷನ್ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವ ಹೊರತು ಮೇಯರ್‌ಗೆ ಯಾವುದೇ ಅಧಿಕಾರವಿಲ್ಲ. ಆತ ನಗರದ ಪ್ರಥಮ ಪ್ರಜೆಯಾದರೂ ಆತನಿಗೆ ಯಾವುದೇ ಕಾರ್ಯಕಾರಿ ಅಧಿಕಾರವಿರುವುದಿಲ್ಲ. ಆದ್ದರಿಂದ ನೀವು ಮೇಯರ್ ಪದವಿಯನ್ನು ರಾಷ್ಟ್ರಪತಿಯೊಂದಿಗೆ ಹೋಲಿಸಲಾಗದು. ಭಾರತದ ರಾಷ್ಟ್ರಪತಿಯು ಶ್ರೇಷ್ಠ ವ್ಯಕ್ತಿಯಾಗಿರುವಂತೆ ಅವರು ಅನೇಕ ಕಾರ್ಯಕಾರಿ ಅಧಿಕಾರಗಳನ್ನು ಹೊಂದಿರುತ್ತಾರೆ. ಅವರು ಪ್ರಧಾನಮಂತ್ರಿಗಳನ್ನು, ಮಂತ್ರಿಗಳನ್ನು ಆಯ್ಕೆಮಾಡುತ್ತಾರೆ. ಶಾಸನಸಭೆಯನ್ನು ವಿಸರ್ಜಿಸುವ ಅಧಿಕಾರವೂ ಅವರಿಗಿದೆ. ಎಲ್ಲಕ್ಕೂ ಮಿಗಿಲಾಗಿ, ಪ್ರಸ್ತಾವಿತ ಸಂವಿಧಾನದ ಮೇರೆಗೆ, ಅವರು ಭೂಸೇನೆಯ ಪರಮೋಚ್ಚ ದಂಡನಾಯಕರು. ಈ ಪರಿಸ್ಥಿತಿಯಲ್ಲಿ ತಾವು ರಾಷ್ಟ್ರಪತಿಯನ್ನು ಪರ್ಯಾಯ ಕ್ರಮದಲ್ಲಿ ಆಯ್ಕೆಮಾಡಲು ಬಯಸುವಿರಾ? ರಾಷ್ಟ್ರಪತಿಗಳನ್ನು ಯಾವುದೋ ಕೋಮು ಅಥವಾ ಪ್ರಾಂತ್ಯವಾರು ಅಥವಾ ಪರ್ಯಾಯ ಪದ್ಧತಿಯಲ್ಲಿ ಚುನಾಯಿಸುವುದನ್ನು ನಾನು ಕಟುವಾಗಿ ವಿರೋಧಿಸುತ್ತೇನೆ. ರಾಷ್ಟ್ರಪತಿ ಹುದ್ದೆಗೆ ನಮಗೆ ಅತ್ಯುತ್ತಮ ವ್ಯಕ್ತಿ ಬೇಕು. ನಾವು ಒಮ್ಮೆ ಚುನಾಯಿಸಿದ ವ್ಯಕ್ತಿಯು ಶ್ರೇಷ್ಠನಾದರೆ, ಅವರು ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಲ್ಲಿಂದಲಾದರೂ ಬಂದಿರಲಿ, ಎರಡನೆಯ ಬಾರಿಗೂ ಅವರನ್ನು ಆಯ್ಕೆಮಾಡಬೇಕು. ರಾಷ್ಟ್ರಪತಿ ಚುನಾವಣೆಯನ್ನು ಕೋಮುವಾರು ಅಥವಾ ಪ್ರಾಂತ್ಯವಾರು ಅಥವಾ ಇತರ ಕ್ರಮಗಳಲ್ಲಿ ನಡೆಸುವುದನ್ನು ನಾನು ವಿರೋಧಿಸುತ್ತೇನೆ. ಮೇಯರ್ ಚುನಾವಣೆಯಲ್ಲಿ ಜಾರಿಗೆ ತಂದ ಸಂಪ್ರದಾಯವು ರಾಷ್ಟ್ರಪತಿಗಳ ಚುನಾವಣೆಗೆ ಅನ್ವಯವಾಗಲಾರದು. ಮೇಯರ್ ಹೆಸರಿಗೆ ಮಾತ್ರ ಮುಖ್ಯಸ್ಥ. ಆತ ಸಭೆಗಳ ಅಧ್ಯಕ್ಷತೆ ವಹಿಸುವನು; ಅವನಿಗೆ ಕಾರ್ಯಕಾರಿ ಅಧಿಕಾರಗಳಿರುವುದಿಲ್ಲ. ಅಲ್ಲಿನ ಸಂಪ್ರದಾಯದ ಉದ್ದೇಶ ನಗರದ ಮೊದಲ ಪ್ರಜೆಯ ಗೌರವಾನ್ವಿತ, ಘನತೆವೆತ್ತ ಹುದ್ದೆಯನ್ನು ಅಲಂಕರಿಸಲು ವಿವಿಧ ಸಮುದಾಯಗಳಿಗೆ ಅವಕಾಶ ಕಲ್ಪಿಸಬೇಕೆಂಬುದೇ ಆಗಿದೆ. ಆದ್ದರಿಂದ, ಈ ಸಂಪ್ರದಾಯವನ್ನು ರಾಷ್ಟ್ರಪತಿ ಚುನಾವಣೆಯಲ್ಲಿ ಬೆರೆಸಲಾಗದು. ಆದ್ದರಿಂದ, ನಾನು ಇದನ್ನು ಪ್ರಬಲವಾಗಿ ವಿರೋಧಿಸುತ್ತೇನೆ. ರಾಷ್ಟ್ರಪತಿಯನ್ನು ಪ್ರಾಂತೀಯವಾಗಲಿ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಿಂದ ಚುನಾಯಿಸಬೇಕೆನ್ನಬಾರದು. ಆದ್ಯತೆಗೆ ಪಾರ್ಸಿ, ಮುಸ್ಲಿಮ್, ಕ್ರಿಶ್ಚಿಯನ್ ಎಂದು ಮೀಸಲಾತಿ ಕಲ್ಪಿಸಬಾರದು; ನಮ್ಮ ಅತ್ಯುನ್ನತ ನಾಯಕರು ಕೂಡ ಈ ಕುರಿತು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಿದ್ದುಪಡಿಗಳನ್ನು ತರಬಾರದು. ಆದ್ದರಿಂದ ನಾನು ರಾಷ್ಟ್ರಪತಿ ಹುದ್ದೆಗೆ ಪ್ರಾಂತೀಯವಾರು ಚುನಾವಣೆ ಸಂಪ್ರದಾಯವನ್ನು ಪ್ರಬಲವಾಗಿ ವಿರೋಧಿಸುತ್ತೇನೆ.

**ಶ್ರೀ ಆರ್.ವಿ. ಧುಲೇಕರ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ,

ಮಂಡಿಸಲಾಗಿರುವ ಈ ಖಂಡದ ಬಗ್ಗೆ ತುಂಬ ಮಾತನಾಡಲಾಗಿದೆ ಆ ಬಗ್ಗೆ ನಾನೇನೂ ಹೇಳಲಾರೆ. ನಾನು ಈ ಖಂಡದ ಪರವಾಗಿ ಕೆಲವು ಮಾತನಾಡಬಯಸುತ್ತೇನೆ. ನಾನು ಕೇವಲ ಎರಡು ವಿಷಯಗಳ ಬಗ್ಗೆ ತಮ್ಮ ಗಮನ ಸೆಳೆಯುತ್ತೇನೆ.

ಮೊದಲನೆಯದಾಗಿ, ಕೆಲವು ಸದಸ್ಯರು ರಾಜ್ಯ ಚುನಾವಣಾ ಪದ್ಧತಿಗಳು ತೀರ ಅಸಮರ್ಪಕವೆಂದು ಹೇಳಿದ್ದಾರೆ. ಸರ್ಕಾರ ಅಥವಾ ರಾಜರು ನಾಮಕರಣ ಮಾಡಿರುವ ಈ ಶಾಸನಸಭೆಯ ರಾಜ್ಯ ಪ್ರತಿನಿಧಿಗಳಿಗೆ ರಾಷ್ಟ್ರಪತಿ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ನೀಡಬಾರದೆಂದು ಅವರು ಹೇಳಿದರು. ಈ ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸುತ್ತಿರುವ ರಾಜರು ಬ್ರಿಟಿಷ್ ಸರ್ಕಾರದಿಂದ ತುಂಬ ಅನ್ಯಾಯಕ್ಕೊಳಗಾಗಿದ್ದಾರೆ. ಎಷ್ಟೆಂದರೆ, ತಾವು ಒಕ್ಕೂಟವನ್ನು ಸೇರಿದರೆ, ತಮ್ಮನ್ನು ಬಗ್ಗುಬಡಿಯಲಾಗುವುದೆಂದು ಹೆದರಿದ್ದಾರೆ. ಒಮ್ಮೆ ಕೈಸುಟ್ಟುಕೊಂಡ ಮಗು ಬೆಂಕಿಗೆ ಹೆದರುತ್ತದೆ. ಅವರು ಕೀಳು ಮಟ್ಟಕ್ಕಿಳಿದರೆ, ಧೈರ್ಯಗುಂದಿದ ಭಾರತೀಯರೆಂದು ಭಾವಿಸಬಾರದು. ಅವರನ್ನು ಬ್ರಿಟಿಷ್ ಸರ್ಕಾರವು ಅದೆಂಥ ಪರಿಸ್ಥಿತಿಯಲ್ಲಿಟ್ಟಿದೆ ಎಂದರೆ, ಅವರು ಕನಿಷ್ಠ ನೀತಿಗಳನ್ನು ಪಾಲಿಸಲಾಗುತ್ತಿಲ್ಲ. ಇದು ನನ್ನ ವೈಯಕ್ತಿಕ ಅನಿಸಿಕೆ. ಆದ್ದರಿಂದ, ನಾಮಕರಣಗೊಂಡ ಸದಸ್ಯರಿಗೂ ರಾಷ್ಟ್ರಪತಿಯ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ನೀಡಬಾರದೆಂಬ ಪ್ರಶ್ನೆ ಎತ್ತುವುದು ಸೂಕ್ತವಲ್ಲ. ಸ್ವಲ್ಪ ಕಾಲಾವಕಾಶ ನೀಡಬೇಕು ಎಂಬ ಅವರ ಬೇಡಿಕೆಯನ್ನು ನಾವು ಒಪ್ಪಿಕೊಳ್ಳಬೇಕು. ಒಕ್ಕೂಟ ಸೇರುವುದರಿಂದ, ರಾಜರು ಮತ್ತು ಪ್ರಜೆಗಳಿಗೆ ನಮಗಿರುವ ಹಕ್ಕು ಮತ್ತು ಸ್ಥಾನಮಾನ ದೊರೆಯುವುದೆಂಬುದನ್ನು ಅವರು ಮನಗಾಣಲಿ. ಒಕ್ಕೂಟ ಸೇರುವುದರಿಂದ ದೊರೆಯುವ ಅನುಕೂಲಗಳನ್ನು ಅವರು ಮನಗಂಡರೆ, ಅವರ ನಿರಂಕುಶಾಧಿಕಾರ ತಾನಾಗಿಯೇ ಕೊನೆಗೊಳ್ಳುತ್ತದೆ. ರಾಜರು ತಾವೂ ಸಾಮಾನ್ಯ ಭಾರತೀಯರೆಂದು ಭಾವಿಸುವರು. ಸಾಮಾನ್ಯ ಜನರಿಗಿರುವ ಹಕ್ಕುಗಳು ತಮಗೂ ಇರುತ್ತವೆಂದು ಭಾವಿಸುವರು.

ತಮ್ಮ ಗಮನಕ್ಕೆ ತರಬೇಕಾಗಿರುವ ಎರಡನೆಯ ವಿಷಯ ಇದು :

ಈ ಖಂಡದ ಮೇರೆಗೆ, ಶಾಸನಸಭೆಯ ಸದಸ್ಯರು ಎಷ್ಟು ಜನರನ್ನು ಪ್ರತಿನಿಧಿಸುತ್ತಾರೆಂಬುದನ್ನು ಪರಿಗಣಿಸಬೇಕಾಗಿದೆ; ಮತಗಳಿಗೆ 'ಮೌಲ್ಯ' ನೀಡುವ ಸಲುವಾಗಿ 'ಮೌಲ್ಯ' ಎಂಬ ಪದವನ್ನು ಸೇರಿಸಲಾಗಿದೆ. ನನ್ನ ಅಭಿಪ್ರಾಯದಲ್ಲಿ ಇದು ಅನಗತ್ಯ. ಕೆಲವು ಸದಸ್ಯರು ಹೇಳಿದಂತೆ, ಕಡಿಮೆ ಜನಸಂಖ್ಯೆ ಇರುವ ಸ್ಥಳಗಳು, ಹೆಚ್ಚಿನ ಜನಸಂಖ್ಯೆ ಇರುವ ಸ್ಥಳಗಳಿಗಿಂತ, ಹೆಚ್ಚಿನ ಸ್ಥಾನಗಳನ್ನು ಹೊಂದಿರುವ ಸಾಧ್ಯತೆ ಇರಬಹುದು. ನನ್ನ ಅಭಿಪ್ರಾಯದಲ್ಲಿ, ಯಾರೇ ಸದಸ್ಯನು, ಅವನು ಪ್ರಾಂತೀಯ ಶಾಸನಸಭೆಯಿಂದ ಅಥವಾ ರಾಜ್ಯ ಶಾಸನ ಸಭೆಯಿಂದ ಆಯ್ಕೆಯಾಗಿರಲಿ, ಅವನು, ರಾಷ್ಟ್ರಪತಿಯ ಚುನಾಣೆಯಲ್ಲಿ ತನ್ನ ಮತಗಳಿಗೆ ಮೌಲ್ಯ ನೀಡಬೇಕೆಂದು ಬೇಡುವಷ್ಟು ಸಂಕುಚಿತ ಮನಸ್ಸಿನವನಾಗಿರಲಾರ. ನನ್ನ ಪ್ರಾಂತ್ಯದಲ್ಲಿ ಕೆಲವು ಸದಸ್ಯರು ೫೦ ಸಾವಿರ ಮತದಾರರನ್ನು ಪ್ರತಿನಿಧಿಸಿದರೆ, ಕೆಲವರು ೧೦ ಸಾವಿರ, ಮತ್ತೆ ಕೆಲವರು ೧೫ ಸಾವಿರ ಮತದಾರರನ್ನು ಪ್ರತಿನಿಧಿಸುತ್ತಾರೆ. ಒಮ್ಮೆ ಚುನಾಯಿತನಾದರೆ, ತಾನು ಇಷ್ಟು ಜನರನ್ನು ಪ್ರತಿನಿಧಿಸುತ್ತೇನೆಂಬ ಬಗ್ಗೆ ಅವನು ಯೋಚಿಸಲಾರ. ಅವನು ತಾನು ಶಾಸನಸಭೆಯ ಸದಸ್ಯನೆಂದು ಮಾತ್ರ ಭಾವಿಸಿ 'ತನ್ನ ಘನತೆಗೆ ತಕ್ಕಂತೆ' ವರ್ತಿಸುತ್ತಾನೆ. ಆದ್ದರಿಂದ ಮೌಲ್ಯ ಎಂಬ ಪದ ಸೇರಿಸಿರುವುದು ವಿಚಿತ್ರವಾಗಿದೆ. ಆದರೆ ಅದರಿಂದ ಯಾವ ತೊಂದರೆಯೂ ಇಲ್ಲ, ಆದ್ದರಿಂದ ನಾನು ಅದನ್ನು ವಿರೋಧಿಸುವುದಿಲ್ಲ.

ಈ ಮಾತುಗಳನ್ನು ಹೇಳುತ್ತಾ, ನಾನು ಈ ಖಂಡವನ್ನು ಬೆಂಬಲಿಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : ಮಂಡನೆಕಾರರಾದ ಪಂಡಿತ್ ಜವಾಹರಲಾಲ್ ನೆಹರು ಚರ್ಚೆಗೆ ಉತ್ತರ ನೀಡಬಹುದು.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಅನೇಕ ತಿದ್ದುಪಡಿಗಳಿವೆ; ಆದರೆ ಒಂದು ಅಂಶದ ಮೇಲೆ ಭಾರಿ ಒತ್ತು ನೀಡಲಾಗಿದೆ. ವಯಸ್ಕ

ಮತದಾನದ ಮೂಲ ರಾಷ್ಟ್ರಪತಿಯ ಚುನಾವಣೆ ನಡೆದು, ಪ್ರತಿಯೊಬ್ಬರೂ ಅದರಲ್ಲಿ ಭಾಗವಹಿಸಬೇಕು ಎಂಬುದು. ಮತ್ತೊಂದು ತಿದ್ದುಪಡಿ ಎಂದರೆ, 'ರಾಷ್ಟ್ರಪತಿ' ಪದವನ್ನು 'ನೇತಾ' ಅಥವಾ 'ಕರ್ಣಧಾರ್' ಪದದಿಂದ ಬದಲಿಸಬೇಕೆಂಬುದು. ಮತ್ತೊಂದು ತಿದ್ದುಪಡಿ ಎಂದರೆ, ರಾಷ್ಟ್ರಪತಿಯನ್ನು ಉತ್ತರ ಹಾಗೂ ದಕ್ಷಿಣದಿಂದ ಪರ್ಯಾಯವಾಗಿ ಚುನಾಯಿಸಬೇಕೆಂಬುದು. ಮಗದೊಂದು ತಿದ್ದುಪಡಿ, ರಾಷ್ಟ್ರಪತಿ ಚುನಾವಣೆಯಲ್ಲಿ ಮೇಲ್ಮನೆ ಸದಸ್ಯರು ಭಾಗವಹಿಸಬೇಕೆಂದು ಹೇಳುತ್ತದೆ. ಮತ್ತೊಂದು ತಿದ್ದುಪಡಿಯೂ ಇದೆ. ಅದನ್ನು ಮಂಡಿಸಲಾಗಿದೆಯೋ ಇಲ್ಲವೋ ನನಗೆ ತಿಳಿಯದು. ಈ ತಿದ್ದುಪಡಿಯ ಪ್ರಕಾರ ರಾಷ್ಟ್ರಪತಿಯನ್ನು, ಭಾರತ ಗಣತಂತ್ರದ ರಾಜ್ಯ ಹಾಗೂ ರಾಜ್ಯಗಳಲ್ಲದ ಭಾಗಗಳಿಂದ (ಪರ್ಯಾಯವಾಗಿ) ಒಂದರನಂತರ ಇನ್ನೊಂದರಂತೆ ಚುನಾಯಿಸಬೇಕು.

ಕೊನೆಯದಾಗಿ, ಪ್ರಮಾಣವಚನಗಳನ್ನು ಕುರಿತ ತಿದ್ದುಪಡಿ. ಒಂದನ್ನು ಹೊರತುಪಡಿಸಿ, ನಾನು ಈ ಯಾವ ತಿದ್ದುಪಡಿಗಳನ್ನೂ ಒಪ್ಪಲಾರೆ ಎಂದು ಹೇಳಲು ನಾನು ಬಹಳ ವಿಷಾದಿಸುತ್ತೇನೆ. 'ಸದಸ್ಯ' ಎಂಬ ಪದದ ಬದಲಾಗಿ 'ಚುನಾಯಿತ ಸದಸ್ಯ' ಪದಗಳನ್ನು ಬಳಸಬೇಕೆಂಬ ತಿದ್ದುಪಡಿಯೊಂದನ್ನು ಒಪ್ಪುತ್ತೇನೆ. ಅದೇನೂ ಉತ್ತಮ ಸುಧಾರಣೆಯಲ್ಲ. ಕರಡು ಪ್ರತಿಯೂ ಈ ಅಂಶವನ್ನು ಸ್ಪಷ್ಟಪಡಿಸಬಹುದಿತ್ತು, ಆದಾಗ್ಯೂ ನೀವು 'ಚುನಾಯಿತ' ಪದವನ್ನು ಸೇರ್ಪಡೆ ಮಾಡಲು ಬಯಸಿದರೆ, ಅದನ್ನು ನಾನು ಅಂಗೀಕರಿಸಲು ಸಿದ್ಧ. ಪ್ರಮಾಣವಚನ ಕುರಿತು ಕೆಲ ಮಾತುಗಳನ್ನು ಹೇಳಲಾಗಿದೆ. ಅದು ಸಂವಿಧಾನದಲ್ಲಿರುತ್ತದೆ ಎಂಬುದು ಸ್ಪಷ್ಟ. ಈ ಹಂತದಲ್ಲಿ ಅದೇನೂ ಅಗತ್ಯವಿಲ್ಲ. ಉತ್ತರ–ದಕ್ಷಿಣಗಳಿಂದ ಹಾಗೂ ರಾಜ್ಯಗಳು ಮತ್ತು ರಾಜ್ಯಗಳಲ್ಲದವುಗಳಿಂದ ರಾಷ್ಟ್ರಪತಿಯ ಚುನಾವಣೆ ಪ್ರಶ್ನೆ ತಾತ್ತ್ವಿಕವಾಗಿ ದೋಷಪೂರಿತವಾಗಿದೆ. ರಾಷ್ಟ್ರಪತಿಯನ್ನು ಒಮ್ಮೆ ಒಂದು ವರ್ಗದಿಂದ, ಮತ್ತೊಮ್ಮೆ ಮತ್ತೊಂದು ವರ್ಗದಿಂದ ಚುನಾಯಿಸುವುದು ಮತ್ತು ಅದಕ್ಕಾಗಿ ನಿಯಮಗಳು ಹಾಗೂ ಶಾಸನಬದ್ಧ ಉಪಬಂಧಗಳನ್ನು ರೂಪಿಸುವುದು ಅಪೇಕ್ಷಣೀಯವಲ್ಲ.

ಇನ್ನು ಮೇಲ್ಮನೆ ಸದಸ್ಯರು ರಾಷ್ಟ್ರಪತಿ ಚುನಾವಣೆಯಲ್ಲಿ ಏಕೆ ಭಾಗವಹಿಸಬಾರದೆಂಬ ಪ್ರಶ್ನೆಗೆ ಉತ್ತರ. ರಾಜ್ಯ ಘಟಕಗಳ ಮೇಲ್ಮನೆಗಳಿಗೂ, ಪ್ರಾಂತ್ಯಗಳ ಮೇಲ್ಮನೆಗಳಿಗೂ ತುಂಬ ವ್ಯತ್ಯಾಸವಿರುತ್ತದೆ. ಯಾವ ಘಟಕಗಳು ಮೇಲ್ಮನೆಗಳನ್ನು ಹೊಂದಿರುತ್ತವೆ ಎಂದು ನಾನು ಹೇಳಲಾರೆ. ಮತ್ತೊಂದು ಅಂಶ–ರಾಜ್ಯಗಳು ಮತ್ತು ಪ್ರಾಂತ್ಯಗಳು ಬೇರೆ ಬೇರೆ ಮಾನದಂಡಗಳನ್ನು ಹೊಂದಿವೆ. ಅವು ಯಾವ ಮಾನದಂಡಗಳನ್ನು ಅಳವಡಿಸಿಕೊಳ್ಳುವುವೆಂದು ಯಾರೂ ಹೇಳಲಾಗದು. ಈ ಹಕ್ಕನ್ನು ರಾಜ್ಯಗಳ ಮೇಲ್ಮನವಿಗಳಿಗೆ ನೀಡಿದರೆ ಗೊಂದಲ ಸೃಷ್ಟಿಯಾಗುತ್ತದೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಕೇಂದ್ರದಲ್ಲಿನ ಎರಡು ಸದನಗಳು ಹಾಗೂ ಘಟಕಗಳ ಕೆಳಮನೆಗಳಿಗೆ ಮಾತ್ರ ರಾಷ್ಟ್ರಪತಿ ಚುನಾವಣೆಯಲ್ಲಿ ಭಾಗವಹಿಸುವ ಹಕ್ಕು ನೀಡುವ ಪ್ರಸ್ತಾವವೇ ಸರಿಯಾದುದು. ಒಂದು ಸಂಕೀರ್ಣ ಪ್ರಶ್ನೆಯನ್ನು ಮಾತ್ರ ಸ್ಪಷ್ಟಪಡಿಸಲಾಗಿಲ್ಲ. ಘಟಕಗಳು ಕೇಂದ್ರಕ್ಕಿಂತ ಹೆಚ್ಚಿನ ಹಕ್ಕುಗಳನ್ನು ಹೊಂದಿರುತ್ತವೆಯೇ? ಕೇಂದ್ರದ ಶಾಸನಸಭೆ ಸದಸ್ಯರು ಒಂದು ಮತವನ್ನು ಅಥವಾ ಘಟಕಗಳ ಮತದಾನದ ಸಾಮರ್ಥ್ಯವನ್ನು ಸರಿದೂಗಿಸಲು ಹೆಚ್ಚಿನ ಮತಗಳನ್ನು ಹೊಂದಿರಬೇಕೆ ಎಂಬ ಪ್ರಶ್ನೆ. ಈ ಅಂಶವನ್ನು ಸ್ಪಷ್ಟಪಡಿಸುವುದು ನಮ್ಮ ಸಲಹೆಗಾರರಿಗೆ ಬಿಟ್ಟಿದ್ದು. ಪ್ರಸಕ್ತ, ನನ್ನ ಅಭಿಪ್ರಾಯದಲ್ಲಿ, ನಾನು ಈಗಾಗಲೇ ಹೇಳಿದಂತೆ ಹಾಗೂ ಮುದ್ರಿತವಾಗಿರುವಂತೆ ಇರುವಂತೆಯೇ ಬರುವುದು. ನಾನು ಈ ಮೊದಲಲ್ಲ ಹೇಳಿದಂತೆ, ನೀವು ಪರ್ಯಾಲೋಚಿಸಿದರೆ, ನೀವು ಕೂಡ ಈ ಆಯ್ಕೆಯನ್ನು ಹಾಗೆಯೇ ಬಿಡುವುದು ಒಳ್ಳೆಯದು ಎಂಬ ತೀರ್ಮಾನಕ್ಕೆ ಬರುವಿರಿ. ವಯಸ್ಕರ ಮತದಾನ ಅತ್ಯಗತ್ಯವೆಂದು ಹೇಳಲು ನಾನು ಸಿದ್ಧನಿಲ್ಲ. ಶಾಸನಸಭೆಯ ಸದಸ್ಯರನ್ನು ಆಯ್ಕೆಮಾಡುವ ಜನರು ಮಿಲಿಯಗಟ್ಟಲೆ ಇರುತ್ತಾರೆ. ಅವರು ಯೋಗ್ಯ ವ್ಯಕ್ತಿಗಳಾಗಿರಬೇಕೆಂಬುದು ನಿಜ. ಶಾಸನಸಭೆಯ ಸದಸ್ಯರೆ ಮಿಲಿಯಾಂತರ ಜನರ ಮತಗಳಿಂದ ಆಯ್ಕೆಯಾಗುವಾಗ ರಾಷ್ಟ್ರಪತಿಯನ್ನು ವಯಸ್ಕಮತದಾನದಿಂದ ಆಯ್ಕೆಮಾಡುವ ಅಗತ್ಯವಾದರೂ ಎಲ್ಲಿದೆ?

ಆದ್ದರಿಂದ ನಿಮ್ಮ ಸಂವಿಧಾನವನ್ನು ವಿಳಂಬವಿಲ್ಲದೆ ರಚಿಸಿ ಘೋಷಿಸಬೇಕೆಂದು ನೀವು ಅಪೇಕ್ಷಿಸಿದರೆ, ಗೋಜಲುಗಳನ್ನು ನಿವಾರಿಸಿಕೊಳ್ಳಬೇಕು. ಇಲ್ಲವಾದರೆ, ವಿಳಂಬಮಾಡದೆ ಸಂವಿಧಾನವನ್ನು ರೂಪಿಸಿ, ಜಾರಿಗೆ ತರಲು ಸಾಧ್ಯವಾಗಲಾರದು.

ವಯಸ್ಕಮತದಾನದ ಮೂಲಕ ರಾಷ್ಟ್ರಪತಿಯನ್ನು ನೀವು ಚುನಾಯಿಸಬೇಕಾದರೆ, ಚುನಾವಣೆ ನಡೆಸಲು ಅದಕ್ಕೆ ಸಾಕಷ್ಟು ಸಮಯ ವ್ಯರ್ಥವಾಗುತ್ತದೆ. ಪರಿಣಾಮವಾಗಿ, ನಾವು ನಮ್ಮ ಹೊಸ ಸಂವಿಧಾನವನ್ನು ಜಾರಿಗೊಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ನಾನು ತಮ್ಮ ಮುಂದೆ ಇರಿಸಿರುವ ಕ್ರಮದಂತೆ, ನಿರ್ಣಯವನ್ನು ಅಂಗೀಕರಿಸಬೇಕೆಂದು ನನ್ನ ಅಪೇಕ್ಷೆ.]*

**ಶ್ರೀ ಮೊಹಮ್ಮದ್ ಶರೀಫ್** : *[ತಾವು ದಯವಿಟ್ಟು ಒಂದು ವಿಷಯದ ಬಗ್ಗೆ ಬೆಳಕು ಚೆಲ್ಲುವಿರಾ? ನೀವು ಖಂಡ ೨ (ಎ)ರಲ್ಲಿನ ಚುನಾವಣೆಯನ್ನು ಉಲ್ಲೇಖಿಸಿದಿರಿ. ಇದರಲ್ಲಿ ನಾಮಕರಣ ತತ್ತ್ವವನ್ನು ಒಪ್ಪಿಕೊಂಡ ಮೇಲೆ ಈ ತಿದ್ದುಪಡಿಯನ್ನು ಏಕೆ ಒಪ್ಪಿಕೊಳ್ಳುತ್ತಿಲ್ಲ. ಎರಡರ ನಡುವೆ ವೈರುಧ್ಯವೇಕೆ?]*

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : *[ನೀವು ಯಾವ ಖಂಡವನ್ನು ಹೇಳಿದಿರಿ?]*

**ಶ್ರೀ ಮೊಹಮ್ಮದ್ ಶರೀಫ್** : *[ಪುಟ ಸಂ.೯ ಖಂಡ ೧೪(ಎ)]*

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : *[ನಾಮಕರಣವನ್ನು ನಾವು ಒಪ್ಪುವ ಅಥವಾ ಬಿಡುವ ಪ್ರಶ್ನೆ ಮುಖ್ಯವಲ್ಲ. ಇಲ್ಲಿ ದಾಖಲಿಸಿರುವ ನಿರ್ದಿಷ್ಟ ಬಗೆಯ ನಾಮಕರಣವನ್ನು ನಾನು ಒಪ್ಪುತ್ತೇನೆ; ಘಟಕಗಳು ಮತ್ತು 'ವೈಜ್ಞಾನಿಕ ಸಂಸ್ಥೆ'ಗಳಿಂದ ನಾಮಕರಣಗೊಂಡವರನ್ನು ಅಂಗೀಕರಿಸಬೇಕು. ಆದರೆ ಅದೂ ಸಮಸ್ಯೆಯಲ್ಲ. ನಾನು ಈಗಾಗಲೇ ಹೇಳಿದಂತೆ ರಾಷ್ಟ್ರಪತಿಯನ್ನು ಚುನಾಯಿತ ಸದಸ್ಯರ ಮತಗಳಿಂದ ಚುನಾಯಿಸಬೇಕು.]*

**ಮಾನ್ಯ ಸಭಾಧ್ಯಕ್ಷರು** : ನಾನೀಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಶ್ರೀ ಚನ್ನಯ್ಯ ಮಂಡಿಸಿದ ತಿದ್ದುಪಡಿಯನ್ನು ಮೊದಲಿಗೆ ಮತಕ್ಕೆ ಹಾಕುತ್ತೇನೆ.

"ಖಂಡ(೧)ರ ಉಪಖಂಡ (೧)ರಲ್ಲಿ 'ಆಯ್ಕೆಮಾಡುವುದು' ಪದಕ್ಕೆ ಮೊದಲು 'ಉತ್ತರ ಭಾರತದಿಂದಾಗಲಿ ಅಥವಾ ದಕ್ಷಿಣ ಭಾರತದಿಂದಾಗಲಿ ಪರ್ಯಾಯವಾಗಿ' ಎಂಬ ಪದಗಳನ್ನು ಸೇರಿಸಬೇಕು".

ಈ ವಿಷಯದಲ್ಲಿ ನನಗೆ ಕಂಡುಬಂದ ತೊಂದರೆಯನ್ನು ಸದಸ್ಯರ ಗಮನಕ್ಕೆ ತರುತ್ತೇನೆ. ತಿದ್ದುಪಡಿ ಮಾಡಬೇಕಾದ ಖಂಡ ಹೀಗಿದೆ. :

"ಒಕ್ಕೂಟದ ಮುಖ್ಯಸ್ಥರು ಉತ್ತರಭಾರತದಿಂದಾಗಲೀ ಅಥವಾ ದಕ್ಷಿಣಭಾರತದಿಂದಾಗಲಿ, ಪರ್ಯಾಯವಾಗಿ ಆಯ್ಕೆಯಾಗುವ ರಾಷ್ಟ್ರಪತಿಯಾಗಿರತಕ್ಕುದು."

ಅಂದರೆ, ಉತ್ತರದ ಸದಸ್ಯರು ಮಾತ್ರ ಒಂದು ವರ್ಷ ಮತ್ತು ದಕ್ಷಿಣದ ಸದಸ್ಯರು ಮತ್ತೊಂದು ವರ್ಷ ಚುನಾವಣೆಯಲ್ಲಿ ಭಾಗವಹಿಸುವರು ಎಂದಾಗುವುದು. ಅವರ ಮಾತಿನ ಅರ್ಥ, ಚುನಾವಣೆಯಲ್ಲಿ ಸದಸ್ಯರು ಭಾಗವಹಿಸುವುದಲ್ಲ, ರಾಷ್ಟ್ರಪತಿಯೇ ಭಾಗವಹಿಸುವರು. ಇಷ್ಟನ್ನು ಗಮನಕ್ಕೆ ತಂದಿದ್ದೇನೆ. ಈಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮುಂದಿನದು ಶ್ರೀ ನಜಿರುದ್ದೀನ್ ಅಹ್ಮದ್ ಅವರದು :

"ಖಂಡ ೧ರ ಉಪಖಂಡ(೧)ರಲ್ಲಿ 'ಈ ಕೆಳಗೆ ಉಪಬಂಧಿಸಿರುವಂತೆ' ಪದಗಳಿಗೆ ಬದಲಾಗಿ 'ಈ ಕೆಳಗೆ ತಿಳಿಸಿರುವಂತೆ ರೀತಿಯಲ್ಲಿ' ಪದಗಳನ್ನು ಬಳಸುವುದು."

ಇದು ಒಂದು ಶಾಬ್ದಿಕ ತಿದ್ದುಪಡಿ. ಇದರ ಅಗತ್ಯವಿದೆಯೇ ಎಂದು ನನಗೆ ತಿಳಿಯದು. ಏನೇ ಇರಲಿ ಅದನ್ನು ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ರಾಯ್ ಬಹಾದೂರ್ ಶ್ಯಾಮನಂದನ ಸಹಾಯ ಅವರ ತಿದ್ದುಪಡಿ :

"ಖಂಡ (೧)ರ ಉಪಖಂಡ(೨)ರ ಕಂಡಿಕೆ (ಬಿ)ನಲ್ಲಿ 'ಅಥವಾ ಶಾಸನಸಭೆಯು ದ್ವಿಸದನವಾಗಿದ್ದಾಗ, ಅದರ ಕೆಳಮನೆಯ ಸದಸ್ಯರು' ಎಂಬ ಪದಗಳನ್ನು ತೆಗೆದು ಹಾಕುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಚೆಂಗಲರಾಯ ರೆಡ್ಡಿ ಅವರ ತಿದ್ದುಪಡಿ ಹೀಗಿದೆ :

"ಖಂಡ(೧)ರ ಉಪಖಂಡ ೨ (ಬಿ)ನಲ್ಲಿ 'ಸದಸ್ಯರು' ಎಂಬ ಪದಗಳು ಎಲ್ಲೆಲ್ಲಿರುವುದೋ ಅಲ್ಲೆಲ್ಲ 'ಚುನಾಯಿತ ಸದಸ್ಯರು' ಎಂಬ ಪದಗಳನ್ನು ಬಳಸುವುದು."

ಇದನ್ನು ಮಂಡನೆಕಾರರು ಒಪ್ಪಿಕೊಂಡಿದ್ದಾರೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ಶ್ರೀ ಚಂದ್ರಶೇಖರಯ್ಯ ಅವರ ತಿದ್ದುಪಡಿಯೊಂದಿದೆ, ಖಂಡ (೧)ರ ಉಪಖಂಡ (೩) ಆನಂತರ ಕೆಳಕಂಡ ಹೊಸ ಖಂಡವನ್ನು ಸೇರಿಸಬೇಕು.

"೩(ಎ) ರಾಷ್ಟ್ರಪತಿಯನ್ನು ರಾಜ್ಯ ಮತ್ತು ರಾಜ್ಯಗಳಲ್ಲದ ಘಟಕಗಳಿಂದ ಪರ್ಯಾಯವಾಗಿ ಚುನಾಯಿಸತಕ್ಕದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಚಂದ್ರಶೇಖರಯ್ಯ ಅವರ ಮತ್ತೊಂದು ತಿದ್ದುಪಡಿ ಹೀಗಿದೆ : ಖಂಡ (೧)ರ ಉಪಖಂಡ (೪)ರ ಅನಂತರ ಈ ಕೆಳಕಂಡ ಉಪಖಂಡವನ್ನು ಸೇರಿಸುವುದು.

"(೫) : ರಾಷ್ಟ್ರಪತಿಯು ಅಮೆರಿಕ ಸಂಯುಕ್ತ ಸಂಸ್ಥಾನದ ಸಂವಿಧಾನದಲ್ಲಿರುವಂತೆ ಪ್ರಮಾಣ ವಚನ ಸ್ವೀಕರಿಸಲು ಉಪಬಂಧ ಕಲ್ಪಿಸಬೇಕು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮುಂದಿನದು, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರರ ತಿದ್ದುಪಡಿ :

"ಖಂಡ(೧)ರ ಉಪಖಂಡ(೨) ರ ಕೊನೆಯ ವಾಕ್ಯದಲ್ಲಿನ 'ಘಟಕ ಶಾಸನಸಭೆಯ ಮತಗಳು' ಪದಗಳಿಗೆ ಬದಲಾಗಿ, 'ಘಟಕ ಶಾಸನಸಭೆಗಳ ಸದಸ್ಯರ ಮತಗಳು' ಎಂಬ ಪದಗಳನ್ನು ಬಳಸಬೇಕು."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಇವಿಷ್ಟು ಮಂಡಿಸಲಾಗಿರುವ ತಿದ್ದುಪಡಿಗಳು ಎಂದುಕೊಂಡಿದ್ದೇನೆ. ಈ ಪೈಕಿ ಎರಡು ಅಂಗೀಕೃತವಾಗಿದೆ. ತಿದ್ದುಪಡಿಯಾದ ನಿರ್ಣಯವನ್ನು ಮತಕ್ಕೆ ಹಾಕಲಾಗಿದೆ.

ಖಂಡ(೧)ಅನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ನಾವು ಖಂಡ(೨)ರತ್ತ ಹೋಗೋಣ. ಪಂಡಿತ್ ನೆಹರು ಖಂಡವನ್ನು ಮಂಡಿಸಬಹುದು.

## ಖಂಡ – ೨

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಮಾನ್ಯರೆ, ಮಂಡಿಸಲು ಅನುಮತಿ ಕೋರುತ್ತೇನೆ:

೧) "ರಾಷ್ಟ್ರಪತಿಯು ಐದು ವರ್ಷಗಳ ಕಾಲ ಹುದ್ದೆಯನ್ನು ಹೊಂದಿರತಕ್ಕದು; ಪರಂತು,

೧) ರಾಷ್ಟ್ರಪತಿಯು, ತಾನು ಸಹಿ ಮಾಡಿದ ಪತ್ರವನ್ನು ರಾಜ್ಯಗಳ ಪರಿಷತ್ತಿನ ಸಭಾಪತಿಗೆ ಮತ್ತು ಲೋಕಸಭೆಯ ಸಭಾಧ್ಯಕ್ಷರಿಗೆ ಬರೆದು ತನ್ನ ಹುದ್ದೆಗೆ ರಾಜಿನಾಮೆ ನೀಡಬಹುದು.

೨) ರಾಷ್ಟ್ರಪತಿಯು ಸಂವಿಧಾನವನ್ನು ಉಲ್ಲಂಘಿಸಿದ ಸಂದರ್ಭದಲ್ಲೂ, ಅವರನ್ನು ಉಪಖಂಡ(೨) ರಲ್ಲಿ ಉಪಬಂಧಿಸಿರುವಂತೆ ಮಹಾಭಿಯೋಗದ ಮೂಲಕ ತೆಗೆದುಹಾಕಬಹುದು.

೨(ಎ) ರಾಷ್ಟ್ರಪತಿಯು ಸಂವಿಧಾನ ಉಲ್ಲಂಘಿಸಿದ ಸಂದರ್ಭದಲ್ಲಿ, ಅವರನ್ನು ಮಹಾಭಿಯೋಗಕ್ಕೆ ಗುರಿಪಡಿಸಬೇಕಾದಾಗ, ಒಕ್ಕೂಟ ಸಂಸತ್ತಿನ ಯಾವುದೇ ಒಂದು ಸದನವು ದೋಷಾರೋಪವನ್ನು ಮಾಡತಕ್ಕುದು; ಆದರೆ ಅಂಥ ದೋಷಾರೋಪವನ್ನು ಮಾಡುವ ಪ್ರಸ್ತಾವವನ್ನು ಆ ಸದನದ ಒಟ್ಟು ಸದಸ್ಯರಲ್ಲಿ ಮೂರನೆಯ ಎರಡರಷ್ಟಕ್ಕೆ ಕಡಿಮೆ ಇಲ್ಲದಷ್ಟು ಸದಸ್ಯರು ಬೆಂಬಲಿಸುವ ಸದನದ ನಿರ್ಣಯದ ಹೊರತು, ಆ ಸದನವು ಅಂಗೀಕರಿಸತಕ್ಕುದಲ್ಲ.

ಫೆಡೆರಲ್ ಸಂಸತ್ತಿನ ಒಂದು ಸದನವು ಹಾಗೆ ದೋಷಾರೋಪವನ್ನು ಮಾಡಿದಾಗ, ಮತ್ತೊಂದು ಸದನವು ದೋಷಾರೋಪದ ಬಗ್ಗೆ ತನಿಖೆ ಮಾಡತಕ್ಕದು ಅಥವಾ ಮಾಡಿಸತಕ್ಕದು ಹಾಗೂ ರಾಷ್ಟ್ರಪತಿಯ ಅಂಥ ತನಿಖೆಯ ಮುಂದೆ ಹಾಜರಾಗಲು ಅಥವಾ ಪ್ರತಿನಿಧಿಸಲು ಹಕ್ಕು ಹೊಂದಿರತಕ್ಕದು.

ಒಂದು ವೇಳೆ ತನಿಖೆಯ ಫಲವಾಗಿ, ದೋಷಾರೋಪದ ತನಿಖೆ ಮಾಡಿದ ಅಥವಾ ಮಾಡಿಸಿದ ಸದನದ ಒಟ್ಟು ಸದಸ್ಯರ ಮೂರನೆಯ ಎರಡಷ್ಟು ಭಾಗಕ್ಕೆ ಕಡಿಮೆ ಇಲ್ಲದಷ್ಟು ಬೆಂಬಲದಿಂದ ರಾಷ್ಟ್ರಪತಿ ವಿರುದ್ಧ ಮಾಡಿದ ದೋಷಾರೋಪವು ಸಮರ್ಥಿತವಾಗಿದೆ ಎಂದು ಘೋಷಿಸುವ ನಿರ್ಣಯವು ಅಂಗೀಕಾರವಾದರೆ, ಆ ನಿರ್ಣಯವು ಹಾಗೆ ಅಂಗೀಕಾರವಾದ ದಿನಾಂಕವಾದ ರಾಷ್ಟ್ರಪತಿಯುನ್ನು ಆತನ ಹುದ್ದೆಯಿಂದ ತೆಗದುಹಾಕುವ ಪರಿಣಾಮವುಳ್ಳದ್ದಾಗಿರತಕ್ಕದು.

(೩) ರಾಷ್ಟ್ರಪತಿಯ ಹುದ್ದೆಯನ್ನು ಹೊಂದಿರುವ ಅಥವಾ ಹೊಂದಿದ್ದ ವ್ಯಕ್ತಿಯು ಮರುಚುನಾವಣೆಗೆ ಒಮ್ಮೆ ಮಾತ್ರ ಅರ್ಹನಾಗಿರತಕ್ಕದು."

ಮಾನ್ಯರೆ, ಈ ನಿರ್ಣಯದಲ್ಲಿ ಮೂರು ಭಾಗಗಳಿವೆ. ಒಂದು ಅಧಿಕಾರಾವಧಿ – ಐದು ವರ್ಷಕ್ಕೆ ಸಂಬಂಧಿಸಿದೆ. ಈಗ ಅದೇನೂ ಮಹತ್ತ್ವದ ವಿಷಯವಲ್ಲ. ಬಹಳಷ್ಟು ಪರಿಶೀಲಿಸಿಯೇ – ಐದು ವರ್ಷ ಸೂಕ್ತವೆನ್ನಲಾಗಿದೆ. ನಾಲ್ಕು ವರ್ಷಗಳು ತೀರ ಕಡಿಮೆಯಾದರೆ, ಐದಕ್ಕಿಂತ ಹೆಚ್ಚು ವರ್ಷಗಳು ತೀರ ಹೆಚ್ಚಾಗಬಹುದು. ಉಳಿದ ಭಾಗ ಮಹಾಭಿಯೋಗಕ್ಕೆ ಸಂಬಂಧಿಸಿದೆ. ಕೊನೆಯದಾಗಿ ವ್ಯಕ್ತಿಯೊಬ್ಬ ಈ ಹುದ್ದೆಯನ್ನು ಎರಡು ಸಲ ಮಾತ್ರ ಧಾರಣಮಾಡುವ ವಿಷಯ. ಆ ಎರಡೂ ಸಲವೂ ಅನುಕ್ರಮವಾಗಿ ಅಥವಾ ಒಟ್ಟಾರೆ ಎರಡು ಸಲ ಮಾತ್ರ – ಧಾರಣಮಾಡಬಹುದು. ಅದರರ್ಥ, ಯಾರೇ ಆಗಲಿ, ತನ್ನ ಜೀವಿತಾವಧಿಯಲ್ಲಿ ಹತ್ತು ವರ್ಷಕ್ಕಿಂತ ಹೆಚ್ಚಿಗೆ – ರಾಷ್ಟ್ರಪತಿಯಾಗಿರಲು ಸಾಧ್ಯವಿಲ್ಲ. ಈ ಬಗ್ಗೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿಯೂ ಆಗಾಗ್ಗೆ ಚರ್ಚೆ ನಡೆದಿರುವುದು ಎಲ್ಲರಿಗೂ ಗೊತ್ತೇ ಇದೆ. ಸಾಮಾನ್ಯವಾಗಿ ಎರಡು ಅವಧಿ ಮೀರಿ ಯಾರೂ ರಾಷ್ಟ್ರಪತಿಯಾಗಿರಲಾರರು. ಕಳೆದ ಯುದ್ಧದ ಸಂದರ್ಭದಲ್ಲಿ ಸಹಜವಾಗಿಯೇ ರಾಷ್ಟ್ರಾಧ್ಯಕ್ಷ ರೂಸ್‌ವೆಲ್ಟರು ನಾಲ್ಕನೆಯ ಅವಧಿಯನ್ನು ಪ್ರವೇಶಿಸಿದ್ದರು. ವಾಸ್ತವವಾಗಿ, ಈ ಭಾರಿ ಹೊರೆಯನ್ನು ಮನುಷ್ಯನೊಬ್ಬ ಹೊರಲು ಹತ್ತು ವರ್ಷಗಳ ಅವಧಿಯೇ ಸಾಕಷ್ಟಾಗಿರುತ್ತದೆ. ಬಹುಮಟ್ಟಿಗೆ ವ್ಯಕ್ತಿಯೊಬ್ಬ ರಾಷ್ಟ್ರಪತಿಯಾಗುವಾಗ, ಆತ ತೀರ ಯುವಕನಾಗಿರಲಾರ. ಆತ ನಲ್ವತ್ತರ–ಐವತ್ತರ ಆಸುಪಾಸಿನಲ್ಲಿರುತ್ತಾನೆ. ಅಂಥ ವ್ಯಕ್ತಿಯನ್ನು ಈ ಹೊರೆಯನ್ನು ಹತ್ತು ವರ್ಷಗಳಿಗೂ ಮೀರಿ ಹೊರುವಂತೆ ಕೇಳುವುದು ಸೂಕ್ತವಲ್ಲ. ರಾಷ್ಟ್ರಾಧ್ಯಕ್ಷ ರೂಸ್‌ವೆಲ್ಟರು ಪರಿಸ್ಥಿತಿಯ ಒತ್ತಡದಿಂದಾಗಿ ನಾಲ್ಕನೆಯ ಅವಧಿಗೂ ಮುಂದುವರಿದಿದ್ದರು. ಆದರೆ ಚುನಾಯಿತರಾದ ಅನಂತರ ಎರಡೋ ಮೂರೋ ತಿಂಗಳು ಕಾರ್ಯಭಾರ ನಿರ್ವಹಿಸಿದ್ದರು. ಹೀಗಾಗಿ, ಎರಡು ಅವಧಿಗೂ ಹೆಚ್ಚು ಕಾಲ ಹುದ್ದೆಯನ್ನು ಹೊಂದಿರಬಾರದೆಂಬ ನಿಯಮ ಉತ್ತಮವಾಗಿದೆ, ಅದನ್ನೇ ಪಾಲಿಸೋಣ.

ಉಳಿದಂತೆ, ನಾನೇನೂ ಹೇಳುವುದಿಲ್ಲ. ತಿದ್ದುಪಡಿಗಳೇನಾದರೂ ಇದ್ದರೆ, ಚರ್ಚೆಯ ಕೊನೆಯಲ್ಲಿ ಮಾತನಾಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈ ಖಂಡಕ್ಕೆ ಅನೇಕ ತಿದ್ದುಪಡಿಗಳಿವೆ. ಶ್ರೀ ಪಾಟಸ್ಕರ್

**ಶ್ರೀ ಎಚ್.ವಿ ಪಾಟಸ್ಕರ್** (ಬಾಂಬೆ : ಸಾಮಾನ್ಯ) : ನನ್ನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಶಿಬನ್‌ಲಾಲ್ ಸಕ್ಸೇನ :

**ಶ್ರೀ ಶಿಬನ್‌ಲಾಲ್ ಸಕ್ಸೇನ** : (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ನಾನು ಈ ಮುಂದಿನಂತೆ ತಿದ್ದುಪಡಿಗೆ ಸೂಚನೆ ನೀಡಿರುತ್ತೇನೆ .

"ಖಂಡ(೨)ರ ಉಪಖಂಡ(೧)ರಲ್ಲಿ 'ಶ' ಎಂಬ ಅಂಕಿಗೆ ಬದಲಾಗಿ 'ಳ' ಎಂಬ ಅಂಕಿಯನ್ನು ಬಳಸಬೇಕು."

ಈಗಷ್ಟೇ, ಪಂಡಿತ್ ನೆಹರು ಐದು ವರ್ಷಗಳ ಅವಧಿಯನ್ನು ಏಕೆ ನಿಗದಿಪಡಿಸಲಾಗಿದೆ ಎಂದು ವಿವರಿಸುತ್ತಾ ರಾಷ್ಟ್ರಪತಿಯ ಈ ಅವಧಿಯು ತೀರ ಹೆಚ್ಚಿನದೂ ಅಲ್ಲ, ಕಡಿಮೆಯೂ ಅಲ್ಲ ಎಂದು ಹೇಳಿದರು. ಅವರ ಮಾತಿಗೆ ನನ್ನ ಸಹಮತ ಇದೆ. ಆದರೆ, ನಾನು ಗಂಭೀರ ಲೋಪವನ್ನು ತೋರಿಸಬಯಸುತ್ತೇನೆ. ಮುಂದೆ ಖಂಡ ೧೩ರ ಉಪಖಂಡ (೫)ರಲ್ಲಿ ಹೀಗೆ ಹೇಳಿದೆ :

"ಲೋಕಸಭೆಯು ಕೂಡಲೇ ವಿಸರ್ಜಿತವಾಗುವ ಹೊರತು, ಅದರ ಮೊದಲಸಭೆಗೆ ಗೊತ್ತುಪಡಿಸಿದ ದಿನಾಂಕದಿಂದ ನಾಲ್ಕು ವರ್ಷಗಳ ಕಾಲ ಮುಂದುವರಿಯತಕ್ಕುದು ಮತ್ತು ಅದನ್ನು ಮೀರಿ....."

ಅಂದರೆ, ಲೋಕಸಭೆಯ ಅವಧಿಯು ನಾಲ್ಕು ವರ್ಷ ಎಂದಾಗುತ್ತದೆ. ಹಾಗೆಯೇ ನಮ್ಮ ಶಾಸನಸಭೆಗಳ ಅವಧಿಯೂ ನಾಲ್ಕು ವರ್ಷ. ಇದರರ್ಥ, ಮೊದಲ ಚುನಾವಣೆಯಲ್ಲಿ ರಾಷ್ಟ್ರಪತಿಯು, ಪ್ರಾಂತೀಯ ಶಾಸನ ಸಭೆಗಳ ಅವಧಿ ಮುಗಿದ ಮೇಲೂ ಒಂದು ವರ್ಷ ಮುಂದುವರಿದಿರುತ್ತಾರೆ. ಎರಡನೆಯ ಚುನಾವಣೆಯಲ್ಲಿ, ಲೋಕಸಭೆಯ ಚುನಾವಣೆ ನಡೆದು ಎರಡು ವರ್ಷಗಳ ಅನಂತರ, ಅವರನ್ನು ಚುನಾಯಿಸಲಾಗುವುದು. ಮುಂದಿನ ಚುನಾವಣೆಯಲ್ಲಿ ಮೂರು ವರ್ಷಗಳ ಅನಂತರ, ಹೀಗೆ...... ರಾಷ್ಟ್ರಪತಿಯನ್ನು ಚುನಾಯಿಸುವ ಕಾಲಕ್ಕೆ ಶಾಸನಸಭೆಗಳು ಗತಕಾಲಕ್ಕೆ ಸೇರಿ, ಅಂದಿನ ದೇಶದ ಸಾರ್ವಜನಿಕ ಅಭಿಪ್ರಾಯವನ್ನು ಪ್ರತಿಬಿಂಬಿಸದೆ ಇರಬಹುದು. ರಾಷ್ಟ್ರಪತಿಯ ಪ್ರತಿ ನಾಲ್ಕನೆಯ ಚುನಾವಣೆಯು, ಕೆಲವೇ ತಿಂಗಳಲ್ಲಿ ಅವಧಿ ಮುಗಿಯುವ ಶಾಸನಸಭೆಗಳಿಂದ ನಡೆಯುತ್ತದೆ. ಇದೊಂದು ತೀರ ಅನಪೇಕ್ಷಿತ ಪರಿಸ್ಥಿತಿ. ಶಾಸನಸಭೆಗಳು ಯಾವಾಗಲೂ ತಮ್ಮ ನಾಲ್ಕು ವರ್ಷಗಳ ಅವಧಿಯನ್ನು ಪೂರೈಸುವುದಿಲ್ಲ ಹಾಗೂ ಕೆಲವೊಂದನ್ನು ಮುಂಚಿತವಾಗಿ ವಿಸರ್ಜಿಸಲೂಬಹುದು ಎಂದು ವಾದಿಸಬಹುದು. ಅದೂ ನಿಜವೇ. ಹಾಗೆ ಶಾಸನಸಭೆಗಳ ವಿಸರ್ಜನೆಯೂ ಅಪರೂಪ. ಸುಮಾರು ಹದಿನೈದು ಶಾಸನಸಭೆಗಳ ಸದಸ್ಯರು ರಾಷ್ಟ್ರಪತಿಯನ್ನು ಚುನಾಯಿಸುತ್ತಾರೆ. ಒಂದು ವೇಳೆ ಅವುಗಳಲ್ಲಿ ಒಂದೆರಡು ತಮ್ಮ ಸಾಮಾನ್ಯ ಅವಧಿಯನ್ನು ಪೂರ್ಣಗೊಳಿಸುವ ಮುನ್ನವೇ ವಿಸರ್ಜಿತವಾಗಬಹುದು. ಅಂಥ ಸಂದರ್ಭಗಳಲ್ಲಿ ಅವುಗಳ ಸದಸ್ಯರನ್ನು ರಾಷ್ಟ್ರಪತಿ ಚುನಾವಣೆಯ ಸಮಯಕ್ಕೆ ಹೊಸದಾಗಿ ಆಯ್ಕೆಮಾಡಬಹುದು. ಆದಾಗ್ಯೂ, ಉಳಿದ ಹದಿಮೂರು ಅಥವಾ ಹದಿನಾಲ್ಕು ಶಾಸನಸಭೆಗಳ ಸದಸ್ಯರು ಹೊಸದಾಗಿ ಚುನಾಯಿತರಾಗಿರುವುದಿಲ್ಲ. ಹೀಗಾಗಿ ಬಹುಸಂಖ್ಯಾತ ಚುನಾಯಿತ ಸಮುದಾಯವು, ರಾಷ್ಟ್ರಪತಿ ಚುನಾವಣೆಯ ಕಾಲಕ್ಕೆ ಪ್ರಾಂತ್ಯಗಳ ಸಾರ್ವಜನಿಕರ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವುದಿಲ್ಲ. ಆದ್ದರಿಂದ, ರಾಷ್ಟ್ರಪತಿ ಚುನಾವಣೆಯನ್ನು ಪ್ರಾಂತೀಯ ಶಾಸನಸಭೆಗಳಿಗೆ ನಡೆಯುವ ಸಾರ್ವತ್ರಿಕ ಚುನಾವಣೆಯೊಂದಿಗೆ ನಾಲ್ಕು ವರ್ಷಗಳಿಗೊಮ್ಮೆ ನಡೆಸುವುದು ಉತ್ತಮ.

ಸಾರ್ವತ್ರಿಕ ಚುನಾವಣೆಗಳು ನಡೆಯುವಾಗ, ಶಾಸನಸಭೆಗಳ ವಿಸರ್ಜನೆಯ ಅನಂತರ, ಉಸ್ತುವಾರಿ ಸರ್ಕಾರಗಳ ಹೊರತು ಅಧಿಕಾರದಲ್ಲಿ ಯಾರೂ ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಉಸ್ತುವಾರಿಯಲ್ಲದ ರಾಷ್ಟ್ರಪತಿಯನ್ನಾದರೂ ಹೊಂದಿರುವುದು ಅಗತ್ಯವೆಂದು ವಾದಿಸಬಹುದು. ಆದರೆ, ಮಾನ್ಯರೆ, ರಾಷ್ಟ್ರಪತಿಯು ತನ್ನ ಉತ್ತರಾಧಿಕಾರಿಯು ಚುನಾಯಿತನಾದ ತರುವಾಯವೇ ತಮ್ಮ ಹುದ್ದೆಯನ್ನು ತೆರವುಗೊಳಿಸುತ್ತಾರೆ. ಆ ಹುದ್ದೆಯು ಎಂದಿಗೂ ಖಾಲಿ ಇರುವುದಿಲ್ಲ. ಅದನ್ನು ಯಾರೂ ಉಸ್ತುವಾರಿ ವಹಿಸಿಕೊಳ್ಳುವುದಿಲ್ಲ. ಐದು ವರ್ಷಗಳ ಪದ್ಧತಿಯಲ್ಲಿ ಒಂದು ಶಾಸನಸಭೆಯು ಚುನಾಯಿತವಾಗಬಹುದು. ಆಗ, ಆ ಹಿಂದೆ ಇದ್ದ ಸದಸ್ಯರು ತಮ್ಮ ಜೀವಮಾನದಲ್ಲಿಯೇ ರಾಷ್ಟ್ರಪತಿಯನ್ನು ಚುನಾಯಿಸುವ ಅಧಿಕಾರವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ.

ನಾನು ಈ ಕೊರತೆಗಳನ್ನು ಸದನದ ಗಮನಕ್ಕೆ ತರಬಯಸಿದ್ದೆನು. ಆದರೆ ನಾನು ನನ್ನ ತಿದ್ದುಪಡಿಗಾಗಿ ಒತ್ತಾಯಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಹಾಗಿದ್ದರೆ, ನೀವು ತಿದ್ದುಪಡಿಯನ್ನು ಮಂಡಿಸುವುದಿಲ್ಲವೆ?

**ಪ್ರೊ. ಶಿಬನ್‌ಲಾಲ್ ಸಕ್ಸೇನ** : ಇಲ್ಲ

**ಮಾನ್ಯ ಸಭಾಧ್ಯಕ್ಷರು** : ಇನ್ನು ಮುಂದೆ ನಾನು ಸದಸ್ಯರನ್ನು ಮೊದಲಿಗೆ ತಮ್ಮ ತಿದ್ದುಪಡಿಯನ್ನು ಮಂಡಿಸಿ, ಅನಂತರ ಭಾಷಣಮಾಡಿ ಎಂದು ಹೇಳಬೇಕೆನಿಸುತ್ತದೆ. ಶ್ರೀ ಮೊಹಮ್ಮದ್ ಶರೀಫ್.

**ಶ್ರೀ ಮೊಹಮ್ಮದ್ ಶರೀಫ್** : ಮಾನ್ಯ ಸಭಾಧ್ಯಕ್ಷರೆ ನನ್ನ ತಿದ್ದುಪಡಿ ಹೀಗಿದೆ:

"ಖಂಡ ೨ರ ಉಪಖಂಡ(೧)ರಲ್ಲಿನ '೫'ಅಂಕಿಗೆ ಬದಲಾಗಿ '೪' ಅಂಕಿಯನ್ನು ಬಳಸಬೇಕು."

ಇದರರ್ಥ ರಾಷ್ಟ್ರಪತಿಯು ತನ್ನ ಹುದ್ದೆಯನ್ನು ಐದು ವರ್ಷಗಳಿಗೆ ಬದಲಾಗಿ ನಾಲ್ಕು ವರ್ಷಗಳ ಕಾಲ ಧಾರಣಮಾಡಬೇಕು. ಶಾಸನಸಭೆಗಳ ಅವಧಿ ಮತ್ತು ರಾಷ್ಟ್ರಪತಿ ಹುದ್ದೆಯ ಅವಧಿ–ಒಂದೇ ಇರಬೇಕು ಎಂಬುದು ನನ್ನ ಉದ್ದೇಶ. ಅದು ಪ್ರಜಾಪ್ರಭುತ್ವದ ಕಟ್ಟುನಿಟ್ಟಿನ ಮೂಲತತ್ತ್ವಗಳಿಗೆ ಸಮಂಜಸವಾಗಿರುತ್ತದೆ. ಶಾಸನಸಭೆಯು ನಾಲ್ಕು ವರ್ಷಗಳಿರಬೇಕೆಂದು ವರದಿ ಹೇಳುತ್ತದೆ. ಶಾಸನಸಭೆಯು ಹೋದ ಕೂಡಲೇ ರಾಷ್ಟ್ರಪತಿಯೂ ಅವಧಿ ಮುಗಿದವರಾಗುತ್ತಾರೆ. ಆಗಲೂ ಅವರು ರಾಷ್ಟ್ರಪತಿಯಾಗಿ ಉಳಿದರೆ, ಪ್ರಜಾಪ್ರಭುತ್ವದ ಮೂಲತತ್ತ್ವಕ್ಕೆ ವಿರುದ್ಧವಾಗುತ್ತದೆ. ಒಂದು ಪಕ್ಷ ಚುನಾವಣೆ ನಡೆದು ನಾಲ್ಕು ವರ್ಷಗಳ ತರುವಾಯ ರಾಷ್ಟ್ರಪತಿಯು ಅವಧಿ ತೀರಿದವರಾದರೆ, ಆಗ ಆಡಳಿತವನ್ನು ನಿರ್ವಹಿಸುವವರಾರು ಎಂದು ವಾದಿಸಬಹುದು. ಇದಕ್ಕೆ ನಾನೊಂದು ಸಲಹೆ ನೀಡುವೆ. ನಾಲ್ಕು ವರ್ಷ ಮುಗಿಯಲು ಮೂರು–ನಾಲ್ಕು ತಿಂಗಳು ಮುನ್ನವೇ ರಾಷ್ಟ್ರಪತಿ ಚುನಾವಣೆ ನಡೆಸಬಹುದು. ಆಗ ನಾಲ್ಕು ವರ್ಷಗಳ ಅವಧಿ ಮುಗಿಯುವ ವೇಳೆಗೆ ರಾಷ್ಟ್ರಪತಿ ಚುನಾಯಿತರಾಗಿರುತ್ತಾರೆ.

ಈ ಅಭಿಪ್ರಾಯಗಳೊಂದಿಗೆ ನನ್ನ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ** (ಮೈಸೂರು ರಾಜ್ಯ) : ಮಾನ್ಯರೆ, ನನ್ನ ಹೆಸರಿನಲ್ಲಿರುವ ತಿದ್ದುಪಡಿ ಹೀಗಿದೆ :

"ಖಂಡ(೨)ರ ಉಪಖಂಡ(೧)ರಲ್ಲಿ '೫ ವರ್ಷಗಳು' ಎಂಬ ಅಂಕಿ ಹಾಗೂ ಪದಕ್ಕೆ ಬದಲಾಗಿ ಈ ಕೆಳಗಿನದನ್ನು ಬಳಸಬೇಕು :

'ನಾಲ್ಕು ವರ್ಷಗಳು ಅಥವಾ ಹೊಸ ರಾಷ್ಟ್ರಪತಿ ಚುನಾವಣೆವರೆಗೆ, ಯಾವುದು ಅನಂತರವೋ ಆಗ'."

ನಮ್ಮ ಸಂವಿಧಾನದ ಅಡಿಯಲ್ಲಿ ರಾಷ್ಟ್ರಪತಿ ಹುದ್ದೆಯ ಅವಧಿಯನ್ನು ಐದು ವರ್ಷ ಎಂದು ನಿಗದಿಪಡಿಸಲು ಉದ್ದೇಶಿಸಲಾಗಿದೆ. ಆದರೆ ಕೆಳಸದನಗಳ ಅವಧಿಯು ನಾಲ್ಕು ವರ್ಷಗಳಾಗಿವೆ. ಈ ಏರ್ಪಾಟಿನಲ್ಲಿ, ರಾಷ್ಟ್ರಪತಿ ಚುನಾವಣೆಯು ಕೆಳಸದನದ ಅವಧಿಯಲ್ಲಿ ಒಂದು ವರ್ಷ ಕಾಲ ಹಿಂದೆ ಬಿದ್ದರೆ, ಮೂರನೆಯ ಅವಧಿಯಲ್ಲಿ ಎರಡು ವರ್ಷ ಹಾಗೂ ಐದನೆಯ ಅವಧಿಯಲ್ಲಿ ನಾಲ್ಕು ವರ್ಷಗಳ ಕಾಲ ಹಿಂದೆ ಬೀಳಬಹುದು. ಹೀಗೆ ರಾಷ್ಟ್ರಪತಿಯು ನಾವು ಎರಡನೆಯ ಅವಧಿಯಿಂದ ಐದನೆಯ ಅವಧಿಗೆ ಹೋಗುತ್ತಿರುವಂತೆ, ಜನತೆಯ ಸದನದಿಂದ ಹೆಚ್ಚುಹೆಚ್ಚು ದೂರವುಳಿಯುತ್ತಾರೆ. ಈ ಸ್ಥಿತಿಯನ್ನು ಯಾವ ವಿವೇಕವೂ ತರ್ಕವೂ ಒಪ್ಪದು.

ರಾಷ್ಟ್ರಪತಿಯು, ಒಕ್ಕೂಟ ಮತ್ತು ಘಟಕ ಶಾಸನಸಭೆಗಳ ಸದಸ್ಯರಿಂದ ಚುನಾಯಿತರಾಗಬೇಕೆಂದು ಉದ್ದೇಶಿಸಲಾಗಿದೆ. ಆದ್ದರಿಂದ ರಾಷ್ಟ್ರಪತಿಯ ಚುನಾವಣೆಯು ಆ ಶಾಸನಸಭೆಗಳ ಅಭಿಪ್ರಾಯವನ್ನು ಪ್ರತಿಬಿಂಬಿಸುವುದು ಸೂಕ್ತ; ರಾಷ್ಟ್ರಪತಿ ಹುದ್ದೆಯು, ಗತಕಾಲಕ್ಕೆ ಸೇರಿ, ಶಾಸನಸಭೆಗಳ ಅಭಿಪ್ರಾಯವನ್ನು ಪ್ರತಿಬಿಂಬಿಸದಿದ್ದರೆ ರಾಷ್ಟ್ರಪತಿ ಹಾಗೂ ಶಾಸನಸಭೆಗಳ ನಡುವೆ ಸಂಘರ್ಷದ ಸಾಧ್ಯತೆ ಇದೆ. ಈ ಸಂಘರ್ಷ ತಪ್ಪಿಸಲು ರಾಷ್ಟ್ರಪತಿಯ ಅಧಿಕಾರಾವಧಿಯನ್ನು, ಕೇಂದ್ರ ಹಾಗೂ ರಾಜ್ಯಗಳ ಜನಪ್ರಿಯ ಸದನಗಳ

ಅವಧಿಯೊಂದಿಗೆ ಸಮನಾಂತರವಾಗಿರುವಂತೆ ಮಾಡಬೇಕು. ರಾಷ್ಟ್ರಪತಿಯು ಅಧಿಕಾರಾವಧಿಗೆ ಒಂದು ವರ್ಷ ಹೆಚ್ಚಿಗೆ ಸೇರಿಸುವ ಉದ್ದೇಶ, ಶಾಸನಸಭೆಗಳ ಅವಧಿ ಮುಗಿದ ಕೂಡಲೇ, ಆಡಳಿತದ ಕಾರ್ಯನೀತಿ ಹಾಗೂ ಕಾರ್ಯಕ್ರಮಗಳು ನಿಂತುಹೋಗಬಾರದೆಂದೂ ವಾದಿಸಬಹುದು. ಈಗಾಗಲೇ ಈ ವ್ಯವಸ್ಥೆ ಜಾರಿಯಲ್ಲಿರುವ ದೇಶಗಳ ಅನುಭವ ನೋಡಿದರೆ, ನಿಜಕ್ಕೂ ಹೀಗಾಗಲಾರದು. ಕೇವಲ ವಾದಕ್ಕಾಗಿ, ಈ ತೊಂದರೆ ಆಗುತ್ತದೆಂದರೂ, ಹೊಸ ಶಾಸನಸಭೆಗಳು ಅಸ್ತಿತ್ವಕ್ಕೆ ಬಂದು, ಹೊಸ ರಾಷ್ಟ್ರಪತಿ ಚುನಾಯಿತರಾಗುವವರೆಗೆ, ಅದೇ ರಾಷ್ಟ್ರಪತಿಯನ್ನು ಮುಂದುವರಿಸುವ ಮೂಲಕ ಈ ತೊಂದರೆಯನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದು.

ವಿಶ್ವದ ಕೆಲವು ಪ್ರಸಿದ್ಧ ಸಂವಿಧಾನಗಳಲ್ಲಿ ಅಳವಡಿಸಿಕೊಂಡಿರುವ ಪದ್ಧತಿಯನ್ನು ನಾನು ಉಲ್ಲೇಖಿಸಬಯಸುತ್ತೇನೆ. ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ, ರಾಷ್ಟ್ರಾಧ್ಯಕ್ಷರನ್ನು ನಾಲ್ಕು ವರ್ಷಗಳ ಅವಧಿಗೆ ಚುನಾಯಿಸಲಾಗುತ್ತದೆ. ಅವರು ಕೆಳಸದನಗಳ ಎರಡು ಅವಧಿಯವರೆಗೆ ಮುಂದುವರಿಯುತ್ತಾರೆ. ಸ್ವಿಟ್ಜರ್‌ಲೆಂಡಿನಲ್ಲಿ ಒಕ್ಕೂಟ ಪರಿಷತ್ತನ್ನು ನಾಲ್ಕು ವರ್ಷಗಳ ಅವಧಿಗೆ ಚುನಾಯಿಸಲಾಗುತ್ತದೆ. ಅದೇ ಅವಧಿಯನ್ನು ಕೆಳಸದನಕ್ಕೂ ನಿಗದಿಪಡಿಸಲಾಗಿದೆ. ಸೋವಿಯತ್ ಒಕ್ಕೂಟದಲ್ಲಿ ಜನತೆಯ ಕಾಮಿಸಾರ್‌ನನ್ನು ನಾಲ್ಕು ವರ್ಷಗಳ ಅವಧಿಗೆ ಚುನಾಯಿಸಲಾಗುತ್ತದೆ. ಒಕ್ಕೂಟ ಪರಿಷತ್ತು ಅದೇ ನಾಲ್ಕು ಅವಧಿಗಳ ಅವಧಿಯದಾಗಿರುತ್ತದೆ. ಐರ್ಲೆಂಡ್‌ನಲ್ಲಿ ರಾಷ್ಟ್ರಾಧ್ಯಕ್ಷರ ಅವಧಿ ಏಳು ವರ್ಷಗಳಾಗಿದ್ದು, ಕೆಳಸದನದ ಅವಧಿಯೂ ಅದೇ ಆಗಿರುತ್ತದೆ. ಅಂದರೆ, ಎಲ್ಲೆಡೆ ಅನುಸರಿಸುವ ಪದ್ಧತಿಯು ರಾಷ್ಟ್ರಪತಿಯ ಅಧಿಕಾರಾವಧಿಯೊಂದಿಗೆ, ಕೆಳಸದನದ ಅವಧಿಯು ಏಕೀಕರಿಸಿರುವುದು ಕಂಡುಬರುತ್ತದೆ. ಅದೇ ಪದ್ಧತಿಯನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿಕೊಳ್ಳುವುದು ಉತ್ತಮ. ಐದು ಎಂಬ ಸಂಖ್ಯೆಗೆ ಯಾವುದೇ ವಿಶೇಷ ರಂಗು ಇರಲಾರದು. ಬೇರೆಡೆ ಇರುವ ಪದ್ಧತಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು; ರಾಷ್ಟ್ರಪತಿ ಹಾಗೂ ಕೆಳಸದನಗಳ ಅಧಿಕಾರಾವಧಿ ಒಂದೇ ಆಗಿರುವುದರ ಅನುಕೂಲವನ್ನು ಪರಿಗಣಿಸಬೇಕು. ಈ ದೃಷ್ಟಿಯಿಂದ ನಾನು ತರ್ಕಸಮ್ಮತವಾದ ತಿದ್ದುಪಡಿಯನ್ನು ಪ್ರಸ್ತಾವಿಸಿದ್ದೇನೆ. ಸದನವು ಇದನ್ನು ಅಂಗೀಕರಿಸುತ್ತದೆಂದು ಆಶಿಸುತ್ತೇನೆ.

(ತಿದ್ದುಪಡಿ ಸಂ. ೧೦೨, ೧೦೩ ಮತ್ತು ೧೦೪ಗಳನ್ನು ಮಂಡಿಸಲಾಗಲಿಲ್ಲ.)

**ಶ್ರೀ ಎಚ್.ವಿ. ಕಾಮತ್** : ಮಾನ್ಯರೆ, ಸಂವಿಧಾನದಡಿ, ರಾಷ್ಟ್ರಪತಿಯ ಸ್ಥಾನ ಹೇಗಿದೆ ಎಂದರೆ, ಅವರು ಕೆಟ್ಟದಾಗಿ ನಡೆದುಕೊಳ್ಳುವ ಸಂಭವವಿಲ್ಲ. ಆದ್ದರಿಂದ ನನ್ನ ತಿದ್ದುಪಡಿ ಸಂ.೧೦೫ ಅನ್ನು ಮಂಡಿಸುವ ಅಗತ್ಯವಿಲ್ಲವೆನಿಸುತ್ತದೆ.

(ತಿದ್ದುಪಡಿ ಸಂ.೧೦೬ ರಿಂದ ೧೨೦ರವರೆಗೆ ಮಂಡಿಸಲಿಲ್ಲ)

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** (ಬಿಹಾರ್ : ಸಾಮಾನ್ಯ) : ಮಾನ್ಯರೆ, ನನ್ನ ತಿದ್ದುಪಡಿಯು ಹೀಗಿದೆ:

"ಖಂಡ ೨ರ ಉಪಖಂಡ(೩)ರ ಆನಂತರ ಈ ಕೆಳಗಿನ ಹೊಸ ಖಂಡವನ್ನು ಸೇರಿಸಬೇಕು:

'(೪). ಉಪಖಂಡ (೨)ರ ಮೇರಗೆ ರಾಷ್ಟ್ರಪತಿ ಹುದ್ದೆಯಿಂದ ತೆಗೆದು ಹಾಕಲಾದ ವ್ಯಕ್ತಿಯು ಎರಡು ಅವಧಿಗಳವರೆಗೆ ಮರುಚುನಾವಣೆಗೆ ಅರ್ಹನಾಗಿರುವುದಿಲ್ಲ'."

ತಮ್ಮ ಹಾಗೂ ಸದನದ ಅನುಮತಿಯೊಂದಿಗೆ, ನನ್ನ ತಿದ್ದುಪಡಿಗೆ, ತಿದ್ದುಪಡಿ ಮಾಡಿ, ಕೊನೆಯಲ್ಲಿನ 'ಎರಡು ಅವಧಿಗಳವರೆಗೆ' ಪದಗಳನ್ನು ಕೈಬಿಡುತ್ತೇನೆ. ಆಗ ನನ್ನ ತಿದ್ದುಪಡಿಯು ಹೀಗಿರುತ್ತದೆ. "ಉಪಖಂಡ(೨)ರ ಮೇರೆಗೆ ರಾಷ್ಟ್ರಪತಿ ಹುದ್ದೆಯಿಂದ ತೆಗೆದುಹಾಕಲಾದ ವ್ಯಕ್ತಿಯು ಮರುಚುನಾವಣೆಗೆ ಅರ್ಹನಾಗಿರುವುದಿಲ್ಲ." ಈ ತಿದ್ದುಪಡಿಯ ಅರ್ಥ ಅತ್ಯಂತ ಸ್ಪಷ್ಟವಾಗಿದ್ದು, ಅದಕ್ಕೆ ಬೆಂಬಲವಾಗಿ ನಾನು ಯಾವ ವಾದವನ್ನೂ ಮಾಡುವುದಿಲ್ಲ. ಕರಡು ರೂಪಿಸುವಾಗ ಅದನ್ನು ಸರಿಪಡಿಸಲಾಗುತ್ತದೆ. ಇದರಲ್ಲಿ ಸಂದೇಹವಿಲ್ಲ. ಇಂಥದೇ

ತಿದ್ದುಪಡಿಯನ್ನು ಪ್ರಾಂತೀಯ ಸಂವಿಧಾನಕ್ಕೂ ಮಂಡಿಸಲಾಗಿದೆ. ಆದ್ದರಿಂದ, ಒಕ್ಕೂಟ ಸಂವಿಧಾನಕ್ಕೂ ಈ ತಿದ್ದುಪಡಿಯನ್ನು ತಮ್ಮ ಪರಿಗಣನೆಗಾಗಿ ಮಂಡಿಸುತ್ತೇನೆ.

**ಶ್ರೀ ಎಚ್.ವಿ. ಕಾಮತ್ :** ಮಾನ್ಯ ಸಭಾಧ್ಯಕ್ಷರೆ, ಖಂಡ ೨ರ ಉಪಖಂಡ(೩)ಕ್ಕೆ ನನ್ನ ತಿದ್ದುಪಡಿ ಅನಗತ್ಯವಾಗಿರುವುದರಿಂದ, ಅದನ್ನು ನಾನು ಮಂಡಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು :** ಖಂಡ(೨)ಕ್ಕೆ ಸೂಚನೆ ನೀಡಿರುವ ತಿದ್ದುಪಡಿಗಳು ಇಷ್ಟು. ಇನ್ನು ಯಾವುದಾದರೂ ಇದ್ದರೆ, ಸೂಚನೆ ನೀಡಿರುವವರು ನನಗೆ ತಿಳಿಸಿ, ಮಂಡಿಸಬಹುದು. ಯಾರೂ ಮಂಡಿಸಲಿಲ್ಲವಾದ್ದರಿಂದ, ಸದನವು ಈಗ ಖಂಡದ ಬಗ್ಗೆ ಚರ್ಚಿಸಬಹುದು. ತಿದ್ದುಪಡಿಗಳ ವಿಷಯದಲ್ಲಿ ಮುಂದುವರಿಯಬಹುದು.

ಈ ತಿದ್ದುಪಡಿಯ ಬಗ್ಗೆ ಯಾರಾದರೂ ಮಾತನಾಡಲು ಬಯಸುವಿರಾ?

(ಗೌರವಾನ್ವಿತ ಸದಸ್ಯರು "ಮತಕ್ಕೆ ಹಾಕಿ" ಎಂದು ಕೂಗುವರು)

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು :** ಈ ಖಂಡದ ಬಗ್ಗೆ ಮಂಡಿಸಿರುವ ಎರಡು ತಿದ್ದುಪಡಿಗಳು ಯಾವುದೇ ಉನ್ನತ ಕಾರ್ಯನೀತಿಯ ಪ್ರಶ್ನೆ ಎತ್ತುವುದಿಲ್ಲ. ಕೊನೆಯದಂತೂ ಸ್ಪಷ್ಟವಾಗಿರುವುದನ್ನೇ ಒತ್ತಿ ಹೇಳುತ್ತಿದೆ. ಅಧಿಕಾರದಿಂದ ತೆಗೆದುಹಾಕಲ್ಪಟ್ಟ ರಾಷ್ಟ್ರಪತಿಯು ಮರುಚುನಾವಣೆಗೆ ನಿಲ್ಲುವುದು ಅಸಾಧ್ಯ. ಇದರಲ್ಲಿ ಯಾವುದೇ ಉನ್ನತ ತತ್ತ್ವವಿದೆ ಎಂದು ನನಗನಿಸುವುದಿಲ್ಲ. ನಾವು ತುಂಬ ಮಹತ್ತರ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದೇವೆ. ಈ ಬಗ್ಗೆ ಏನನ್ನಾದರೂ ಮಾಡಬೇಕು ಎಂದರೆ ಆಮೇಲೆ ಮಾಡೋಣ.

ಅಧಿಕಾರಾವಧಿ ಕುರಿತ ತಿದ್ದುಪಡಿಯೂ ಸಹ ಮಹತ್ತ್ವದ ಕಾರ್ಯನೀತಿಯ ವಿಷಯವಲ್ಲ. ಈ ಅವಧಿಯನ್ನು ನಾವು ಅನೇಕ ಕಾರಣಗಳಿಗಾಗಿ ನಿಗದಿಪಡಿಸಿದ್ದೇವೆ. ಅದನ್ನೆಲ್ಲ ನಾನೀಗ ಹೇಳುವ ಆವಶ್ಯಕತೆ ಇಲ್ಲ. ಅದರಲ್ಲಿ ಇತರ ಚುನಾವಣೆಗಳ ನಾಲ್ಕು ವರ್ಷಗಳ ಅವಧಿಗೆ ಅದನ್ನು ಹೊಂದಾಣಿಕೆ ಮಾಡದಿರುವುದೂ ಒಂದು. ಪ್ರಾಂತೀಯ ಮತ್ತು ಇತರ ಶಾಸನಸಭೆಗಳಿಗೆ ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆ ನಡೆದರೆ, ಇದೊಂದು ಮಾತ್ರ ಐದು ವರ್ಷಗಳಿಗೊಮ್ಮೆ ನಡೆಯುತ್ತದೆ. ಕೆಲಕಾಲದ ಅನಂತರ, ಚುನಾಯಕರು ಮೂರು ಅಥವಾ ನಾಲ್ಕು ವರ್ಷಗಳಷ್ಟು ಹಿಂದೆಯೇ ಆಯ್ಕೆಯಾದ ಹಳಬರಾಗುತ್ತಾರೆಂದು ಅನೇಕ ಸದಸ್ಯರು ಭಾವಿಸುವಂತೆ ಕಾಣುತ್ತದೆ. ರಾಷ್ಟ್ರಪತಿಯ ಐದು ವರ್ಷಗಳ ಅಧಿಕಾರಾವಧಿ ನಿಶ್ಚಿತ ಅವಧಿಯಾಗಿದೆ. ಅವರು ನಿಧನರಾದಲ್ಲಿ ಅಥವಾ ಮಹಾಭಿಯೋಗದ ಮೂಲಕ ಅವರನ್ನು ತೆಗೆದುಹಾಕಿದಲ್ಲಿ ಅಥವಾ ಬೇರೇನಾದರೂ ಅವರಿಗೆ ಆದಲ್ಲಿ ಮಾತ್ರ ಅದು ಬದಲಾವಣೆಯಾಗುತ್ತದೆ. ಇತರ ಪ್ರಾಂತೀಯ ಚುನಾವಣೆಗಳಿಗೆ ನಾಲ್ಕು ವರ್ಷದ ಅವಧಿಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದಿಲ್ಲವೆನ್ನುವುದು ಸ್ಪಷ್ಟ ಹಾಗೂ ನಿರೀಕ್ಷಿತ. ಚುನಾವಣೆಗಳನ್ನು ಕಾಲಕಾಲಕ್ಕೆ ನಡೆಸಬೇಕೆಂಬುದೇನೋ ಅವಶ್ಯ. ಏನಾದರೂ ಸಂಭವಿಸಿ ಸಚಿವಸಂಪುಟ ಬದಲಾಗಬಹುದು. ಸದನದ ವಿಶ್ವಾಸ ಕಳೆದುಕೊಳ್ಳುವುದು. ಇನ್ನೂ ಅನೇಕ ಸಂಗತಿಗಳು ಸಂಭವಿಸಬಹುದು. ಶಾಸನಸಭೆಗಳಲ್ಲಿ ಸದಸ್ಯತ್ವ ಬದಲಾವಣೆಯಾಗದೆ ಉಳಿಯುವುದು ಕಷ್ಟ. ವರ್ಷದಿಂದ ಮೊದಲೇ ಚುನಾಯಿತರಾದ ಚುನಾಯಕ ಗಣದಿಂದ ರಾಷ್ಟ್ರಪತಿಯನ್ನು ಚುನಾಯಿಸಲಾಗುತ್ತದೆ ಎಂಬ ಆಕ್ಷೇಪಣೆಯು ಊರ್ಜಿತವಾಗುವುದಿಲ್ಲ. ಚುನಾಯಕ ಗಣ ಸಹ ಸದಾ ಬದಲಾಗುತ್ತಲೇ ಇರುತ್ತದೆ. ನಾಲ್ಕು ವರ್ಷಗಳ ಅವಧಿ ಗರಿಷ್ಠ ಅವಧಿ ಮಾತ್ರ. ಚುನಾಯಕಗಣ ಒಂದು ವರ್ಷ ಅಥವಾ ಆರು ತಿಂಗಳು ಮಾತ್ರ ಬದಲಾಗದಿರಬಹುದು; ಈಗ ಆಗುತ್ತಿರುವಂತೆ ಹೊಸ ಚುನಾವಣೆಗಳು ನಡೆಯಬಹುದು. ಅಂತಿಮವಾಗಿ, ಐದು ವರ್ಷಗಳ ಅವಧಿಯೇ ಉತ್ತಮ ಎಂದು ಹೇಳಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"ಖಂಡ(೨)ರ ಉಪಖಂಡ(೨)ರಲ್ಲಿನ '೫' ಅಂಕಿಗೆ ಬದಲಾಗಿ '೪' ಅಂಕಿಯನ್ನು ಬಳಸಬೇಕು."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮುಂದಿನ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಮುಂದಿಟ್ಟಿರುವ ವಿಷಯ :

"ಖಂಡ(೨)ರ ಉಪಖಂಡ(೧)ರಲ್ಲಿ '೫ ವರ್ಷಗಳು' ಎಂಬ ಅಂಕಿ ಮತ್ತು ಪದಕ್ಕೆ ಬದಲಾಗಿ ಈ ಕೆಳಗಿನದನ್ನು ಬಳಸಬೇಕು :

'೪ ವರ್ಷಗಳು ಅಥವಾ ಹೊಸ ರಾಷ್ಟ್ರಪತಿಯ ಚುನಾವಣೆಯವರೆಗೆ – ಯಾವುದು ಅನಂತರವೋ ಆಗ."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಶ್ರೀ ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** : ಮಾನ್ಯರೆ, ಈ ಹಂತದಲ್ಲಿಯೇ ನಾನೊಂದು ಮಾತು ಹೇಳಬೇಕು. ನನ್ನ ತಿದ್ದುಪಡಿ (ಸಂ. ೧೨೧)ಯನ್ನು ತಿರಸ್ಕರಿಸುವುದು ಸೂಕ್ತವಲ್ಲ. ನಾನು ಅದನ್ನು ಕರಡು ತಯಾರಿಸುವವರಿಗೆ ಬಿಡಬಯಸುತ್ತೇನೆ. ಈ ತಿದ್ದುಪಡಿಯನ್ನು ತಿರಸ್ಕರಿಸುವುದೆಂದರೆ, ಸದನದ ಅಭಿಪ್ರಾಯದಲ್ಲಿ ಮಹಾಭಿಯೋಗಕ್ಕೆ ಗುರಿಯಾದ ರಾಷ್ಟ್ರಪತಿಯು ಮರುಚುನಾವಣೆಗೆ ಅರ್ಹ ಎಂದಾಗುತ್ತದೆ. ಗೌರವಾನ್ವಿತ ಮಂಡನೆಕಾರರು ನನ್ನ ತಿದ್ದುಪಡಿಯನ್ನು ಒಪ್ಪದಿದ್ದರೆ, ಅದು ನಿರಾಕರಣೆಗೊಳ್ಳುವುದಕ್ಕೆ ಬದಲಾಗಿ, ನಾನು ಹಿಂತೆಗೆದುಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಸದನವು ಅವರಿಗೆ ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಿದೆಯೆಂದು ನಾನು ಪರಿಗಣಿಸುತ್ತೇನೆ.

ಸದನದ ಅನುಮತಿಯೊಂದಿಗೆ ಈ ಪ್ರಸ್ತಾವವನ್ನು ಹಿಂತೆಗೆದುಕೊಳ್ಳಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಖಂಡ ೨ ಅನ್ನು ಅಂಗೀಕರಿಸಬೇಕು ಎಂಬುದು ಮುಂದಿಟ್ಟಿರುವ ವಿಷಯ :

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ ೩

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಖಂಡ ೩ ಅನ್ನು ಅಂಗೀಕಾರಕ್ಕಾಗಿ ಮಂಡಿಸಲು ಅನುಮತಿ ಕೋರುತ್ತಿದ್ದೇನೆ. ಅದು ಹೀಗಿದೆ. :

"೩. ಮೂವತ್ತೈದು ವರ್ಷ ಪೂರೈಸಿದ ಹಾಗೂ ಲೋಕಸಭೆಯ ಸದಸ್ಯನಾಗಿ ಚುನಾಯಿತನಾಗಲು ಅರ್ಹವಾದ ಒಕ್ಕೂಟದ ಪ್ರತಿಯೊಬ್ಬ ಪ್ರಜೆಯೂ ರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹನಾಗಿರತಕ್ಕುದು."

ಇದು ಸರಳವಾದ ಪ್ರಸ್ತಾವ. ಇದರ ಬೆಂಬಲಕ್ಕೆ ಯಾವುದೇ ಸಮರ್ಥನೆ ಬೇಕಿಲ್ಲ. ಮೂವತ್ತೈದನೆಯ ವರ್ಷದವರೆಗೆ ಏನನ್ನೂ ಸಾಧಿಸದ ವ್ಯಕ್ತಿಯು ಆ ತರುವಾಯ ಹೆಚ್ಚಿನದನ್ನು ಸಾಧಿಸಲಾರ ಎಂಬುದು ಒಂದು ನಂಬಿಕೆ. ಆದಾಗ್ಯೂ, ಭಾರತದ ಮಟ್ಟಿಗೆ ಹೇಳುವುದಾದರೆ, ಕೆಲವೊಮ್ಮೆ ಮೂವತ್ತೈದನೆಯ ವಯಸ್ಸಿನ ವ್ಯಕ್ತಿಗಳಿಗೆ ಹೆಚ್ಚಿನದನ್ನು ಸಾಧಿಸಲು ಒಂದು ಅವಕಾಶವೂ ದೊರೆಯಲಾರದು. ಅಲ್ಲದೆ, ೩೫ ವರ್ಷ ಅತಿ ಹೆಚ್ಚಿನ ಪರಿಮಿತಿಯೂ ಅಲ್ಲ. ಅದು ನ್ಯಾಯಯುತವಾದ ಪರಿಮಿತಿ. ಎಂದರೆ, ಆಯ್ಕೆಯಾದ ವ್ಯಕ್ತಿಯು ಕನಿಷ್ಠ ಒಂದು ಡಜ಼ನ್ ವರ್ಷಗಳಷ್ಟು ಅನುಭವವನ್ನು ಹೊಂದಿರಬೇಕು ಎಂದರ್ಥ. ಹೀಗಾಗಿ ಅದು ಅಭ್ಯರ್ಥಿಯ ಆಯ್ಕೆಗೆ ಸಾಕಷ್ಟು ಸುರಕ್ಷಿತವಾದ ವಯಸ್ಸು. ಸದನವು ಈ ಖಂಡವನ್ನು ಅಂಗೀಕರಿಸುತ್ತದೆಂದು ಆಶಿಸುತ್ತೇನೆ.

(ತಿದ್ದುಪಡಿ ಸಂ.೧೨೩ರಿಂದ ೧೨೮ರವರೆಗೆ ಮಂಡಿಸಲಾಗಲಿಲ್ಲ.)

**ಶ್ರೀ ಎಚ್.ವಿ. ಕಾಮತ್** : ನನ್ನ ತಿದ್ದುಪಡಿ ಮಂಡಿಸದಿರುವ ಮುನ್ನ ಪಂಡಿತ್ ನೆಹರು ಅವರಿಂದ ಒಂದು ಅಂಶದ ಬಗ್ಗೆ ಸ್ಪಷ್ಟನೆ ಕೋರುತ್ತೇನೆ. ಪ್ರಾಂತೀಯ ಸಂವಿಧಾನದಲ್ಲಿ ಇದೇ ಉದ್ದೇಶಕ್ಕಾಗಿ ಬಳಸಿರುವ

ಪದಪ್ರಯೋಗ "೩೫ ವರ್ಷ ತಲುಪಿದ" ಎಂದಿದ್ದರೆ, ಇಲ್ಲಿ "೩೫ ವರ್ಷ ಪೂರೈಸಿದ" ಎಂಬ ಪದಪ್ರಯೋಗ ಬಳಸಲಾಗಿದೆ. ನಾವು ಹೀಗೆ ಏಕೆ ಇಲ್ಲಿ ಬೇರೆ ಭಾಷೆ ಬಳಸುತ್ತಿದ್ದೇವೆಯೋ ತಿಳಿಯದು. ಈ ಎರಡು ಪದಗುಚ್ಛಗಳು ಒಂದೇ ಅರ್ಥ ನೀಡುತ್ತವೆಯೇ?

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಕ್ಷಮಿಸಿ, ಶ್ರೀಯುತ ಕಾಮತ್ ಅವರು ಹೇಳಿದ ಒಂದು ಪದವೂ ನನಗೆ ಕೇಳಿಸಲಿಲ್ಲ. ಪ್ರಾಂತೀಯ ಸಂವಿಧಾನಕ್ಕೆ ನಾನು ಜವಾಬ್ದಾರನಲ್ಲ. ಇದು ಉತ್ತಮ ಪದಪ್ರಯೋಗ ಎಂದು ನನ್ನ ಭಾವನೆ. 'ಪೂರೈಸಿದ' ಎಂಬುದು ನಿಶ್ಚಿತ ಅರ್ಥ ನೀಡುತ್ತದೆ. ಬೇರೆ ಪದಪ್ರಯೋಗದ ಅರ್ಥವೇನೋ ನನಗೆ ತಿಳಿಯದು. (ನಗು).

(ಶ್ರೀಯುತರಾದ ಠಾಕೂರ್ ದಾಸ್ ಭಾರ್ಗವ, ರಾಜ್‌ಕೃಷ್ಣ ಬೋಸ್ ಮತ್ತು ಎಚ್.ವಿ. ಕಾಮತ್ ಅವರು ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ).

**ಮಾನ್ಯ ಸಭಾಧ್ಯಕ್ಷರು** : ಈ ಎಲ್ಲ ತಿದ್ದುಪಡಿಗ್ಗಳಿಗೂ ಸೂಚನೆ ನೀಡಲಾಗಿದ್ದಿತು. ಇತರ ತಿದ್ದುಪಡಿಗಳಿಲ್ಲವೆಂದು ಭಾವಿಸುತ್ತೇನೆ. ಈಗ ಖಂಡವನ್ನು ಮತಕ್ಕೆ ಹಾಕುತ್ತೇನೆ.

ಖಂಡ ೩ ಅನ್ನು ಅಂಗೀಕರಿಸಲಾಯಿತು.

## ಖಂಡ ೪

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ರಾಷ್ಟ್ರಪತಿ ಹುದ್ದೆಯ ಷರತ್ತುಗಳನ್ನು ಕುರಿತ ಖಂಡ ೪ ಅನ್ನು ಮಂಡಿಸುತ್ತೇನೆ.

"(೧) ರಾಷ್ಟ್ರಪತಿಯು ಒಕ್ಕೂಟ ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿರತಕ್ಕುದಲ್ಲ ಮತ್ತು ಯಾವುದೇ ಸದನದ ಸದಸ್ಯನು ರಾಷ್ಟ್ರಪತಿಯಾಗಿ ಚುನಾಯಿತನಾದರೆ, ಅವರು ಸದನದಲ್ಲಿನ ತನ್ನ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕುದು.

(೨) ರಾಷ್ಟ್ರಪತಿಯು ವರಮಾನವಿರುವ ಯಾವುದೇ ಇತರ ಹುದ್ದೆ ಅಥವಾ ಸ್ಥಾನವನ್ನು ಹೊಂದಿರತಕ್ಕುದಲ್ಲ.

(೩) ರಾಷ್ಟ್ರಪತಿಯು ಒಂದು ಅಧಿಕೃತ ನಿವಾಸವನ್ನು ಹೊಂದಿರತಕ್ಕುದು ಮತ್ತು ಒಕ್ಕೂಟ ಸರ್ಕಾರದ ಅಧಿನಿಯಮದಲ್ಲಿ ಗೊತ್ತುಪಡಿಸಲಾಗುವ ವೇತನ ಮತ್ತು ಭತ್ಯೆಗಳನ್ನು ಪಡೆದುಕೊಳ್ಳತಕ್ಕುದು ಮತ್ತು ಅಲ್ಲಿಯವರೆಗೆ ಅನುಸೂಚಿ ........ರಲ್ಲಿ ನಿಗದಿಪಡಿಸಿರುವಂಥದನ್ನು ಪಡೆದುಕೊಳ್ಳತಕ್ಕುದ್ದು.

(೪) ರಾಷ್ಟ್ರಪತಿಯ ಅಧಿಕಾರಾವಧಿಯಲ್ಲಿ ಅವರ ವೇತನ ಮತ್ತು ಭತ್ಯೆಗಳನ್ನು ಕಡಿಮೆ ಮಾಡತಕ್ಕುದಲ್ಲ."

ಒಂದು ಸಣ್ಣ ವಿಷಯವನ್ನು ಇಲ್ಲಿಯೇ ಸ್ಪಷ್ಟಪಡಿಸಬೇಕು. ಅದನ್ನು ಸ್ಪಷ್ಟಪಡಿಸಲು ಒಂದು ತಿದ್ದುಪಡಿ ಬೇಕು. ಉಪಖಂಡ(೧)ರಲ್ಲಿ ಹೀಗಿದೆ : "ರಾಷ್ಟ್ರಪತಿಯು ಒಕ್ಕೂಟದ ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿರತಕ್ಕುದಲ್ಲ." ಸ್ಪಷ್ಟವಾಗಿ, ಅವರು ಪ್ರಾಂತೀಯ ಶಾಸನಸಭೆಗಳ ಸದಸ್ಯನಾಗಿರಲೂಬಾರದು. ಈ ಬಗ್ಗೆ ತಿದ್ದುಪಡಿಯೊಂದನ್ನು ಮಂಡಿಸಲಾಗುವುದು. ಹಾಗಾದರೆ ನಾನು ಇದನ್ನು ಅಂಗೀಕರಿಸುತ್ತೇನೆ.

**ನವಾಬ್ ಮೊಹಮದ್ ಇಸ್ಮಾಯಿಲ್ ಖಾನ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ರಾಷ್ಟ್ರಪತಿಯು ವರಮಾನವಿರುವ ಸ್ಥಾನವನ್ನು ಹೊಂದಿರತಕ್ಕುದಲ್ಲ" ಎಂಬ ಮಾತಿನ ಅರ್ಥವೇನು ಎಂದು ಪ್ರಸ್ತಾವಕರನ್ನು ಕೇಳಬಹುದೆ? ಅವರು ಯಾವುದೇ ಕಂಪನಿಯ ನಿರ್ದೇಶಕರಾಗಿರಬಾರದು ಅಥವಾ ಸರ್ಕಾರದಲ್ಲೂ ಯಾವುದೇ ಉಪಲಬ್ಧಿಯುಳ್ಳ ಸ್ಥಾನವನ್ನು ಹೊಂದಿರಬಾರದು ಎಂದರ್ಥವೇ?

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಅವರು ವರಮಾನವುಳ್ಳ ಯಾವುದೇ ಹುದ್ದೆ ಅಥವಾ ಸ್ಥಾನವನ್ನು ಅದು ಯಾವುದೇ ಆಗಿರಲಿ ಹೊಂದಿರಬಾರದು. ಅವರು ಲಾಭ ತರಬಲ್ಲ ಯಾವುದೇ ಬಗೆಯ ಹುದ್ದೆಯನ್ನು ಹೊಂದಿರಬಾರದು.

**ನವಾಬ್ ಮೊಹಮದ್ ಇಸ್ಮಾಯಿಲ್ ಖಾನ್** : ನೀವು ಅದನ್ನು ಸ್ಪಷ್ಟಪಡಿಸುತ್ತೀರೆಂದು ಆಶಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಅದು ಬಹುಮಟ್ಟಿಗೆ ಸ್ಪಷ್ಟವಾಗಿದೆ; ಪೂರಾ ಸ್ಪಷ್ಟವಾಗಿದೆ. ಸದನಕ್ಕೆ ಗೊತ್ತಿರುವಂತೆ, ಸಚಿವರೂ ಕೂಡ ಕಂಪನಿಗಳ ನಿರ್ದೇಶಕತ್ವವನ್ನು ಹೊಂದಿರಬಾರದು. ಇದು ಅನೇಕ ದೇಶಗಳಲ್ಲಿ ನಿಯಮವಲ್ಲದಿದ್ದರೂ ಸಂಪ್ರದಾಯವಾಗಿದೆ. ರಾಷ್ಟ್ರಪತಿಯ ಮಟ್ಟಿಗೆ ಅವರು ಯಾವುದೇ ನಿರ್ದೇಶಕತ್ವವನ್ನು ಅಥವಾ ಲಾಭಕರ ಸ್ಥಾನವನ್ನು ಅಥವಾ ವ್ಯಾಪಾರದಲ್ಲಿ ಆದಾಯ ತರುವ ಸ್ಥಾನವನ್ನು ಹೊಂದಿರಬಾರದು.

**ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ** (ಮದ್ರಾಸ್ : ಸಾಮಾನ್ಯ) : ಆದರೆ ಇಲ್ಲಿನ ಪದಪ್ರಯೋಗ ಆ ಅರ್ಥವನ್ನು ನೀಡುತ್ತಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಎಲ್ಲ ತಿದ್ದುಪಡಿಗಳನ್ನು ಮಂಡಿಸಿದ ಮೇಲೆ ಖಂಡದ ಬಗ್ಗೆ ಚರ್ಚಿಸೋಣ.

(ಶ್ರೀಯುತರಾದ ಸೇಠ್ ಗೋವಿಂದದಾಸ್, ಅಜಿತ್ ಪ್ರಸಾದ್ ಜೈನ್, ಎಸ್.ವಿ. ಕೃಷ್ಣಮೂರ್ತಿರಾವ್ ಮತ್ತು ನಜಿರುದ್ದೀನ್ ಅಹ್ಮದ್ – ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ).

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಖಂಡ ೪ರ ಉಪಖಂಡ (೨)ಕ್ಕೆ ಬದಲಾಗಿ ಈ ಕೆಳಗಿನದನ್ನು ಬಳಸಬೇಕು :

"(೨) ರಾಷ್ಟ್ರಪತಿಯು ಒಕ್ಕೂಟ ಅಥವಾ ಯಾವುದೇ ಪ್ರಾಂತೀಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ಅದರ ಅಡಿಯಲ್ಲಿ ಅಥವಾ ಯಾವುದೇ ವ್ಯಾಪಾರಿ ಸಂಸ್ಥೆಯಲ್ಲಿ ಅಥವಾ ಅದರ ಅಡಿಯಲ್ಲಿ (ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ) ಗೌರವ ಸಾಮರ್ಥ್ಯದಲ್ಲಿ ಅಥವಾ ವೇತನ ಅಥವಾ ಭತ್ಯೆಯುಳ್ಳ ಯಾವುದೇ ಸ್ಥಾನ ಅಥವಾ ಅಧಿಕಾರವನ್ನು ಹೊಂದಿರತಕ್ಕುದಲ್ಲ."

ಮಾನ್ಯರೆ, ಈ ಅಂಶವು ಸದನದ ಕೆಲವೊಂದು ಗೌರವಾನ್ವಿತ ಸದಸ್ಯರನ್ನು ತಟ್ಟಿದೆ. ಈ ನಿಯಮವು, ರಾಷ್ಟ್ರಪತಿಯು, ವರಮಾನವುಳ್ಳ ಯಾವುದೇ ಅಧಿಕಾರ ಅಥವಾ ಸ್ಥಾನವನ್ನು ಹೊಂದಿರಬಾರದು, ಆದರೆ ಅವರು ವ್ಯಾಪಾರಿ ಸಂಸ್ಥೆಯಲ್ಲಿ ಗೌರವದ ಹುದ್ದೆಯನ್ನು ಹೊಂದಿರಬಹುದೆನ್ನುತ್ತದೆ. ಅವರು ಯಾವುದೇ, ಧಾರ್ಮಿಕ ಧರ್ಮಾರ್ಥದ, ಶೈಕ್ಷಣಿಕ ಅಥವಾ ಅಂಥದೇ ಇತರ ಸಂಸ್ಥೆಗಳಿಗೆ ಸೇರಿದವರಾಗಿದ್ದರೂ, ಅದಕ್ಕೆ ಆಕ್ಷೇಪಣೆ ಇಲ್ಲ. ಆದರೆ, ಅವರು ವ್ಯಾಪಾರಿ ಸಂಸ್ಥೆಯಲ್ಲಿ ಗೌರವದ ಸ್ಥಾನವನ್ನು ಹೊಂದಿದ್ದರೂ ಅದು ಗಂಭೀರ ಆಕ್ಷೇಪವಾಗುತ್ತದೆ ಎಂದು ನನ್ನ ಭಾವನೆ. ಯಾರೇ ವ್ಯಾಪಾರಿ ತನ್ನ ವ್ಯವಹಾರದ ಪೋಷಕರಾಗುವಂತೆ ರಾಷ್ಟ್ರಪತಿಯನ್ನು ಕೋರಬಹುದು. ಆ ಕಾರಣದಿಂದಲೇ ವ್ಯಾಪಾರಿಗೆ ಒಳ್ಳೆಯ ವ್ಯಾಪಾರವಾಗಲೂಬಹುದು. ಈ ಬಗೆಯ ವ್ಯಾಪಾರಿ ಸಂಬಂಧಕ್ಕೆ ಅವಕಾಶ ಕೊಡಕೂಡದು. ಈ ಅಂಶವನ್ನು ಕರಡು ತಯಾರಿಕಾ ಸಮಿತಿಯು ಪರಿಗಣಿಸುವಂತೆ ನಾನು ಒತ್ತಾಯಿಸುತ್ತೇನೆ ಅಷ್ಟೇ. ಸದನಕ್ಕೆ ನಾನು ಹೇಳಬಯಸುವುದು ಇಷ್ಟು ಮಾತ್ರ.

**ಶ್ರೀ ಎಚ್.ವಿ. ಪಾಟಸ್ಕರ್** : ಖಂಡ ೪ರ ಉಪಖಂಡ(೨) ಸಂಶಯಗಳಿಗೆ ಎಡೆಮಾಡಿಕೊಟ್ಟಿದ್ದರಿಂದ, ನನ್ನ ಈ ತಿದ್ದುಪಡಿಯನ್ನು ಮಂಡಿಸಿದ್ದೆನು. ಅದು ಹೀಗಿದೆ : "ಅಥವಾ ಆತನು ಗಳಿಕೆ ಅಥವಾ ಲಾಭಕ್ಕಾಗಿ ಯಾವುದೇ ವ್ಯಾಪಾರ ಅಥವಾ ವೃತ್ತಿಯಲ್ಲಿ ಹಿತಾಸಕ್ತಿಯುಳ್ಳನಾಗಿರತಕ್ಕುದಲ್ಲ". ರಾಷ್ಟ್ರಪತಿಯು ಯಾವುದೇ ವ್ಯವಹಾರದಲ್ಲಿ ಯಾವುದೇ ಹಿತಾಸಕ್ತಿ ಹೊಂದಿರುವಂತಿಲ್ಲ ಎಂಬ ಉದ್ದೇಶ ಈಗ ನನಗೆ ಸ್ಪಷ್ಟವಾಗಿದೆ. ಆದ್ದರಿಂದ, ನನ್ನ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ಹಾಗೆಯೇ ಸಂವಿಧಾನದ ಅಂತಿಮ ಕರಡು ರೂಪಿಸುವಾಗ ಇದನ್ನು ಮತ್ತಷ್ಟು ಸ್ಪಷ್ಟಪಡಿಸಬೇಕೆಂದು ಕೋರುತ್ತೇನೆ.

**ಶ್ರೀ ಟಿ.ಎ. ರಾಮಲಿಂಗಮ್ ಚೆಟ್ಟಿಯಾರ್** (ಮದ್ರಾಸ್ : ಸಾಮಾನ್ಯ) : ನನ್ನ ತಿದ್ದುಪಡಿಯು, ರಾಷ್ಟ್ರಪತಿಯು ಅಧಿಕಾರ ವಹಿಸಿಕೊಂಡ ಅನಂತರದ ನೇಮಗಳಿಗೆ ಸಂಬಂಧಿಸಿದೆ. ಅದನ್ನು ಅಂಗೀಕರಿಸುವ ಅಥವಾ

ನಿರಾಕರಿಸುವ ವಿಷಯವನ್ನು ಮಂಡನೆಕಾರರಿಗೆ ಬಿಡುತ್ತೇನೆ. ಅವರು ಒಂದು ವೇಳೆ ಒಪ್ಪದಿದ್ದರೂ ನಾನು ಒತ್ತಾಯಿಸುವುದಿಲ್ಲ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ತಾವು ಉಲ್ಲೇಖಿಸುತ್ತಿರುವ ತಿದ್ದುಪಡಿ ಯಾವುದು?

**ಮಾನ್ಯ ಸಭಾಧ್ಯಕ್ಷರು** : ಶ್ರೀ ರಾಮಲಿಂಗಂ ಚೆಟ್ಟಿಯಾರ್ ಸೂಚನೆ ನೀಡಿರುವ ತಿದ್ದುಪಡಿ ಹೀಗಿದೆ:

"ರಾಷ್ಟ್ರಪತಿ ಹುದ್ದೆಯನ್ನು ಹೊಂದಿದ್ದ ವ್ಯಕ್ತಿಯು ಯಾವುದೇ ವೇತನಸಹಿತವಾದ ಹುದ್ದೆಗೆ ನೇಮಕಗೊಳ್ಳಲು ಅರ್ಹನಾಗಿರತಕ್ಕುದಲ್ಲ." ಅಂದರೆ, ರಾಷ್ಟ್ರಪತಿಯಾಗಿರುವುದು ಮುಗಿದ ಅನಂತರ, ಅವರನ್ನು ನೇಮಕ ಮಾಡತಕ್ಕುದಲ್ಲ. ತಿದ್ದುಪಡಿಯನ್ನು ಔಪಚಾರಿಕವಾಗಿ ಮಂಡಿಸಲಾಗಿದೆ. ಆದ್ದರಿಂದ ನಾವು ಮುಂದುವರಿಯೋಣ.

(ಶ್ರೀಯುತರಾದ ಶ್ರೀ ಡಿ. ಗೋವಿಂದದಾಸ್, ಪಿ. ಕಕ್ಕನ್, ವಿ.ಐ. ಮುನಿಸ್ವಾಮಿ ಪಿಳ್ಳೈ ಹಾಗೂ ಪಿ.ಎಂ. ವೇಲಾಯುಧಪಾಣಿ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ).

**ಕೆ.ಟಿ.ಎಂ. ಅಹಮದ್ ಇಬ್ರಾಹಿಂ ಸಾಹಿಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನಾನು ಕೆಳಗಿನಂತೆ ಮಂಡಿಸುತ್ತಿದ್ದೇನೆ:

"ಖಂಡ ೧೮ರ ಉಪಖಂಡ (೨)ರ ಕೊನೆಯ ವಾಕ್ಯದಲ್ಲಿ 'ಒಕ್ಕೂಟ ಸಂಸತ್ತಿನ ಮತಗಳು ಮತ್ತು ಆವರೆಗೆ ಅಂಥ– –' ಎಂಬ ಪದಗಳನ್ನು ತೆಗೆದು ಹಾಕಬೇಕು."

ಒಕ್ಕೂಟದ ರಾಷ್ಟ್ರಪತಿಯು ಇಡೀ ರಾಜ್ಯದ ಪರಮೋಚ್ಚ ಕಾರ್ಯಾಂಗ ಅಧಿಕಾರಿಯಾಗಿರುತ್ತಾರೆ. ಅವರು ಚುನಾಯಿತರಾದ ಕೂಡಲೇ ಪಕ್ಷ ರಾಜಕೀಯದಿಂದ ಸಂಪೂರ್ಣ ಮುಕ್ತರಾಗಿರಬೇಕು. ಒಂದು ವೇಳೆ ಅವರ ವೇತನ ಹಾಗೂ ಭತ್ಯೆಗಳ ನಿರ್ಧಾರಣೆಯು ಒಕ್ಕೂಟ ಸಂಸತ್ತಿನ ಅಧಿನಿಯಮವನ್ನು ಅವಲಂಬಿಸಿದರೆ, ತಮ್ಮ ವೇತನದ ವಿಷಯ ಪಕ್ಷ ಪ್ರಭಾವಕ್ಕೆ ಒಳಪಟ್ಟಿದೆ ಎಂಬ ಅರಿವು ಅವರಲ್ಲೂ ಮೂಡಿ, ಅವರ ಕಾರ್ಯಗಳ ಮೇಲೆ ಅದರ ಪ್ರಭಾವ ಬೀರಬಹುದು. ಆದ್ದರಿಂದ, ಮಾನ್ಯರೆ, ರಾಷ್ಟ್ರಪತಿಯವರ ವೇತನದ ವಿಷಯವನ್ನು ಪಕ್ಷಪ್ರಭಾವದಿಂದ ದೂರವಿರಿಸಬೇಕು. ಅದರಿಂದ ಅವರ ಕಾರ್ಯಗಳಲ್ಲಿ ನಿಷ್ಪಕ್ಷಪಾತತೆ ಖಚಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ನನ್ನ ತಿದ್ದುಪಡಿಯನ್ನು ಗೌರವಾನ್ವಿತ ಮಂಡನೆಕಾರರು ಅಂಗೀಕರಿಸುತ್ತಾರೆಂದು ಆಶಿಸುತ್ತೇನೆ.

(ಶ್ರೀಯುತರಾದ ಶ್ರೀ ಬಿ.ಎಂ. ಗುಪ್ತೆ, ಆರ್.ಕೆ. ಸಿಧ್ವಾ, ಬಿಶ್ವನಾಥ್ ದಾಸ್, ಠಾಕೂರ್ ದಾಸ್ ಭಾರ್ಗವ, ಶ್ಯಾಮನಂದನ ಸಹಾಯ ಮತ್ತು ಎಸ್. ನಿಜಲಿಂಗಪ್ಪ ಅವರು ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ).

**ಕೆ.ಪಿ.ಎಂ. ಅಹಮದ್ ಇಬ್ರಾಹಿಂ ಸಾಹಿಬ್ ಬಹಾದೂರ್** : ಮಾನ್ಯ ಸಭಾಧ್ಯಕ್ಷರೆ, ನಾನು ಈ ಮುಂದಿನಂತೆ ಮಂಡಿಸುತ್ತಿದ್ದೇನೆ.

"ಖಂಡ ೪ ಉಪಖಂಡ(೪)ರಲ್ಲಿ 'ಕಡಿಮೆ ಮಾಡು' ಪದವನ್ನು 'ಮಾರ್ಪಡಿಸು' ಎಂಬ ಪದದಿಂದ ಬದಲಿಸಬೇಕು."

ಕರಡು ಪ್ರತಿಯಲ್ಲಿ ರಾಷ್ಟ್ರಪತಿಯ ವೇತನವನ್ನು ಕಡಿಮೆ ಮಾಡಬಾರದೆಂಬುದಕ್ಕೆ ಉಪಬಂಧ ಕಲ್ಪಿಸಲಾಗಿದೆ. ಹಾಗೆಯೇ ರಾಷ್ಟ್ರಪತಿಗಳ ಅಧಿಕಾರಾವಧಿಯಲ್ಲಿ ವೇತನ ಹೆಚ್ಚಳಕ್ಕೂ ಅವಕಾಶವಿರಬಾರದು. ಕಾರಣ, ನಾನು ಈ ಹಿಂದಿನ ತಿದ್ದುಪಡಿಗೆ ನೀಡಿದ ಕಾರಣವೇ ಆಗಿದೆ. ರಾಷ್ಟ್ರಪತಿಗೆ ತನ್ನ ವೇತನವು ಸಂಸತ್ತಿನ ಅಧಿನಿಯಮವನ್ನು ಅವಲಂಬಿಸಿದೆ ಎಂಬ ಅರಿವು ಮೂಡಬಾರದು. ಆದಾಗ್ಯೂ, ರಾಷ್ಟ್ರಪತಿಯ ವೇತನದ ಪ್ರಮಾಣವನ್ನು ಸಂವಿಧಾನದ ಅಧಿನಿಯಮವೇ ನಿರ್ಧರಿಸುವುದು ಅತ್ಯಂತ ಆವಶ್ಯಕ.

**ಶ್ರೀ ರಾಮನಾರಾಯಣ ಸಿಂಗ್** (ಬಿಹಾರ : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ನನ್ನ ಪ್ರಸ್ತಾವ ಹೀಗಿದೆ:

"ರಾಷ್ಟ್ರಪತಿಯು ಪಕ್ಷದ ವ್ಯಕ್ತಿಯಾಗಿರಬಾರದು."

ಸದನದಲ್ಲೂ ಧ್ಯೇಯೋದ್ದೇಶಗಳ ನಿರ್ಣಯವನ್ನು ಮಂಡಿಸುವಾಗ, ಈ ದೇಶದಲ್ಲಿ ಯಾವುದೇ

ಪಕ್ಷವನ್ನು ಕಾನೂನುಬದ್ಧವೆಂದು ಪರಿಗಣಿಸಬಾರದೆಂಬುದಕ್ಕೆ ಒಂದು ಉಪಖಂಡವನ್ನು ಸಂವಿಧಾನದಲ್ಲಿ ಅಳವಡಿಸಬೇಕೆಂಬ ತಿದ್ದುಪಡಿಯನ್ನು ಮಂಡಿಸಿದ್ದೆನು. ಯಾವುದೇ ವ್ಯಕ್ತಿಯ ಹೆಸರಿನಲ್ಲಿರುವ ಅಥವಾ ನಿರ್ದಿಷ್ಟ ಸಿದ್ಧಾಂತವನ್ನು ಅನುಸರಿಸುವ ಪಕ್ಷವನ್ನು ಕಾನೂನುಬದ್ಧವಲ್ಲವೆಂದು ಘೋಷಿಸಬೇಕು.

ನನ್ನ ತಿದ್ದುಪಡಿಗೆ ಇದು ಕಾರಣ. ವಿಶ್ವದ ಅನೇಕ ದೇಶಗಳಲ್ಲಿ ಪಕ್ಷ ಸರ್ಕಾರಗಳಿವೆ. ಅವರು ತಮ್ಮನ್ನು ಪ್ರಜಾಪ್ರಭುತ್ವ ಸರ್ಕಾರಗಳೆಂದು ತಮ್ಮ ಬೆನ್ನು ತಟ್ಟಿಕೊಳ್ಳುತ್ತಾರೆ. ಪ್ರಜಾಪ್ರಭುತ್ವವೆಂದರೇನು? ಪಂಚಾಯತ್‌ರಾಜ್ ಜನತೆಯ ಸರ್ಕಾರ. ಈ ಪದವೇ ಪಕ್ಷ ಸರ್ಕಾರ ಹಾಗೂ ಪ್ರಜಾಪ್ರಭುತ್ವಗಳ ನಡುವೆ ಧ್ರುವಗಳಷ್ಟು ಅಂತರವಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಭಾರತದಲ್ಲಿ "ಪಂಚ" ಎಂದರೆ, ದೇವರು ಎಂದೂ, ಅದರ ಆಡಳಿತ–ದೇವರ ಆಡಳಿತವೆಂದೂ ನಂಬಿಕೆ ಇದೆ. ಪಕ್ಷಪದ್ಧತಿಯು ಕೆಲವೊಮ್ಮೆ ದುಷ್ಟ, ಕಪಟ ಸರ್ಕಾರವಾಗಿ ಅಧಃಪತನ ಹೊಂದುತ್ತದೆ. ಕೆಲವೊಮ್ಮೆ ಪಕ್ಷದಲ್ಲಿ ಸಂಭಾವಿತರೇ ಇಲ್ಲವೇನೋ ಎನಿಸುತ್ತದೆ. ಒಂದು ಪಕ್ಷದ ಕೆಲವು ಕಪಟಿಗಳು ಪ್ರಜಾಪ್ರಭುತ್ವದ ಹೆಸರಿನಲ್ಲಿ ತಮ್ಮದೇ ಸರ್ಕಾರವನ್ನು ಸ್ಥಾಪಿಸಬಹುದು. ಪಕ್ಷಪದ್ಧತಿಯನ್ನು ರದ್ದುಮಾಡಬೇಕೆಂದು ಈ ಸಭಾಸದಸ್ಯರಲ್ಲಿ ಮನವಿ ಮಾಡುತ್ತೇನೆ. ಎಲ್ಲಿಯವರೆಗೆ ಪ್ರಜಾಪ್ರಭುತ್ವಕ್ಕೆ ನಿಜಕ್ಕೂ ನಿಷ್ಠವಾಗಿರುವ ಪಕ್ಷವಿರುವುದಿಲ್ಲವೋ ಅಲ್ಲಿಯವರೆಗೆ ಪಕ್ಷಪದ್ಧತಿಯು ಪ್ರಜಾಪ್ರಭುತ್ವಕ್ಕೆ ಮಾರಕ]*

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : *[ಮಾನ್ಯ ಸಭಾಧ್ಯಕ್ಷರೆ, ಕ್ರಿಯಾಲೋಪವಾಗಿದೆ. ನನ್ನ ಪ್ರಸ್ತಾವಕ್ಕೂ, ಈ ಭಾಷಣಕ್ಕೂ ಏನು ಸಂಬಂಧ ಎಂದು ತಿಳಿಯಬಯಸುತ್ತೇನೆ]*

**ಮಾನ್ಯ ಸಭಾಧ್ಯಕ್ಷರು** : ಅವರು ಮಂಡಿಸಿರುವ ತಿದ್ದುಪಡಿಯು 'ರಾಷ್ಟ್ರಾಧ್ಯಕ್ಷರು ಯಾವುದೇ ಪಕ್ಷದ ವ್ಯಕ್ತಿಯಾಗಿರಬಾರದು' ಎಂದು.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಅದಕ್ಕೆ ಏನು ಸಂಬಂಧವೆಂದು ತಿಳಿಯಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ರಾಷ್ಟ್ರಪತಿ ಹುದ್ದೆಯ ಚುನಾವಣೆಗೆ ನಿಲ್ಲಲು ಬಯಸುವವರಿಗೆ ಒಂದು ಅನರ್ಹತೆಯನ್ನು ಗೊತ್ತುಪಡಿಸಬೇಕು ಎನ್ನುತ್ತಾರೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಅನರ್ಹತೆಯನ್ನು ಹೇಗೋ ಅಳೆದು, ತೂಗಿ, ಗುಣಾಕಾರ ಮಾಡಬೇಕು. ಅದು ವಾಸ್ತವಾಂಶಕ್ಕೆ ಸಂಬಂಧಿಸಿಯೇ ಇರಬೇಕು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಯನ್ನು ನಾನು ತಿರಸ್ಕರಿಸಲಾರೆ.

**ಶ್ರೀ ರಾಮನಾರಾಯಣ ಸಿಂಗ್** : *[ಹೌದು, ನಾನು ಅದನ್ನೇ ಹೇಳುತ್ತೇನೆ. ನಾನು ಪಕ್ಷಪದ್ಧತಿಯನ್ನು ಖಂಡಿಸುತ್ತೇನೆ. ನಮ್ಮ ರಾಷ್ಟ್ರಪತಿಯು ಪಕ್ಷದ ವ್ಯಕ್ತಿಯಾಗಿರಬಾರದು. ಪಕ್ಷಪದ್ಧತಿಯ ಸರ್ಕಾರವನ್ನು 'ಪ್ರಜಾಪ್ರಭುತ್ವ' ಅಥವಾ 'ಪಂಚಾಯಿತಿ ರಾಜ್ಯ'ವೆಂದು ಕೆಲವೊಮ್ಮೆ ತಪ್ಪಾಗಿ ತಿಳಿದುಕೊಳ್ಳಲಾಗುತ್ತದೆ. ಇದನ್ನು ಸ್ಪಷ್ಟಪಡಿಸಲು ನಾನೊಂದು ವಾಸ್ತವಿಕ ಉದಾಹರಣೆ ನೀಡುತ್ತೇನೆ. ವಿಧಾನಸಭೆಯಲ್ಲಿ ಒಂದು ಪಕ್ಷಕ್ಕೆ ಸೇರಿದ ೩೦೦ ಸದಸ್ಯರಿದ್ದಾರೆ ಎಂದಿಟ್ಟುಕೊಳ್ಳಿರಿ.]*

**ಮಾನ್ಯ ಸಭಾಧ್ಯಕ್ಷರು** : *[ಪಕ್ಷಪದ್ಧತಿ ಕುರಿತು ದೀರ್ಘ ಚರ್ಚೆ ಬೇಡ. ರಾಷ್ಟ್ರಪತಿಯು ಪಕ್ಷದ ವ್ಯಕ್ತಿಯಾಗಿರಬಾರದು ಎಂಬ ನಿಮ್ಮ ಅಂಶವನ್ನಷ್ಟೆ ಹೇಳಿ. ಪಕ್ಷಪದ್ಧತಿಯ ಗುಣಾವಗುಣಗಳ ಚರ್ಚೆ ಇಲ್ಲಿ ಬೇಡ]*

**ಶ್ರೀ ರಾಮನಾರಾಯಣ ಸಿಂಗ್** : *[ತಮ್ಮ ನಿರ್ಣಯಕ್ಕೆ ತಲೆಬಾಗುತ್ತೇನೆ; ಮಾನ್ಯರೆ, ನಾನು ಆ ಕುರಿತು ಚರ್ಚಿಸಿರುವುದಿಲ್ಲ. ಪಕ್ಷಪದ್ಧತಿಯನ್ನು ಖಂಡಿಸುವ ಹೊರತು ತಿದ್ದುಪಡಿಯನ್ನು ಬೆಂಬಲಿಸುವುದು ನನಗೆ ಕಷ್ಟ ಆದಾಗ್ಯೂ, ಈ ಕ್ಷಣದಲ್ಲಿ ಅದಕ್ಕೆ ಮತ್ತಷ್ಟು ಒತ್ತಾಯಿಸಲಾರೆ. ಅವಕಾಶ ಕೊಟ್ಟರೆ, ಆಮೇಲೆ ಅದರ ಬಗ್ಗೆ ಮಾತನಾಡುವೆ, ರಾಷ್ಟ್ರಪತಿಯು ಪಕ್ಷದ ವ್ಯಕ್ತಿಯಾಗಿರಬಾರದೆನ್ನುವುದು ಅತ್ಯಂತ ಆವಶ್ಯಕ ಎಂಬ ಅಭಿಪ್ರಾಯದೊಂದಿಗೆ ನನ್ನ ಮಾತು ಮುಗಿಸುತ್ತೇನೆ.]*

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಖಂಡ ೪ರ ಉಪಖಂಡ (೧)ಕ್ಕೆ ತಿದ್ದುಪಡಿಯನ್ನು ಮಂಡಿಸಬಯಸುತ್ತೇನೆ. ಅದು ಹೀಗಿದೆ :

"ಖಂಡ ೪ರ ಉಪಖಂಡ(೧)ಅನ್ನು ಈ ಕೆಳಗಿನಂತೆ ಬದಲಾಯಿಸಬೇಕು:

'ರಾಷ್ಟ್ರಪತಿಯು ಸಂಸತ್ತಿನ ಅಥವಾ ಯಾವುದೇ ಶಾಸನಸಭೆಯ ಸದಸ್ಯನಾಗಿರತಕ್ಕುದಲ್ಲ ಮತ್ತು ಒಂದು ವೇಳೆ ಅಂಥ ಸದಸ್ಯನು ರಾಷ್ಟ್ರಪತಿಯಾಗಿ ಚುನಾಯಿತನಾದರೆ, ಆತನು ಸಂಸತ್ತಿನ ಅಥವಾ ಸಂಬಂಧಪಟ್ಟ ಶಾಸನಸಭೆಯ ತನ್ನ ಸ್ಥಾನವನ್ನು ಖಾಲಿಮಾಡಿರುವುದಾಗಿ ಭಾವಿಸತಕ್ಕುದು'."

ಉಪಖಂಡ(೧)ರ ತತ್ತ್ವವು ಸದನದ ಮುಂದಿರುವ ಕರಡಿನ ಪ್ರಕಾರ ಒಕ್ಕೂಟ ಸಂಸತ್ತಿಗೆ ಮಾತ್ರ ಅನ್ವಯವಾಗುತ್ತಿದ್ದು, ಈ ತಿದ್ದುಪಡಿಯಿಂದ ಅದನ್ನು ಘಟಕಗಳ ಶಾಸನಸಭೆಗಳಿಗೂ ವಿಸ್ತರಿಸಲಾಗುತ್ತಿದೆ. ನಾನು ಬುದ್ಧಿಪೂರ್ವಕವಾಗಿ, 'ಸಂಸತ್ತು' ಮತ್ತು 'ಶಾಸನಸಭೆ' ಎಂಬ ಪದಗಳನ್ನು ಬಳಸಿದ್ದೇನೆ. ಏಕೆಂದರೆ, ಈ ದಸ್ತಾವೇಜಿನ ಕರಡು ರೂಪಿಸುವಾಗ ಅಳವಡಿಸಿಕೊಂಡ ತತ್ತ್ವದ ಮೇರೆಗೆ 'ಸಂಸತ್ತು' ಪದ ಒಕ್ಕೂಟದ ಶಾಸನಸಭೆಗೆ ಅನ್ವಯವಾದರೆ, 'ವಿಧಾನಸಭೆ' ಪದವು ಘಟಕಗಳ ಶಾಸನಸಭೆಗಳಿಗೆ ಸೀಮಿತವಾಗುತ್ತದೆ. ನಾನು ಹೆಚ್ಚೇನೂ ಹೇಳಲಾರೆ.

**ಮಾನ್ಯ ಸಭಾಧ್ಯಕ್ಷರು** : ಎಲ್ಲ ತಿದ್ದುಪಡಿಗಳನ್ನು ಮಂಡಿಸಲಾಗಿದೆ. ಮೂಲ ಪ್ರಸ್ತಾವನೆ ಹಾಗೂ ತಿದ್ದುಪಡಿಗಳು ಚರ್ಚೆಗೆ ಮುಕ್ತವಾಗಿವೆ.

**ಶ್ರೀ ಕೆ. ಸಂತಾನಮ್** : ಮಾನ್ಯರೆ, ನಾನು ಖಂಡವನ್ನು ಇರುವಂತೆಯೇ ಒಪ್ಪಿಕೊಳ್ಳುತ್ತೇನೆ. ಆದರೆ, ಕರಡು ಹಂತದಲ್ಲಿ ಅದನ್ನು ಸರಿಪಡಿಸಬೇಕು.

ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ರಾಮನಾರಾಯಣ್ ಸಿಂಗ್ ಒಂದು ತಿದ್ದುಪಡಿಯನ್ನು ಮಂಡಿಸಿದ್ದು, ಅದು ಪ್ರಸ್ತುತ ಸ್ವರೂಪದಲ್ಲಿ ಸರಿಯಾಗಿಲ್ಲ. ರಾಷ್ಟ್ರಪತಿಯು ಪಕ್ಷದ ವ್ಯಕ್ತಿಯಾಗಿಯೇ ಚುನಾವಣೆಗೆ ನಿಲ್ಲಬೇಕು. ಆದರೆ, ಚುನಾವಣೆಯ ತರುವಾಯ, ರಾಜಕೀಯ ಪಕ್ಷದೊಂದಿಗೆ ತಮ್ಮ ಸಹಯೋಗವನ್ನು ಬಿಟ್ಟುಬಿಡಬೇಕು.

ಶಾಸನಸಭೆಯ ಸಭಾಧ್ಯಕ್ಷರು ಪಕ್ಷದ ವ್ಯಕ್ತಿಯಾಗಿ ಮುಂದುವರಿಯಬೇಕೆ ಎಂಬ ಬಗ್ಗೆ ಚರ್ಚೆ ನಡೆದಿರುವುದು ತಮಗೂ ಗೊತ್ತು. ಅದು ಇನ್ನೂ ತೀರ್ಮಾನವಾಗಿಲ್ಲ. ಹೊಸ ಸಂವಿಧಾನದಲ್ಲಿ ರಾಷ್ಟ್ರಪತಿ, ರಾಜ್ಯಪಾಲರು ಹಾಗೂ ಸಭಾಧ್ಯಕ್ಷರು ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಪರ್ಕ ಹೊಂದಿರುವುದಿಲ್ಲ ಎಂದು ಆಶಿಸುತ್ತೇನೆ.

ಇನ್ನು ಅವರ ವ್ಯಾಪಾರಿ ಸಂಬಂಧಗಳು. "ವರಮಾನವುಳ್ಳ ಸ್ಥಾನಗಳು" ವ್ಯಾಪ್ತಿಯಲ್ಲಿ ಅನೇಕ ವಿಷಯಗಳು ಬರುವವು. ಅದು ಕೆಲವು ವಿಷಯಗಳನ್ನು ಒಳಗೊಳ್ಳುವುದಿಲ್ಲ. ಉದಾಹರಣೆಗೆ: ಕಂಪನಿಯೊಂದರಲ್ಲಿ ಷೇರು ಹೊಂದಿರುವುದು ರಾಷ್ಟ್ರಪತಿಯು ಷೇರು ಹೊಂದಿರುವುದನ್ನು ತಪ್ಪಿಸಲಾಗದು. ಆದರೆ ಚುನಾವಣೆಯಾದ ಕೂಡಲೇ, ಅವರು ಕಂಪನಿಯಲ್ಲಿನ ಬಂಡವಾಳ ಘೋಷಿಸಬೇಕು. ಅದು ಸಾರ್ವಜನಿಕರಿಗೂ ತಿಳಿಯುತ್ತದೆ. ಅವರು ತಮ್ಮ ಅಧಿಕಾರಾವಧಿಯಲ್ಲಿ ವಿಶೇಷ ಕಾರ್ಯವಿಧಾನದ ಹೊರತು, ಯಾವುದೇ ಷೇರು ಅಥವಾ ಸ್ಥಿರಾಸ್ತಿ ಹೊಂದಲು ಅವಕಾಶವಿರಬಾರದು. ರಾಷ್ಟ್ರಪತಿಯನ್ನು ನಾವು ಈ ಎಲ್ಲ ಅಡ್ಡಿಆತಂಕಗಳಿಂದ ದೂರವಿಡಬೇಕು. ಇಲ್ಲದಿದ್ದಲ್ಲಿ ಎಲ್ಲ ರೀತಿಯ ಅಪನಿಂದೆ, ವದಂತಿಗಳು ಹರಡುತ್ತವೆ. ಕರಡು ರಚನಾ ಸಮಿತಿಯು ಈ ವಿಷಯವನ್ನು ಪರಿಶೀಲಿಸಿ, ಉತ್ತಮವೂ, ಸಮಗ್ರವೂ ಆದ ಕರಡು ರೂಪಿಸುವುದೆಂದು ಆಶಿಸುತ್ತೇನೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** : ಮಾನ್ಯ ಸಭಾಧ್ಯಕ್ಷರೆ, ಈಗಷ್ಟೆ ಮಂಡಿಸಲಾಗಿರುವ ತಿದ್ದುಗಳನ್ನು ಕುರಿತು ಕೆಲವು ಮಾತುಗಳನ್ನಾಡಬಯಸುತ್ತೇನೆ.

ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಇಸ್ಮಾಯಿಲ್ ಅವರ ಪ್ರಶ್ನೆಗೆ ಉತ್ತರವಾಗಿ ನಿರ್ಣಯದ

ಮಂಡನೆಕಾರರು ಒಕ್ಕೂಟದ ರಾಷ್ಟ್ರಪತಿಯು ಯಾವುದೇ ಜಾಯಿಂಟ್ ಸ್ಟಾಕ್ ಅಥವಾ ನಿಗಮಿತ ಕಂಪನಿಯಲ್ಲಿ ಅಧಿಕಾರ ಹೊಂದಿರಬಾರದೆಂದು ಹೇಳಿದರು. ಅವರು ನೋಂದಾಯಿತ ಅಥವಾ ನೋಂದಾಯಿತವಲ್ಲದ ಕಂಪನಿಯ ನಿರ್ದೇಶಕರಾಗಿರಬಾರದೆಂದು ತಿಳಿಸಿದರು. ಅವರು ಎಲ್ಲಿಂದಲೂ ಯಾವುದೇ ರೀತಿಯ ವೇತನ ಅಥವಾ ವರಮಾನಗಳನ್ನು ಪಡೆದುಕೊಳ್ಳಬಾರದೆಂದು ಸ್ಪಷ್ಟನೆ ನೀಡಿದರು. ಈ ತತ್ತ್ವ ಅತ್ಯಂತ ಉಪಯುಕ್ತವೂ, ನ್ಯಾಯಯುತವೂ ಆಗಿದೆ. ಅವರ ನಿಷ್ಠೆ ರಾಜ್ಯಕ್ಕೆ ಹೊರತು, ಬೇರೇ ಯಾವುದಕ್ಕೂ ಇರಬಾರದು. ಅವರ ಎಲ್ಲ ಶಕ್ತಿಸಾಮರ್ಥ್ಯಗಳು ರಾಜ್ಯದ ಸೇವೆಗೆ ಮುಡಿಪಾಗಿರಬೇಕು. ಅವರು ತಮ್ಮ ಹುದ್ದೆಗೆ ಅಖಂಡ ಗಮನ ನೀಡುವಂಥವರಾಗಿರಬೇಕು.

ರಾಷ್ಟ್ರಪತಿಯು ಯಾವುದೇ ವರಮಾನದ ಸ್ಥಾನವನ್ನು ಹೊಂದಿರಬಾರದೆಂಬ ಬಗ್ಗೆ ನಾನೂ ಸ್ಪಷ್ಟವಾಗಿದ್ದೇನೆ. ಸದನವೂ ಒಪ್ಪಿದೆ. ನಾವು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಬೇಕು. ರಾಷ್ಟ್ರಪತಿಯು ಯಾವುದೇ ಗೌರವ ಹುದ್ದೆಯನ್ನು ಹೊಂದಿರಬಾರದು. ಉದಾಹರಣೆಗೆ: ಅವರು ವಾಣಿಜ್ಯ ಮಂಡಲಿ ಅಧ್ಯಕ್ಷರಾಗಿರಬಾರದು. ಅವರು ಯಾವುದೇ ಕಾರ್ಮಿಕ ಸಂಘದ ಅಧ್ಯಕ್ಷರಾಗಿರಬಾರದು. ನನ್ನ ಆಲೋಚನೆ ಏನೆಂದರೆ, ಅಂಥ ಗೌರವದ ಹುದ್ದೆಗಳಿಂದಲೂ ಅವರು ದೂರವಿರಬೇಕು. ಏಕೆಂದರೆ, ಅವರ ಸ್ಥಾನವನ್ನು ಅಂಥ ಸಮುದಾಯದ ಹಿತಾಸಕ್ತಿಗೆ ಬಳಸಿಕೊಳ್ಳಬಹುದು. ನಾನು ಒಂದು ಔಪಚಾರಿಕ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ಅಂತಿಮ ಕರಡಿನಲ್ಲಿ ಈ ಎಲ್ಲ ಅಂಶಗಳು ಸೇರ್ಪಡೆಯಾಗುವಂತೆ ಮಂಡನೆಕಾರರು ನೋಡಿಕೊಳ್ಳುತ್ತಾರೆಂಬ ವಿಶ್ವಾಸ ನನಗಿದೆ.

ರಾಷ್ಟ್ರಪತಿಯಾಗುವ ವ್ಯಕ್ತಿಯು ಸೀಜರನ ಪತ್ನಿಯಂತೆ ಸಂಶಯಾತೀತವಾಗಿರಬೇಕೆಂಬುದನ್ನು ನಾವೆಲ್ಲರೂ ಒಪ್ಪಿದ್ದೇವೆ. ಇದನ್ನು ಖಚಿತಪಡಿಸಿಕೊಳ್ಳಲು ಈ ಎಲ್ಲ ಕ್ರಮ ಅಗತ್ಯ. ಜೊತೆಗೆ, ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ರಾಮನಾರಾಯಣ ಸಿಂಗ್ ಅವರು ಪ್ರಸ್ತಾವಿಸಿದ ಕಠಿಣ ಕ್ರಮವನ್ನು ಪರಿಗಣಿಸಬೇಕು. ರಾಷ್ಟ್ರಪತಿ ಹುದ್ದೆಗೆ ಪಕ್ಷದ ವ್ಯಕ್ತಿ ಚುನಾವಣೆಗೆ ನಿಲ್ಲುವುದನ್ನು ನಾವು ತಪ್ಪಿಸಲಾಗದು. ಆತನು ಒಕ್ಕೂಟದ ರಾಷ್ಟ್ರಪತಿ ಹುದ್ದೆ ಸ್ವೀಕರಿಸಿದ ಕೂಡಲೇ ಅವರು ತಮ್ಮ ಎಲ್ಲ ರಾಜಕೀಯ ಸಂಬಂಧಗಳನ್ನು ಮತ್ತು ಕ್ಲೇಶಗಳನ್ನು ಕಡಿದುಕೊಳ್ಳಬೇಕು. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಗೌರವಾನ್ವಿತ ಮಂಡನೆಕಾರರು ರಾಷ್ಟ್ರಪತಿ ಸ್ಥಾನವನ್ನು ಆಕ್ಷೇಪಣಾತೀತವೂ, ಸಂಶಯಾತೀತವೂ ಆಗಿರುವಂತೆ ನೋಡಿಕೊಳ್ಳುತ್ತಾರೆಂದು ಆಶಿಸುತ್ತೇನೆ.

**ಶ್ರೀ ಎಂ.ಎಸ್. ಅಣೆ :** (ಡೆಕ್ಕನ್ ಮತ್ತು ಮದ್ರಾಸ್ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೆ, 'ವರಮಾನದ ಸ್ಥಾನಗಳು' ಪದಗಳಿಗೆ ಸಂಬಂಧಪಟ್ಟಂತೆ ನಾನು ಒಂದೆರಡು ಸಲಹೆಗಳನ್ನು ನೀಡಬೇಕಾಗಿದೆ. ಇವುಗಳನ್ನು ಅಂತಿಮ ಕರಡು ರೂಪಿಸುವಾಗ ಪರಿಗಣಿಸಬಹುದಾಗಿದೆ.

'ವರಮಾನದ ಸ್ಥಾನ' ಪದಗಳು, ವರಮಾನಗಳನ್ನು ಪಡೆಯಬಹುದಾದ ವಿವಿಧ ಸ್ಥಾನಗಳನ್ನು ಒಳಗೊಳ್ಳುವಷ್ಟು ವ್ಯಾಪಕವಾಗಿಲ್ಲ ಎಂದು ಸರಿಯಾಗಿಯೇ ಗುರುತಿಸಲಾಗಿದೆ. ಆದ್ದರಿಂದ, ಈ ಪದಗಳನ್ನು ಮತ್ತಷ್ಟು ಸ್ಪಷ್ಟಪಡಿಸಬೇಕು. ತಾವು ಗಮನಿಸದೇ ಇರುವ ಒಂದೆರಡು ನಿದರ್ಶನಗಳನ್ನು ಕೊಡುತ್ತೇನೆ. ಸಂಯುಕ್ತ ಪ್ರಾಂತ್ಯ ಹಾಗೂ ಬೇರಾರ್‌ಗಳಲ್ಲಿ ಪಟೇಲರು ಅಥವಾ ಪಟ್ವಾರಿಗಳು ಎಂಬ ಆನುವಂಶಿಕ ಗ್ರಾಮಾಧಿಕಾರಿ ಪದ್ಧತಿ ಜಾರಿಯಲ್ಲಿದೆ. ದೇಶಮುಖರು, ದೇಶಪಾಂಡೆಗಳು ಮೊದಲಾಗಿ ಕರೆಯಲಾಗುವ ಮಾಜಿ ಪರ್ಗಣದ ಅಧಿಕಾರಿಗಳು ಎಂಬುವವರೂ ಇದ್ದಾರೆ. ಹಿಂದಿನ ಕಾಲದಲ್ಲಿ ಅವರೇ ನಿಜವಾದ ಪರ್ಗಣ ಅಧಿಕಾರಿಗಳಾಗಿದ್ದರು. ಅದನ್ನು ಮಾನ್ಯಮಾಡಿ, ಬ್ರಿಟಿಷ್ ಸರ್ಕಾರವು ಅವರಿಗೆ ವೇತನಗಳನ್ನು ನೀಡುತ್ತಿತ್ತು. ನನ್ನ ಗೌರವಾನ್ವಿತ ಸ್ನೇಹಿತರೂ, ಈ ಸದನದ ಸದಸ್ಯರೂ ಆದ ಡಾ. ಪಿ.ಎಸ್. ದೇಶಮುಖರು ಕೂಡ ಈ ವರ್ಗಕ್ಕೆ ಸೇರಿದವರು. ಅವರು 'ರುಸುಮು'ಗಳೆಂದು ಕರೆಯಲಾಗುವ ವೇತನಗಳನ್ನು ಪಡೆಯುತ್ತಿದ್ದರು. ಇವರನ್ನು 'ಮಾಜಿ ಪರ್ಗಣ' ಅಧಿಕಾರಿಗಳೆಂದು ಕರೆಯುತ್ತಾರೆ. ಸಂಯುಕ್ತ ಪ್ರಾಂತ್ಯ ಹಾಗೂ ಬೇರಾರ್‌ಗಳ ಎಲ್ಲ ಚುನಾವಣೆಗಳಲ್ಲಿ ಈ

ಪಟೇಲರು, ಪಟ್ವಾರಿಗಳು, ಪರ್ಗಣ ಅಧಿಕಾರಿಗಳನ್ನು ಅನರ್ಹರೆಂದು ಪರಿಗಣಿಸಿಲ್ಲ. ಅವರು ಪಡೆಯುವ ವೇತನಗಳು ಅವರನ್ನು ಚುನಾವಣೆಗೆ ಅನರ್ಹರನ್ನಾಗಿ ಮಾಡಿರುವುದಿಲ್ಲ. ನಾನು ಹೇಳಬೇಕಾಗಿರುವ ಎರಡನೆಯ ವಿಷಯವೆಂದರೆ, ರಾಜಕೀಯ ನಿವೃತ್ತಿ ವೇತನಗಳನ್ನು ಪಡೆದುಕೊಳ್ಳುವ ಹಳೆಯ ರಾಜಮನೆತನಗಳ ಸದಸ್ಯರು ಇದ್ದಾರೆ. ಅವುಗಳನ್ನು ವೇತನಗಳು ಎಂದು ಕರೆಯಲಾಗುತ್ತಿಲ್ಲ. ಈ ಸ್ಥಾನಗಳಲ್ಲಿರುವ ವ್ಯಕ್ತಿಗಳು ರಾಷ್ಟ್ರಪತಿ ಚುನಾವಣೆಗೆ ನಿಲ್ಲುವುದನ್ನು ನಿಷೇಧಿಸಬೇಕೇ? ಇದು ಅವರ ರಾಜಮನೆತನದ ಪೂರ್ವಜರಿಂದ ಸ್ವಾಧೀನಪಡಿಸಿಕೊಂಡಿರುವುದಕ್ಕೆ ನೀಡುತ್ತಿರುವ ಪರಿಹಾರವೇ ಹೊರತು ವೇತನವಲ್ಲ. ಇದು ವ್ಯಕ್ತಿಯ ಖಾಸಗಿ ಸ್ವತ್ತಿನ ಸ್ವರೂಪದಲ್ಲಿದೆ. ಈ ಮೂರು ಬಗೆಯ ವೇತನಗಳಲ್ಲಿ, ಎರಡು ನಾನು ವಾಸಿಸುತ್ತಿರುವ ಪ್ರಾಂತ್ಯಗಳಿಗೆ ವಿಶಿಷ್ಟವಾದವು. ಸಂವಿಧಾನದ ಕರಡು ರೂಪಿಸುವ ಸಮಿತಿಯು ಈ ಅಂಶಗಳನ್ನು ಪರಿಗಣಿಸುವುದೆಂದು ಭಾವಿಸುತ್ತೇನೆ. ಈ ಖಂಡದಲ್ಲಿನ ವೇತನಗಳಿಂದ ಇವರನ್ನು ಹೊರತುಪಡಿಸುತ್ತಾರೆಂದು ಆಶಿಸುತ್ತೇನೆ.

ನನ್ನ ಸ್ನೇಹಿತರಾದ ಶ್ರೀ ರಾಮನಾರಾಯಣ ಸಿಂಗ್ ಅವರ ತಿದ್ದುಪಡಿ ವಿಷಯ. ಪಕ್ಷಕ್ಕೆ ಸೇರಿದ ವ್ಯಕ್ತಿಯು ರಾಷ್ಟ್ರಪತಿ ಹುದ್ದೆಯನ್ನು ಒಪ್ಪಿಕೊಂಡರೆ, ಆತನು ಪಕ್ಷದೊಂದಿಗೆ ತನ್ನೆಲ್ಲ ಸಂಬಂಧಗಳನ್ನು ಕಡಿದುಕೊಂಡು ಪಕ್ಷಾತೀತ ವ್ಯಕ್ತಿಯಾಗಿ ಉಳಿಯಬೇಕು. ಆದರೆ, ಆ ಸ್ಥಾನವನ್ನು ಹೊಂದುವ ಮೊದಲೇ ಪಕ್ಷಾತೀತನಾಗಿರಬೇಕೆಂದು ನಿರೀಕ್ಷಿಸಲಾಗದು. ಮೀನನ್ನು ನೀರಿನಲ್ಲಿರಬಾರದು ಎಂದು ಹೇಳಿದಂತಾಗುತ್ತದೆ. ಅಂಥ ವ್ಯಕ್ತಿಯು ಯಾವುದಾದರೂ ಪಕ್ಷಕ್ಕೆ ಸೇರಿರಲೇಬೇಕು. ಅದು ಕಾಂಗ್ರೆಸ್‌ನಂತೆ ರಾಜಕೀಯ ಪಕ್ಷವಾಗದಿರಬಹುದು, ಅದು ಬೇರಾವುದೇ ಪಕ್ಷವಾಗಿರಬಹುದು. ಆತ ಯಾವುದಾದರೂ ಧಾರ್ಮಿಕ ಪಕ್ಷಕ್ಕೆ ಸೇರಿರಬಹುದು. ಮನುಷ್ಯ ಸಾಮಾಜಿಕ ಜೀವಿಯಾಗಿದ್ದು, ಒಂದು ಪಕ್ಷ ಅಥವಾ ಗುಂಪಿಗೆ ಸೇರಿರುವುದು ಸಹಜ. ನಾವು 'ಪಕ್ಷಾತೀತ' ಎಂದರೆ ರಾಷ್ಟ್ರಪತಿಯನ್ನು ಆಯ್ಕೆಮಾಡುವುದು ಕಷ್ಟವಾಗಬಹುದು. ಆದ್ದರಿಂದ ಅವರು ಸೂಚಿಸಿರುವ ನಿರ್ದಿಷ್ಟ ತಿದ್ದುಪಡಿಗೆ ಒಪ್ಪಿಗೆ ಸೂಚಿಸದಿದ್ದರೂ, ಒಮ್ಮೆ ಆ ಸ್ಥಾನಕ್ಕೆ ಆಯ್ಕೆಯಾದರೆ, ಪಕ್ಷಾತೀತನಾಗಿರಬೇಕೆಂಬ, ಆ ಸ್ಥಾನದಲ್ಲಿ ಎಲ್ಲರಿಗೂ ಸೇರಿದವನಾಗಿಬೇಕೆಂಬ ಅಥವಾ ಯಾರಿಗೂ ಸೇರದವನಾಗಿರಬೇಕೆಂಬ ತತ್ತ್ವವನ್ನು ಒಪ್ಪಿಕೊಳ್ಳುತ್ತೇನೆ. ಆ ಎರಡರಲ್ಲಿ ಅವನು ಒಂದನ್ನು ಮಾತ್ರ ಆಯ್ಕೆಮಾಡಿಕೊಳ್ಳಬೇಕು. ಆಗ ಮಾತ್ರ ಅವನು ತನ್ನ ಕರ್ತವ್ಯಗಳನ್ನು ಸೂಕ್ತವಾಗಿ ನಿರ್ವಹಿಸಲು ಸಾಧ್ಯ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಶ್ರೀಪ್ರಕಾಶ :

**ಶ್ರೀ ಶ್ರೀಪ್ರಕಾಶ :** ಮಾನ್ಯರೆ, ಕೆಲವೊಂದು ಭಾಷಣಗಳನ್ನು ಕೇಳಿದ ಮೇಲೆ, ನಾನು ಬೇರೊಂದು ಸ್ಥಳದಲ್ಲಿ ಹೇಳಿದ ಮಾತುಗಳನ್ನು ಪುನರುಚ್ಚರಿಸಲೇಬೇಕಾಗಿದೆ. ರಾಷ್ಟ್ರಪತಿಯು ಜೀವನೋಪಾಯಕ್ಕೆ ಪ್ರಕಟವಾದ ಆಧಾರವನ್ನೇ ಹೊಂದಿರಬಾರದು ಎಂಬುದು ಕೆಲವು ಸದಸ್ಯರ ಅಭಿಪ್ರಾಯವಿದ್ದಂತಿದೆ. (ನಗು) ಮಾನ್ಯರೆ, ರಾಷ್ಟ್ರಪತಿ ಹುದ್ದೆಗೇರಿಸುವ ವ್ಯಕ್ತಿಯ ಬಗ್ಗೆ ನಮಗೊಂದಿಷ್ಟು ವಿಶ್ವಾಸವೂ ಇರಬೇಕಾಗುತ್ತದೆ. ನಾವು ಯಾವ ರೀತಿಯಲ್ಲೂ ನಿರ್ಬಂಧಿಸಬಾರದು. ಆ ವ್ಯಕ್ತಿಯ ವೃತ್ತಿಯು ನಮಗೆ ಇಷ್ಟವಾಗದಿದ್ದರೆ, ನಾವು ಅವನನ್ನು ಆ ಹುದ್ದೆಯಲ್ಲಿ ಇರಿಸಲೇಬಾರದು. ನಾವು ಇಷ್ಟಪಟ್ಟು ಆಯ್ಕೆಮಾಡಿದರೆ, ಆತನು ರಾಷ್ಟ್ರಪತಿಯಾಗಿ ಉತ್ತಮ ಕಾರ್ಯನಿರ್ವಹಿಸುತ್ತಾನೆಂದು, ಆತನ ವೃತ್ತಿಯು ಕರ್ತವ್ಯಕ್ಕೆ ಅಡ್ಡಿಪಡಿಸಲಾರದೆಂದು ವಿಶ್ವಾಸವಿರಬೇಕು. ಗಣತಂತ್ರದ ರಾಷ್ಟ್ರಪತಿಯಾಗಿರುವಷ್ಟು ಕಾಲ ವ್ಯಕ್ತಿಯೊಬ್ಬ ವಕೀಲಿ ಅಥವಾ ವೈದ್ಯವೃತ್ತಿ ಮಾಡದಂತೆ ನಿಷೇಧಿಸುವುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ, ಅವನು ರಾಷ್ಟ್ರಪತಿಯಾಗದಿದ್ದಾಗ ಹೊಂದಿದ್ದ ಜೀವನೋಪಾಯದ ಎಲ್ಲ ಅಥವಾ ಯಾವುದೇ ಒಂದು ಮಾರ್ಗವನ್ನು, ರಾಷ್ಟ್ರಪತಿ ಹುದ್ದೆಗೆ ಚುನಾಯಿತನಾಗಿರುವನೆಂಬ ಮಾತ್ರಕ್ಕೆ ಬಿಟ್ಟು ಬಿಡಬೇಕೆಂಬುದು ನ್ಯಾಯಯುತವಲ್ಲ.

ಅಲ್ಲದೆ, ವ್ಯಕ್ತಿಯೊಬ್ಬ, ಮನೆ, ಭೂಮಿ, ಷೇರು ಮೊದಲಾದ ತನ್ನಲ್ಲಿ ಆಸ್ತಿಪಾಸ್ತಿಯನ್ನು ತಾನು ಅಧಿಕಾರೇತರ ಜೀವನಕ್ಕೆ ಹಿಂತಿರುಗುವವರೆಗೆ ಜೋಪಾನವಾಗಿರಿಸಿಕೊಳ್ಳಬಲ್ಲ ಬೇರೊಬ್ಬ ವ್ಯಕ್ತಿಗೆ ಹೇಗೆ ವರ್ಗಾಯಿಸಲು

ಸಾಧ್ಯವೇ ಎಂದು ನಾನು ಕೇಳಬಯಸುತ್ತೇನೆ. ವ್ಯಕ್ತಿ ತಾನು ರಾಷ್ಟ್ರಪತಿಯಾಗುವ ಮುನ್ನ ಹೊಂದಿದ್ದ ಆಸ್ತಿಪಾಸ್ತಿಯನ್ನು ತಾನು ಹುದ್ದೆ ತ್ಯಜಿಸಿ ಹಿಂತಿರುಗಿ ಬಂದ ಮೇಲೆ ಹಿಂದಕ್ಕೆ ಪಡೆಯುವನೆಂಬ ಭರವಸೆ ಏನು? ಒಮ್ಮೆ ರಾಷ್ಟ್ರಪತಿಯಾದರೆ ವ್ಯಕ್ತಿಯ ಉಳಿದ ಜೀವನವಿಡೀ ಸಾಕಷ್ಟು ವರಮಾನ ಖಾತ್ರಿ ನೀಡುವ ಉಪಬಂಧ ಕಲ್ಪಿಸಿದರೆ, ಅದಕ್ಕೆ ನಾನು ಒಪ್ಪುತ್ತೇನೆ. ಅಂಥ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ರಾಷ್ಟ್ರಪತಿಯಾಗುವುದಕ್ಕೆ ಮುನ್ನ ಹೊಂದಿದ್ದ ಎಲ್ಲ ಅಥವಾ ಯಾವುದೇ ಆಸ್ತಿಪಾಸ್ತಿಯನ್ನು ಅವನಿಗೆ ಇಲ್ಲದಂತೆ ಮಾಡಬೇಕೆಂಬ ಸದಸ್ಯರ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳಬಲ್ಲೆ. ವೃತ್ತಿಜೀವನದಿಂದ ದೀರ್ಘ ಕಾಲ ದೂರವಿರುವ ವಕೀಲರಿಗೂ ಕೂಡ ತಮ್ಮ ವೃತ್ತಿಗೆ ಹಿಂತಿರುಗುವುದು ಕಷ್ಟಕರವಾಗುತ್ತದೆ. ನಾನು ಮುಖ್ಯವಾಗಿ, ನನ್ನಂತೆ ಸ್ವಲ್ಪ ಭೂಸ್ವತ್ತನ್ನು ಹೊಂದಿರುವವರ ಬಗ್ಗೆ ಚಿಂತಿತನಾಗಿದ್ದೇನೆ. (ನಗು). ನನ್ನ ಹಾಗೂ ನಿಮ್ಮ ಪ್ರಾಂತ್ಯಗಳಲ್ಲಿ ಭೂಸ್ವತ್ತು ನಿಷೇಧಿಸುವ ಮುನ್ನ, ಅಂಥ ವ್ಯಕ್ತಿಗಳು – ನಾನೇನೂ ಅಭ್ಯರ್ಥಿಯಲ್ಲ ಬಿಡಿ – ರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆಗೆ ನಿಲ್ಲಲು ಏನಾದರೊಂದು ಅವಕಾಶ ಕಲ್ಪಿಸಬೇಕು. ಹೀಗೆ ಆಸ್ತಿಪಾಸ್ತಿ ಹೊಂದಿ ದುರದೃಷ್ಟರಾಗಿರುವ ವ್ಯಕ್ತಿಗಳನ್ನು ಪೂರ್ಣವಾಗಿ ನಿಷೇಧಿಸದಂತಹ ಅವಕಾಶ ಕಲ್ಪಿಸುವುದು ಒಳಿತು.

ಮಾನ್ಯರೆ, ಇದಲ್ಲದೆ, ರಾಷ್ಟ್ರಪತಿ ಸ್ಥಾನಕ್ಕೆ ನಿಲ್ಲಲಿರುವ ವ್ಯಕ್ತಿಯು ವಿವಿಧ ಕಂಪನಿಗಳಲ್ಲಿ ತಾನು ಹೊಂದಿರುವ ಎಲ್ಲ ಷೇರುಗಳ ವಿವರಗಳನ್ನು ಘೋಷಿಸಬೇಕೆನ್ನುವುದೂ ಕೂಡ ನ್ಯಾಯಯುತವಲ್ಲ. ತಾನು ಹೊಂದಿರುವ ಲಾಭದಾಯಕವಲ್ಲದ ಒಂದೆರಡು ಷೇರುಗಳನ್ನು ಮರೆತರೆ, ಉದಾಹರಣೆಗೆ: ಲಕ್ನೋದ ನ್ಯಾಷನಲ್ ಹೆರಾಲ್ಡ್‌ನಲ್ಲಿ..

**ಶ್ರೀ ಬಾಲಕೃಷ್ಣ ಶರ್ಮ** : (ಸಂಯುಕ್ತ ಪ್ರಾಂತ್ಯಗಳು) : ರಾಷ್ಟ್ರಪತಿ ಹುದ್ದೆಯನ್ನು ವಹಿಸಿಕೊಂಡ ಕೂಡಲೇ ವ್ಯಕ್ತಿಯು ತನ್ನೆಲ್ಲ ಸ್ವತ್ತುಗಳನ್ನು ಬಿಟ್ಟುಬಿಡಬೇಕಾಗುತ್ತದೆ ಎಂದೇಕೆ ಅವರು ಭಾವಿಸಿದ್ದಾರೆ?

**ಶ್ರೀ ಶ್ರೀಪ್ರಕಾಶ** : ಶ್ರೀ ಸಂತಾನಮ್ ಅದರ ಹಿಂದೆ ಬಿದ್ದಿದ್ದಾರೆಂದು ಭಾವಿಸಿದ್ದೇನೆ.

**ಶ್ರೀ ಕೆ. ಸಂತಾನಮ್** : ಅವರು ತಮ್ಮ ಷೇರುಗಳನ್ನು ಘೋಷಿಸಿದರೆ, ನಾವೂ ತಿಳಿಯಬಹುದು ಎಂದಷ್ಟೆ.

**ಶ್ರೀ ಶ್ರೀಪ್ರಕಾಶ** : ಆತನ ಆಸ್ತಿಪಾಸ್ತಿ, ಷೇರುಗಳನ್ನು ಕುರಿತು ಯೋಚಿಸಬೇಕಿಲ್ಲ. ನಮಗೆ ಆತನಲ್ಲಿ ವಿಶ್ವಾಸವಿದ್ದರೆ, ಆ ಹುದ್ದೆಯಲ್ಲಿರಿಸಬೇಕು. ಇಲ್ಲದಿದ್ದರೆ ಬೇಡ. ನಾವು ಒಬ್ಬ ಭಿಕ್ಷುಕನನ್ನು ಇರಿಸಿದರೂ, ಅವನು ಭಾರಿ ಷೇರುದಾರನಂತೆಯೇ ಅಥವಾ ಮತ್ತಾರಂತೆಯೋ ಅಪ್ರಾಮಾಣಿಕನಾಗಬಹುದು.

ಪ್ರಾಮಾಣಿಕತೆಯು, ವ್ಯಕ್ತಿಯ ಹಣಕಾಸು ಸ್ಥಿತಿಯ ಮೇಲೆ ಅವಲಂಬಿಸಬೇಕಾದ ಅಗತ್ಯವಿಲ್ಲ. ಪ್ರಾಮಾಣಿಕತೆ ಎನ್ನುವುದು ಬೇರೆಯದೇ ವಿಷಯ. ನಮಗೆ ಬೇಕಾಗಿರುವುದು ನಮ್ಮ ರಾಷ್ಟ್ರಪತಿಗಳು ಸಂಶಯಾತೀತರಾಗಿರಬೇಕೆಂಬುದಷ್ಟೆ; ಅವರು ಅದಾಗಲೇ ಯಾವುದಾದರೂ ಆಸ್ತಿಯನ್ನು ಹೊಂದಿದ್ದಾರೆಯೇ ಅಥವಾ ಇಲ್ಲವೇ ಎಂಬುದು ಮುಖ್ಯವಲ್ಲ. ನಮ್ಮ ಯಾವುದೇ ಉಪಬಂಧದಿಂದ ರಾಷ್ಟ್ರಪತಿಯನ್ನು ಕಟ್ಟಿಹಾಕಬಾರದೆಂದು ನನ್ನ ಅಭಿಪ್ರಾಯ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ನಮ್ಮ ಸ್ನೇಹಿತರಾದ ಶ್ರೀ ಶ್ರೀಪ್ರಕಾಶ ಅವರಿಂದ ಈ ಮಾತುಗಳನ್ನು ಕೇಳುತ್ತಿರುವುದು ಆಶ್ಚರ್ಯಕರವಾಗಿದೆ. ಅವರು ತಿದ್ದುಪಡಿಯ ವ್ಯಾಪ್ತಿಯನ್ನು ಪೂರ್ಣ ತಪ್ಪಾಗಿ ಭಾವಿಸಿದ್ದಾರೆ ಎಂದು ಹೇಳಲಾರೆ. ಅವರನ್ನು ರಾಷ್ಟ್ರಪತಿಯಾಗಿ ಆಯ್ಕೆಮಾಡಿದರೆ, ಅವರು ತಮ್ಮೆಲ್ಲ ಆಸ್ತಿಪಾಸ್ತಿಗಳೊಂದಿಗೆ ಮುಂದುವರಿಯಲಿ. ಅವರು ವಾಣಿಜ್ಯ ಸದಸ್ಯರಾದರೆಂದು ಭಾವಿಸೋಣ. ಅವರು ರಾಷ್ಟ್ರಪತಿಯಾದ ಕೂಡಲೇ ಷೇರು ವ್ಯವಹಾರಮಾಡುವಂತಿಲ್ಲ. ಇಲ್ಲವಾದರೆ, ಸರ್ಕಾರದ ವಾಣಿಜ್ಯ ಸದಸ್ಯನು ಅಥವಾ ರಾಷ್ಟ್ರಪತಿಯು ಷೇರು ಮಾರುಕಟ್ಟೆಯಲ್ಲಿ ವ್ಯವಹರಿಸಿದರೆ, ಅವರು ವ್ಯವಹರಿಸುವ ಷೇರು ಸುಭದ್ರವೆಂಬ ಭಾವನೆ ಬರುತ್ತದೆ. ಮರುದಿನವೇ ಅವರು ಅವುಗಳನ್ನು ಮಾರಬಹುದು. ಷೇರುಗಳನ್ನು ಏಕಸ್ವಾಮ್ಯಕ್ಕೊಳಪಡಿಸುವ ಸಾಮರ್ಥ್ಯ ಅವರದಾಗುತ್ತದೆ. ಒಕ್ಕೂಟದ ರಾಷ್ಟ್ರಪತಿಗೆ ಹಾಗೆ ಅನೈತಿಕ ವ್ಯವಹಾರಗಳಲ್ಲಿ ತೊಡಗುವಂಥ ಅಧಿಕಾರ ನೀಡುತ್ತಿಲ್ಲ.

ನಮ್ಮ ಸ್ನೇಹಿತರಾದ ಶ್ರೀ ಸಂತಾನಮ್ ಅವರ ತಿದ್ದುಪಡಿಯು – ರಾಷ್ಟ್ರಪತಿಯು ತಾನು ಹೊಂದಿರುವ ಷೇರುಗಳನ್ನು ಘೋಷಿಸಬೇಕೆಂದು ಒತ್ತಾಯಿಸಬೇಕು ಎಂದಷ್ಟೆ. ನನ್ನ ಸ್ನೇಹಿತರಾದ ಶ್ರೀ ಶ್ರೀಪ್ರಕಾಶ ಅವರು ಯಾವುದೋ ಮೂಲೆಯಲ್ಲಿ ಷೇರುಗಳು ಅವರಿಗೆ ಗೊತ್ತಿಲ್ಲದಂತೆ ಲಾಭ ಗಳಿಸುತ್ತಿರಬಹುದು ಎನ್ನುತ್ತಾರೆ. ತನ್ನದೇ ವ್ಯವಹಾರಗಳ ಬಗ್ಗೆ ಅವರು ಅಷ್ಟು ನಿರ್ಲಕ್ಷ್ಯದಿಂದ ಇರುತ್ತಾರೆಂದು ನನಗನ್ನಿಸುವುದಿಲ್ಲ. ಆದರೆ, ರಾಷ್ಟ್ರಪತಿಯು ಹಾಗೆ ನಿರ್ಲಕ್ಷ್ಯವಿರಬೇಕೆನ್ನುತ್ತಾರೆ ಅವರು. ಇನ್ನು ವ್ಯಾಪಾರಕ್ಕೆ ಸಂಬಂಧಿಸಿದಂತೆ, ಅವರು ವ್ಯಾಪಾರಿ ಸಂಸ್ಥೆಯ ಗೌರವಾಧ್ಯಕ್ಷ ಅಥವಾ ನಿರ್ದೇಶಕರಾಗಿ ಕೇವಲ ಸಭಾಭತ್ಯೆ ಪಡೆಯುತ್ತಿರಬಹುದು. ಆದಾಗ್ಯೂ, ಒಂದು ಮಸೂದೆಗೆ ಅಂಗೀಕಾರ ನೀಡುವಾಗ, ಅದರ ಉಪಬಂಧಗಳು ತನ್ನ ಬ್ಯಾಂಕು ಅಥವಾ ಸಂಸ್ಥೆಗೆ ಧಕ್ಕೆ ತರುವಂತಿದ್ದರೆ, ಅದನ್ನು ಹಿಂದಕ್ಕೆ ಕಳುಹಿಸಲು ಪ್ರೇರಣೆ ಒದಗಿಸಬಹುದು. ನಾನು ಇಂಥ ಸ್ಥಿತಿ ಉದ್ಭವಿಸುತ್ತದೆ ಎನ್ನಲಾರೆ. ಆದರೆ, ರಾಷ್ಟ್ರಪತಿಯು ಇಂಥವುಗಳೊಂದಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಂಬಂಧ ಹೊಂದಿರಬಾರದೆಂಬುದರ ಅಗತ್ಯವನ್ನು ಒತ್ತಿ ಹೇಳುತ್ತದೆ.

ಮಾನ್ಯರೆ, ಅವರು ಪಕ್ಷದ ವ್ಯಕ್ತಿಯಾಗಿರುತ್ತಾರೆ ಎಂಬ ಬಗ್ಗೆ [illegible]ದರೆ, ಅವರು ಮರದ ತುಂಡೋ ಅಥವಾ ಮರದ ಉಪಕರಣವೋ ಆಗಿರುವ ಹೊರತು, ಇದು ಅಸಾಧ್ಯ. ಅವರು ಯಾವುದೋ ಒಂದು ಪಕ್ಷಕ್ಕೆ ಸೇರಿರಲೇಬೇಕಾಗುತ್ತದೆ. ಅವರು ಚುನಾಯಿತರಾದ ಮೇಲೆ ತಮ್ಮ ಹಿಂದಿನ ಪಕ್ಷಕ್ಕೆ ರಾಜಿನಾಮೆ ನೀಡಬೇಕು; ಹೊಂದಿರುವ ನಿಷ್ಠೆಯಿಂದ ಮುಕ್ತನಾಗಬೇಕು. ಅಷ್ಟನ್ನು ನಾವು ನಿರೀಕ್ಷಿಬಹುದೇ ಹೊರತು, ಪಕ್ಷದ ವ್ಯಕ್ತಿಯೇ ಆಗಿರಬಾರದೆನ್ನುವುದು ಅಸಾಧ್ಯ. ನಾನು ಯಾರಾದರೂ ಸಿಕ್ಕುತ್ತಾರೆಯೇ ಎಂದು ನೋಡುತ್ತಿದ್ದೇನೆ. ಆದರೆ, ಪಕ್ಷಕ್ಕೆ ಸೇರಿರದ ವ್ಯಕ್ತಿ ಸಿಗಲಾರನೆನ್ನಿಸುತ್ತದೆ. ಪಕ್ಷಕ್ಕೆ ಸೇರದ ವ್ಯಕ್ತಿ ಎಂದು ಒಬ್ಬ ಶಾಲಾ ಮಾಸ್ತರನನ್ನು ಮಾತ್ರ ಕಲ್ಪಿಸಿಕೊಳ್ಳಬಹುದಷ್ಟೆ. ಯಾವುದಾದರೂ ಪಕ್ಷಕ್ಕೆ ಸೇರಿರುವ ಜಿಲ್ಲಾಸಮಿತಿ ಅಧ್ಯಕ್ಷನ ಪರವಾಗಿ ಆತನೂ ಒಲವು ತೋರಿಸಬಹುದು. ಆದ್ದರಿಂದ, ಯಾವ ಅರ್ಥದಲ್ಲಿಯೂ ಪಕ್ಷಕ್ಕೆ ಸೇರದ ವ್ಯಕ್ತಿ ಸಿಗುವುದು ಅಸಾಧ್ಯ. ಒಕ್ಕೂಟದ ಅಥವಾ ಸಂಘದ ರಾಷ್ಟ್ರಪತಿಯಾದ ಮೇಲೆ, ಪಕ್ಷದೊಂದಿಗೆ ಹೊಂದಿರುವ ಎಲ್ಲ ಸಂಬಂಧಗಳನ್ನು ಬಿಟ್ಟುಬಿಟ್ಟರೆ ಸಾಕು. ಮಾನ್ಯರೆ, ಈ ಎಲ್ಲ ಮಿತಿಗಳು ಹಾಗೂ ಅರ್ಹತೆಗಳು ಸೂಕ್ತ ಆಡಳಿತಕ್ಕೆ, ಸೂಕ್ತ ವ್ಯಕ್ತಿಯ ಲಭ್ಯತೆಗೆ ಅಗತ್ಯ.

**ಮಾನ್ಯ ಸಭಾಧ್ಯಕ್ಷರು :** ಬೇರೆ ಯಾರೂ ಮಾತನಾಡುವವರಿಲ್ಲ. ಖಂಡದ ಮಂಡನೆಕಾರರು ಉತ್ತರ ರೂಪದಲ್ಲಿ ಏನಾದರೂ ಹೇಳುವುದಿದೆಯೇ?

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು :** ಮಾನ್ಯರೆ, ರಾಷ್ಟ್ರಪತಿಗಳ ವೇತನಗಳನ್ನು ಕುರಿತು ಸಾಕಷ್ಟು ಮಾತನಾಡಿಯಾಗಿದೆ. ಅವರು ಹೊಂದಿರಬಾರದ ಹುದ್ದೆಗಳ ಪಟ್ಟಿ ಮಾಡುವುದು ಕಷ್ಟ. ಒಂದು ಸಾಮಾನ್ಯ ತತ್ತ್ವವನ್ನು ವಿಧಿಸಬಹುದಷ್ಟೆ, ಅದೂ ತುಂಬ ಎಚ್ಚರಿಕೆಯಿಂದ. ಆ ತರುವಾಯ ಬಹುಮಟ್ಟಿಗೆ ಎಲ್ಲವೂ ಸಂಪ್ರದಾಯವನ್ನು ಅವಲಂಬಿಸಿರುತ್ತದೆ. ನೀವು ಉದ್ದದ ಪಟ್ಟಿ ಮಾಡಹೊರಟರೆ, ಅವರು ಮಾಡಬಹುದಾದ ಅನೇಕವನ್ನು ನೀವು ಬಿಟ್ಟುಬಿಡಬಹುದೆಂದಾಗುತ್ತದೆ. ಹೀಗಾಗಿ, ಸಂಪ್ರದಾಯವನ್ನು ಪಾಲಿಸುವುದು ಸೂಕ್ತ. ಮುಖ್ಯವಾಗಿ, ಲಾಭ ತರುವ ಹುದ್ದೆಯ ವ್ಯವಸ್ಥಾಪಕ ವರ್ಗದೊಂದಿಗೆ ಸಕ್ರಿಯ ಸಂಬಂಧ ಹೊಂದಿರಬಾರದು ಅಥವಾ ಸಹಯೋಗಿಯಾಗಿರಬಾರದು. ಈ ಆಧುನಿಕ ಜಗತ್ತಿನಲ್ಲಿ, ಅವರು ಶ್ರೀಮಂತನಾಗಿದ್ದರೆ ಕೆಲವು ಷೇರುಗಳನ್ನು ಹೊಂದಿರಬಹುದು. ಶ್ರೀ ಶ್ರೀಪ್ರಕಾಶ ಅವರಂತೆ ಅವರು ಭೂಮಾಲೀಕರಾಗಿರಬಹುದು. ಇಲ್ಲವೆ, ಇತರ ಆಸ್ತಿಪಾಸ್ತಿಯನ್ನು ಹೊಂದಿರಬಹುದು. ನನಗೆ ಕಾಣುವ ಮಟ್ಟಿಗೆ, ಶ್ರೀ ಶ್ರೀಪ್ರಕಾಶ ಅವರು ರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆಗೆ ನಿಲ್ಲುವುದನ್ನು ತಪ್ಪಿಸುವಂಥ ಯಾವುದೇ ಸಂಭವ ಇಲ್ಲ. ಒಂದು ವೇಳೆ ಹಾಗೆ ಆಗುವುದಾದರೆ, ಅದನ್ನು ಅನಾಹುತವೆಂದೇ ನಾನು ಭಾವಿಸುತ್ತೇನೆ. ಈ ವಿಷಯದಲ್ಲಿ ಹೆಚ್ಚು ಮುಂದುವರಿಯುವುದು ಬೇಡ. ಈ ವಿಷಯವನ್ನು ಕರಡು ತಯಾರಿಸುವವರಿಗೆ ಬಿಡೋಣ. ಸಂಪ್ರದಾಯವೂ ಬೆಳೆದು ಬರಲೆಂದು ಆಶಿಸೋಣ.

ಶ್ರೀ ಸಂತಾನಮ್ ಹೇಳಿದ ಒಂದು ವಿಷಯವನ್ನು ಒಪ್ಪಲು ನಾನು ಸಿದ್ಧನಿದ್ದೇನೆ. ಅದನ್ನು ಬರಹ ರೂಪದಲ್ಲಿರಿಸುವುದು ಅಗತ್ಯವಿಲ್ಲ. ಉನ್ನತ ಜವಾಬ್ದಾರಿಯುತ ಹುದ್ದೆಯಲ್ಲಿರುವ ವ್ಯಕ್ತಿಯು ವ್ಯಾಪಾರದೊಂದಿಗಿರುವ ಸಂಬಂಧ ಹಾಗೂ ಬಂಡವಾಳ ಮೊದಲಾದ ವಿವರಗಳನ್ನು ಬಹಿರಂಗಪಡಿಸಬೇಕೆಂಬುದು. ಆತ ರಾಷ್ಟ್ರಪತಿ ಇರಲಿ, ಮಂತ್ರಿ ಇರಲಿ, ಉನ್ನತ ಜವಾಬ್ದಾರಿಯುತ ಹುದ್ದೆಯಲ್ಲಿರುವ ಯಾರೇ ಆಗಲಿ – ಹೀಗೆ ಬಹಿರಂಗಪಡಿಸಿದರೆ ಅನುಕೂಲ (ಕೇಳಿ, ಕೇಳಿ). ಮಾನ್ಯರೆ, ಉಪಖಂಡ ೧ನ್ನು ಸ್ಪಷ್ಟಪಡಿಸುವ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಮಂಡಿಸಿರುವ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ.

ರಾಷ್ಟ್ರಪತಿಗಳ ವೇತನಗಳು ಮತ್ತು ಭತ್ಯೆಗಳ ವಿಷಯವಿದೆ. 'ಕಡಿಮೆ ಮಾಡುವ' ಪದಗಳಿಗೆ ಬದಲಾಗಿ ಬೇರೆ ಪದಗಳನ್ನು ಬಳಸಬೇಕೆಂಬ ಸಲಹೆ ಬಂದಿದೆ. ಪರಿಶೀಲನೆಯ ತರುವಾಯ 'ಕಡಿಮೆ ಮಾಡುವ' ಪದಗಳೇ ಸರಿ ಎಂಬ ತೀರ್ಮಾನಕ್ಕೆ ಬಂದಿದ್ದೇವೆ. ನಾವು 'ಬದಲಾಯಿಸು' ಅಥವಾ 'ಹೆಚ್ಚಿಸುವ ಅಥವಾ ಕಡಿಮೆ ಮಾಡುವ' ಪದಗಳನ್ನು ಬಳಸಬಹುದಿತ್ತು. ಆದರೆ, ಒಟ್ಟಾರೆಯಾಗಿ 'ಕಡಿಮೆ ಮಾಡುವ' ಪದವೆ ಒಳ್ಳೆಯದೆನಿಸಿತು. ಶಾಸನಸಭೆಗೆ ತನಗೆ ಬೇಕಾದ್ದನ್ನು ಮಾಡುವ ಅಧಿಕಾರವಿದೆ. ಆದರೆ, ರಾಷ್ಟ್ರಪತಿ ಎಂದು ಚುನಾಯಿಸಲಾಗುವ ವ್ಯಕ್ತಿಗೆ ಬಾಧಕವಾಗುವಂಥ ಅಧಿಕಾರವನ್ನು ಅದು ಚಲಾಯಿಸಬಾರದು. ಸಂಸತ್ತು ಇಚ್ಛಿಸದಿದ್ದರೆ, ಅವರ ಭತ್ಯೆ ಅಥವಾ ವೇತನಗಳನ್ನು ಹೆಚ್ಚಿಸುವ ಪ್ರಶ್ನೆ ಇಲ್ಲ. ಸಂಸತ್ತು ಏನನ್ನು ಮಾಡುವುದಕ್ಕೆ ತಡೆಯೊಡ್ಡುವ ಅಗತ್ಯವಿಲ್ಲ. ಆದರೆ ಸಂಸತ್ತು ಅಥವಾ ಜನತೆ ರಾಷ್ಟ್ರಪತಿಯ ಸ್ಥಾನಕ್ಕೆ ಸ್ವಲ್ಪಮಟ್ಟಿನ ಅಪಾಯ ಒಡ್ಡುವ ಸಾಧ್ಯತೆ ಇದೆ. ಆದ್ದರಿಂದ, ಅದನ್ನು 'ಕಡಿಮೆ ಮಾಡಬಾರದು' ಎಂದಿದ್ದೇವೆ.

ಈ ದಿನಮಾನಗಳಲ್ಲಿ ಬೆಲೆಯುಬ್ಬರದಿಂದಾಗಿ ವೇತನ, ಭತ್ಯೆಗಳನ್ನು ಬದಲಿಸಬೇಕಾದ ಪರಿಸ್ಥಿತಿ ಬರಬಹುದು; ಯಾರಿಗೆ ಗೊತ್ತು. ಆದ್ದರಿಂದ ಅಲ್ಲಿ ಯಾವುದೇ ಬದಲಾವಣೆ ಬೇಡ.

ಕೊನೆಯದಾಗಿ, ರಾಷ್ಟ್ರಪತಿಗಳು ಪಕ್ಷದ ವ್ಯಕ್ತಿಯಾಗಿರಬಾರದು ಎಂಬ ತಿದ್ದುಪಡಿ. ಇಂಥ ಪ್ರಸ್ತಾವದ ಬಗ್ಗೆ ನನಗೂ ಗುಟ್ಟಾಗಿ ಸಹಾನುಭೂತಿ ಇರುವುದು ನಿಜ. ಆದರೆ, ಅದು ಕಾರ್ಯಸಾಧುವಲ್ಲ. ಪಕ್ಷದ ವ್ಯಕ್ತಿ ಎಂದರೇನು? ರಾಜಕೀಯ ಚುನಾವಣೆಗಳನ್ನು ನಿರ್ವಹಿಸುವ ಭಾರಿ ರಾಜಕೀಯ ವ್ಯವಸ್ಥೆ ಎಂಬ ದೃಷ್ಟಿಯಿಂದಲೇ ಎಲ್ಲರೂ ಯೋಚಿಸುತ್ತಾರೆ. ನಿಮಗೆಲ್ಲರಿಗೂ ಈ ಬಗ್ಗೆ ವಿವರಿಸುವುದು ಅಸಾಧ್ಯ. ಎಲ್ಲ ಬಗೆಯ ಪಕ್ಷಗಳೂ ಇವೆ. ಚಿಕ್ಕದೋ–ದೊಡ್ಡದೋ ಪಕ್ಷಕ್ಕೆ ಸೇರಿದ ಕೂಡಲೇ ಯಾರೂ ಕೆಟ್ಟವರಾಗಿಬಿಡುವುದಿಲ್ಲ. ಎಲ್ಲರೂ ಒಂದಲ್ಲ ಒಂದು ಗುಂಪು ಅಥವಾ ಸಂಸ್ಥೆಯೊಂದಿಗೆ ಸಂಪರ್ಕವಿರಿಸಿಕೊಂಡಿರುತ್ತಾರೆ. ಮುಖ್ಯವೆಂದರೆ, ಒಮ್ಮೆ ರಾಷ್ಟ್ರಪತಿಯಾಗಿ ಚುನಾಯಿತನಾದ ಅನಂತರ, ಪಕ್ಷದ ವ್ಯಕ್ತಿಯಂತೆ ವರ್ತಿಸಬಾರದು. ಇದು ಒಟ್ಟಾರೆ ತತ್ತ್ವ. ಚುನಾವಣೆಯ ತರುವಾಯ ತಾನು ಸೇರಿದ ಪಕ್ಷದೊಂದಿಗೆ ಅವರ ಸಂಬಂಧವೇನು ಎನ್ನುವುದು ನನಗಿನ್ನು ಸ್ಪಷ್ಟವಾಗಿಲ್ಲ. ಆದಾಗ್ಯೂ ಇಂಥ ಸಮಸ್ಯೆ ಉದ್ಭವಿಸಲಾರದು. ತಾನು ಪಕ್ಷದ ವ್ಯಕ್ತಿಯಾಗಿರಲಿ ಅಥವಾ ಇಲ್ಲದಿರಲಿ, ಉನ್ನತ ಹುದ್ದೆಯಲ್ಲಿದ್ದವರು ನಡೆದುಕೊಳ್ಳಬೇಕಾದಂತೆ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು. ಹೀಗಾಗಿ ಮಾನ್ಯರೆ, ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿ ಹೊರತು ಬೇರಾವುದನ್ನೂ ಅಂಗೀಕರಿಸದಿರುವುದಕ್ಕಾಗಿ ವಿಷಾದಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನೀಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತಿದ್ದೇನೆ. ಮೊದಲಿಗೆ ಶ್ರೀ ನಜಿರುದ್ದೀನ್ ಅಹ್ಮದ್ ಅವರು ಮಂಡಿಸಿದ ತಿದ್ದುಪಡಿ :

"ಖಂಡ(೪)ರ ಉಪಖಂಡ(೨)ಕ್ಕೆ ಬದಲಾಗಿ ಈ ಮುಂದಿನದನ್ನು ಬಳಸುವುದು :

(೨) ರಾಷ್ಟ್ರಪತಿಯು ಒಕ್ಕೂಟದ ಅಥವಾ ಯಾವುದೇ ಪ್ರಾಂತೀಯ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ಅದರ ಅಡಿಯಲ್ಲಿ ಅಥವಾ ಯಾವುದೇ ವ್ಯಾಪಾರಿ ಸಂಸ್ಥೆ (ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ)ಯಲ್ಲಿ ಅಥವಾ ಅದರ ಅಡಿಯಲ್ಲಿ ಯಾವುದೇ ಗೌರವ ಸಾಮರ್ಥ್ಯದಲ್ಲಿ ಅಥವಾ ಯಾವುದೇ

ವೇತನ ಅಥವಾ ಭತ್ಯೆಗಾಗಿ ಯಾವುದೇ ಸ್ಥಾನವನ್ನು ಅಥವಾ ಹುದ್ದೆಯನ್ನು ಹೊಂದಿರತಕ್ಕುದಲ್ಲ."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ಕೆ.ಟಿ.ಎಂ. ಇಬ್ರಾಹಿಂ ಸಾಹಿಬ್ ಬಹಾದೂರ್ ಅವರ ತಿದ್ದುಪಡಿ :

"ಖಂಡ ೪ರ ಉಪಖಂಡ(೩)ರಲ್ಲಿನ 'ಒಕ್ಕೂಟ ಸಂಸತ್ತಿನ ಅಧಿನಿಯಮದ ಮೂಲಕ ನಿರ್ಧರಿಸಬಹುದಾದಂತೆ ಮತ್ತು ಆವರೆಗೆ, ಅಂಥ' ಪದಗಳನ್ನು ತೆಗೆದುಹಾಕುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಅದೇ ಸದಸ್ಯರಿಂದ ಮತ್ತೊಂದು ತಿದ್ದುಪಡಿ ಇದೆ.

"ಖಂಡ ೪ರಲ್ಲಿನ ಉಪಖಂಡ(೪)ರಲ್ಲಿನ 'ಕಡಿಮೆ ಮಾಡುವ' ಪದಕ್ಕೆ ಬದಲಾಗಿ 'ಮಾರ್ಪಾಡು ಮಾಡುವ' ಪದವನ್ನು ಬಳಸುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಶ್ರೀ ರಾಮನಾರಾಯಣ ಸಿಂಗ್ ಅವರದೊಂದು ತಿದ್ದುಪಡಿ ಇದೆ.

ಖಂಡ ೪ಕ್ಕೆ ಉಪಖಂಡ(೫) ಎಂದು ಈ ಮುಂದಿನದನ್ನು ಸೇರಿಸುವುದು:

"(೫) ರಾಷ್ಟ್ರಪತಿಯು ಪಕ್ಷದ ವ್ಯಕ್ತಿಯಾಗಿರಲೇಬಾರದು."

**ಶ್ರೀ ರಾಮನಾರಾಯಣ ಸಿಂಗ್** : ನನ್ನ ತಿದ್ದುಪಡಿಯನ್ನು ಒತ್ತಾಯಿಸುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಅವರು ತಮ್ಮ ತಿದ್ದುಪಡಿಯನ್ನು ಹಿಂದಕ್ಕೆ ಪಡೆಯಲು ಸದನವು ಅನುಮತಿಸುತ್ತದೆಂದು ಭಾವಿಸಿದ್ದೇನೆ.

**ಗೌರವಾನ್ವಿತ ಸದಸ್ಯರು** : ಆಗಬಹುದು.

ಈ ತಿದ್ದುಪಡಿಯನ್ನು ಸದನದ ಅನುಮತಿಯಂತೆ ಹಿಂದಕ್ಕೆ ಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಮಂಡಿಸಿದ ತಿದ್ದುಪಡಿ ಹೀಗಿದೆ :

"ಖಂಡ(೪)ರ ಉಪಖಂಡ(೧)ಕ್ಕೆ ಬದಲಾಗಿ ಈ ಮುಂದಿನದನ್ನು ಬಳಸುವುದು:

'ರಾಷ್ಟ್ರಪತಿಯು ಸಂಸತ್ತಿನ ಅಥವಾ ಯಾವುದೇ ಶಾಸನಸಭೆಯ ಸದಸ್ಯನಾಗಿರತಕ್ಕುದಲ್ಲ; ಒಂದು ವೇಳೆ ಅಂಥ ಸದಸ್ಯನು ರಾಷ್ಟ್ರಪತಿಯಾಗಿ ಚುನಾಯಿತನಾದರೆ, ಆತನು ಸಂಸತ್ತಿನ ಅಥವಾ ಸಂಬಂಧಪಟ್ಟ ಶಾಸನಸಭೆಯ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕುದು'."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಯಾದಂಥ ನಿರ್ಣಯವನ್ನು ಮತಕ್ಕೆ ಹಾಕಲಾಗಿದೆ.

ಖಂಡ ೪ ಅನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಮಾನ್ಯರೆ, ನಾನು ಮಂಡಿಸುತ್ತಿದ್ದೇನೆ:

"ಖಂಡ ೫. – ಆಕಸ್ಮಿಕ ಖಾಲಿ ಹುದ್ದೆಯನ್ನು ತುಂಬುವ ಚುನಾವಣೆಯೂ ಎಲ್ಲ ಚುನಾವಣೆಗಳಂತೆ ವಿವರವಾದ ಪ್ರಕ್ರಿಯೆಯಾಗಿದ್ದು, ಅದು ಆಕಸ್ಮಿಕವಾಗಿ ಆಗಿರಲಿ ಅಥವಾ ಇಲ್ಲದಿರಲಿ, ಅದಕ್ಕೆ ಸೂಕ್ತ ಉಪಬಂಧವನ್ನು ಕಲ್ಪಿಸಬೇಕಾಗಿದ್ದು, ಅದನ್ನು ಒಕ್ಕೂಟ ಶಾಸನಸಭೆಯ ಅಧಿನಿಯಮದ ನಿಯಂತ್ರಣಕ್ಕೆ ಬಿಡಲಾಗಿದೆ–

ಪರಂತು,

ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಚುನಾವಣೆಯನ್ನು, ಸಾಧ್ಯವಾದಷ್ಟು ಶೀಘ್ರವಾಗಿ ಅಥವಾ ಖಾಲಿ ಹುದ್ದೆ ಉಂಟಾದ ದಿನಾಂಕದಿಂದ ಆರು ತಿಂಗಳಿಗೆ ಮೀರದಂತೆ, ನಡೆಸತಕ್ಕುದು; ಮತ್ತು

ಆಕಸ್ಮಿಕ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ನಡೆಸುವ ಚುನಾವಣೆಯಲ್ಲಿ ಚುನಾಯಿತನಾಗುವ ವ್ಯಕ್ತಿಯು, ಐದು

ವರ್ಷಗಳ ಪೂರ್ಣ ಅವಧಿಯವರೆಗೆ ಹುದ್ದೆಯನ್ನು ಧಾರಣಮಾಡಲು ಹಕ್ಕುಳ್ಳವನಾಗತಕ್ಕುದು".

ಮಾನ್ಯರೆ, 'ಆಕಸ್ಮಿಕ' ಪದವನ್ನು ಇಲ್ಲಿ ಸಂತೋಷದಿಂದೇನೂ ಬಳಸಿರುವುದಿಲ್ಲ. ಆ ಪದವನ್ನು ತೆಗೆದುಹಾಕಲು ಮಂಡಿಸುವ ತಿದ್ದುಪಡಿಯನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈಗ ನಾನು ತಿದ್ದುಪಡಿಗಳನ್ನು ಕೈಗೆತ್ತಿಕೊಳ್ಳುತ್ತೇನೆ.

(ಶ್ರೀಯುತರಾದ ಬಿ.ಎಂ. ಗುಪ್ತೆ, ಎ.ಕೆ. ಘೋಷ್, ರಾಜ್‌ಕೃಷ್ಣ ಬೋಸ್, ಬಿಸ್ವನಾಥ್ ದಾಸ್ ಮತ್ತು ಎಸ್. ನಾಗಪ್ಪ ತಮ್ಮ ತಿದ್ದುಪಡಿ ಸಂ. ೧೫೧ರಿಂದ ೧೫೫ರವರೆಗೆ ಮಂಡಿಸಲಿಲ್ಲ).

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ನಾನು ಮಂಡಿಸಲು ಅನುಮತಿ ಕೋರುತ್ತೇನೆ :

"ಖಂಡ ೫ರ ನಿಬಂಧನೆ (ಬಿ)ಯಲ್ಲಿನ 'ಚುನಾವಣೆಯಲ್ಲಿ' ಪದಗಳನ್ನು ತೆಗೆದುಹಾಕುವುದು."

ಮಾನ್ಯರೆ, ಇದು ಶುದ್ಧಾಂಗವಾಗಿ ಕರಡು ತಯಾರಿಕೆಯಲ್ಲಿನ ತಿದ್ದುಪಡಿ, ಇದನ್ನು ಅಂಗೀಕರಿಸಬೇಕು.

ಆ ನಿಬಂಧನೆ ಹೀಗಿದೆ :

"ಚುನಾವಣೆಯಲ್ಲಿ ರಾಷ್ಟ್ರಪತಿಯಾಗಿ ಚುನಾಯಿತನಾದ ವ್ಯಕ್ತಿಯು"

'ಚುನಾಯಿತನಾದ' ಪದಗಳು ಅವನು ಚುನಾಯಿತನೇ ಆಗಿರುವುದರಿಂದ ಅಗತ್ಯವಿರುವುದಿಲ್ಲ. ರಾಷ್ಟ್ರಪತಿಯಾಗಿ ಚುನಾಯಿತನಾದ ವ್ಯಕ್ತಿಯು ಆತನೇ ಆಗಿರುವುದರಿಂದ, ಆತನು ಚುನಾವಣೆಯಲ್ಲಿ ಚುನಾಯಿತನಾಗಿರುವನೆಂಬುದು ಸ್ಪಷ್ಟ. ರಾಷ್ಟ್ರಪತಿಯಾಗಿ ಚುನಾಯಿತರಾಗಿದ್ದಾರೆ ಎಂದ ಕೂಡಲೇ 'ಚುನಾವಣೆಯಲ್ಲಿ' ಎಂಬುದು ಧ್ವನಿತವಾಗುತ್ತದೆ. ಆದ್ದರಿಂದ ಅದರ ಅಗತ್ಯವಿರುವುದಿಲ್ಲ. ಈಗಾಗಲೇ ಹೇಳಿದಂತೆ ನನ್ನ ತಿದ್ದುಪಡಿ ಕರಡು ತಯಾರಿಕೆಗೆ ಸಂಬಂಧಪಟ್ಟ ತಿದ್ದುಪಡಿ. ಅದನ್ನು ಅಂಗೀಕರಿಸಬೇಕು.

(ಶ್ರೀಯುತರಾದ ಕೆ. ಚೆಂಗಲರಾಯರೆಡ್ಡಿ, ಶಿಬನ್‌ಲಾಲ್ ಸಕ್ಸೇನ, ಗೋಕುಲಭಾಯಿ ಡಿ. ಭಟ್, ಡಿ.ಎಚ್. ಚಂದ್ರಶೇಖರಯ್ಯ ಮತ್ತು ಸಿ. ಸುಬ್ರಹ್ಮಣ್ಯಂ ಅವರು ತಮ್ಮ ೧೫೮, ೧೫೯, ೧೬೧, ೧೬೨ ಹಾಗೂ ೧೬೩ ಸಂ. ಯ ತಿದ್ದುಪಡಿಗಳನ್ನು ಮಂಡಿಸಲಿಲ್ಲ).

**ಗೌರವಾನ್ವಿತ ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಗೌರವಾನ್ವಿತ ಮಂಡನೆಕಾರರು, ಈ ಖಂಡದಲ್ಲಿ 'ಆಕಸ್ಮಿಕವಾಗಿ ಖಾಲಿಯಾದ' ಪದಗಳ ಬಳಕೆ ಕುರಿತು ಈಗಾಗಲೇ ಉಲ್ಲೇಖಿಸಿರುತ್ತಾರೆ. ಈ ಪದ ಪ್ರಯೋಗವು ಅನೇಕ ತೊಂದರೆಗಳಿಗೆ ಆಸ್ಪದಮಾಡಿಕೊಟ್ಟಿದ್ದು, ಅವುಗಳನ್ನು ನಿವಾರಿಸಬೇಕಾಗಿದೆ. 'ಆಕಸ್ಮಿಕ ಖಾಲಿ ಹುದ್ದೆ' ಎಂದರೆ ಒಂದು ನಿರ್ದಿಷ್ಟ ಹುದ್ದೆ, ನಿರ್ದಿಷ್ಟಪಡಿಸಿದ ಅನ್ವಯ ಮಧ್ಯದಲ್ಲಿ ಸಾಮಾನ್ಯವಾಗಿ ಸಂಭವಿಸುವ ಹುದ್ದೆಗಳಾಗಿರುತ್ತವೆ. ಆ ಹುದ್ದೆಯನ್ನು ಭರ್ತಿಮಾಡಿದರೆ, ಆ ಹುದ್ದೆ ಪಡೆಯುವ ವ್ಯಕ್ತಿಯು ಉಳಿಕೆ ಅವಧಿಯವರೆಗೆ ಮಾತ್ರ ಹುದ್ದೆಯಲ್ಲಿರುತ್ತಾನೆ. ಈ ಖಂಡದ ಒಟ್ಟಾರೆ ಉದ್ದೇಶವು ಖಾಲಿ ಹುದ್ದೆಗೆ ಆಯ್ಕೆಯಾಗುವ ವ್ಯಕ್ತಿಯು ಹುದ್ದೆಯ ಪೂರ್ಣಾವಧಿ ಅನುಭವಿಸುತ್ತಾನೆ. ಆದ್ದರಿಂದ ಈ ಖಂಡದ ಕರಡನ್ನು ಈಗಿರುವುದಕ್ಕಿಂತ ಹೆಚ್ಚು ಸುಸ್ಪಷ್ಟವಾಗುವಂತೆ ಸಿದ್ಧಪಡಿಸಬೇಕು. ಈ ಉದ್ದೇಶದಿಂದ ನಾನು ಮುಂದಿನ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ.

"ಖಂಡ ೫ಕ್ಕೆ ಬದಲಾಗಿ ಮುಂದಿನದನ್ನು ಬಳಸುವುದು:

'*೫. ರಾಷ್ಟ್ರಪತಿ ಹುದ್ದೆಯಲ್ಲಿ ಸಂಭವಿಸುವ ಖಾಲಿ ಹುದ್ದೆಗಳು* – ರಾಷ್ಟ್ರಪತಿ ಹುದ್ದೆಯಲ್ಲಿ ಸಂಭವಿಸುವ ಖಾಲಿ ಹುದ್ದೆಗಳನ್ನು, ಅವು ಅವರಿಗೆ ಮುಂಚೆ ಅಥವಾ ಹುದ್ದೆದಾರನ ಸಾಮಾನ್ಯ ಅವಧಿಯ ಕೊನೆಯಲ್ಲಿ ಭರ್ತಿ ಮಾಡಲು ಚುನಾವಣೆ ನಡೆಸಲು ಉಪಬಂದವನ್ನು ಕಲ್ಪಿಸಿ, ಚುನಾವಣೆಗಳ ಸವಿವರವಾದ ಕಾರ್ಯವಿಧಾನವನ್ನು ಒಕ್ಕೂಟ ಶಾಸನಸಭೆಯ ಅಧಿನಿಯಮದ ನಿಯಂತ್ರಣಕ್ಕೆ ಬಿಡತಕ್ಕುದು.

ಪರಂತು, ನಿರ್ದಿಷ್ಟ ಹುದ್ದೆದಾರನ ಸಾಮಾನ್ಯ ಅವಧಿ ಕೊನೆಗೊಳ್ಳುವ ಮುನ್ನವೇ ಉಂಟಾಗುವ ಖಾಲಿ ಹುದ್ದೆಯ ಸಂದರ್ಭದಲ್ಲಿ –

ಎ) ಖಾಲಿ ಹುದ್ದೆ ಭರ್ತಿ ಮಾಡುವ ಚುನಾವಣೆಯನ್ನು ಸಾಧ್ಯವಾದಷ್ಟು ಶೀಘ್ರವಾಗಿ ಅಥವಾ ಖಾಲಿ ಹುದ್ದೆ ಉಂಟಾದ ದಿನಾಂಕದಿಂದ ಆರು ತಿಂಗಳಿಗೆ ಮೀರದಂತೆ ನಡೆಸತಕ್ಕುದು.

ಮತ್ತು

ಬಿ) ಅಂಥ ಚುನಾವಣೆಯಲ್ಲಿ ರಾಷ್ಟ್ರಪತಿಯಾಗಿ ಚುನಾಯಿತನಾಗುವ ವ್ಯಕ್ತಿಯು ಐದು ವರ್ಷಗಳ ಪೂರ್ಣಾವಧಿಯವರೆಗೆ ಹುದ್ದೆಯನ್ನು ಹೊಂದಿರತಕ್ಕುದು."

ಇದನ್ನು ವಿವರಿಸಲು ಹೆಚ್ಚಿನ ಮಾತುಗಳ ಅಗತ್ಯವಿಲ್ಲವೆಂದು ಭಾವಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ತಿದ್ದುಪಡಿಗಳನ್ನು ಮಂಡಿಸಲಾಗಿದೆ. ತಿದ್ದುಪಡಿಗಳು ಹಾಗೂ ನಿರ್ಣಯಗಳು ಈಗ ಚರ್ಚೆಗೆ ಮುಕ್ತವಾಗಿವೆ.

**ಶ್ರೀ ಜಗತ್ ನಾರಾಯಣ ಲಾಲ್** (ಬಿಹಾರ್ : ಸಾಮಾನ್ಯ) : ಮಾನ್ಯರೆ, ಶ್ರೀ ನಜಿರುದ್ದೀನ್ ಅಹ್ಮದ್ ಅವರು ಮಂಡಿಸಿದ ತಿದ್ದುಪಡಿಯ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಅವರು ಪ್ರಸ್ತಾವಿಸಿದ ತಿದ್ದುಪಡಿಯು ಕೇವಲ ಕರಡು ತಯಾರಿಕೆಗೆ ಸಂಬಂಧಿಸಿದ ತಿದ್ದುಪಡಿ ಎಂದು ಭಾವಿಸಿದ್ದಾರೆ; ಆದರೆ, ಅದು ಹಾಗಲ್ಲ. ವಾಸ್ತವವಾಗಿ ಖಾಲಿ ಹುದ್ದೆಯನ್ನು ಅನೇಕ ರೀತಿಗಳಲ್ಲಿ ಭರ್ತಿಮಾಡಬಹುದು. ನಿಯತ ಚುನಾವಣೆ ಹೊರತಾಗಿ, ಖಾಲಿ ಹುದ್ದೆಯನ್ನು ನಾಮನಿರ್ದೇಶನ ಅಥವಾ ಅನ್ಯಥಾ ಭರ್ತಿ ಮಾಡಿದರೆ, ಆಗ ಆ ವ್ಯಕ್ತಿಯು ಪೂರ್ಣಾವಧಿ ಹುದ್ದೆ ಧಾರಣ ಮಾಡಲು, ಅರ್ಹನಾಗಿರುವುದಿಲ್ಲ. ಆದ್ದರಿಂದ ಮಾನ್ಯರೆ, ಶ್ರೀ ನಜಿರುದ್ದೀನ್ ಅಹ್ಮದ್ ಅವರು ಪ್ರಸ್ತಾವಿಸಿದ ತಿದ್ದುಪಡಿಯು ಅಂಗೀಕರಿಸಬಹುದಾದ ತಿದ್ದುಪಡಿ ಅಲ್ಲ.

**ಮಾನ್ಯ ಸಭಾಧ್ಯಕ್ಷರು** : ಪ್ರಸ್ತಾವನೆಯ ಬಗ್ಗೆ ಬೇರೆ ಯಾರೂ ಮಾತನಾಡುವವರಿಲ್ಲ. ಮಂಡನೆಕಾರರು ಉತ್ತರ ನೀಡಬಹುದು.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಮಾನ್ಯರೆ, ನಾನು ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯನ್ನು ಅಂಗೀಕರಿಸುತ್ತೇನೆ ಅಷ್ಟೇ.

**ಮಾನ್ಯ ಸಭಾಧ್ಯಕ್ಷರು** : ಹಾಗಾದರೆ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ತಿದ್ದುಪಡಿಯು ಹೀಗಿದೆ :

"ಖಂಡ(೫)ರ ನಿಬಂಧನೆ(ಬಿ)ಯಲ್ಲಿನ 'ಚುನಾವಣೆಯಲ್ಲಿ' ಪದವನ್ನು ತೆಗೆದುಹಾಕುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಸರ್ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರ ತಿದ್ದುಪಡಿಯೊಂದಿಗೆ ಅದನ್ನು ಮಂಡನೆಕಾರರು ಅಂಗೀಕರಿಸಿದ್ದಾರೆ. ಆದರೆ ಸದನವು ಅಂಗೀಕರಿಸಬೇಕಾಗಿದೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿಯು ಸ್ವತಂತ್ರ ಖಂಡವಾಗುತ್ತದೆ. ತಿದ್ದುಪಡಿಯಾದಂತೆ ಖಂಡ ೫ಅನ್ನು ಸದನದ ಮತಕ್ಕೆ ಹಾಕುತ್ತೇನೆ.

ತಿದ್ದುಪಡಿಯಾದಂತೆ ಖಂಡ ೫ ಅನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ಅಪರಾಹ್ನ ೧ ಗಂಟೆ. ಸದನವನ್ನು ನಾಳೆ ಬೆಳಗ್ಗೆ ೧೦ ಗಂಟೆಯವರೆಗೆ ಮುಂದೂಡಲಾಗಿದೆ.

ಸಭೆಯನ್ನು ೨೫ನೇ ಜುಲೈ ೧೯೪೭ರ ಶುಕ್ರವಾರ ಬೆಳಗ್ಗೆ ೧೦ ಗಂಟೆಯವರೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ.]*